ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಸಂಪುಟ 5 ಸಂಚಿಕೆ 18

ಮೇ 1, 2011

ಕನ್ನಡ ವಾರಪತ್ರಿಕೆ

ರೂ. 5/-

ಪುಟ 16

Blog : janashakthi.wordpress.com
e-mail : js_weekly@yahoo.com

ಜನತೆಯಲ್ಲಿ ಮಡುಗಟ್ಟಿದ ಅತೃಪ್ತಿ, ಆಕ್ರೋಶ

ಕೇಂದ್ರ - ರಾಜ್ಯ ಸರ್ಕಾರಗಳ ವಿರುದ್ಧ 126 ತಾಲ್ಲೂಕು ಕಛೇರಿ ಮುತ್ತಿಗೆ



ಕಿವುಡು ಸರ್ಕಾರಗಳಿಗೆ ಎಚ್ಚರಿಕೆ

ಅಮೆರಿಕಾ ಅಧಿಪತ್ಯಕ್ಕೆ ಸವಾಲು : ಜಾಗತಿಕ ರಾಜಕೀಯದಲ್ಲಿ 'ಬ್ರಿಕ್ಸ್'



ಸುಪ್ರೀಂಕೋರ್ಟ್ ಸಿಇಸಿ ವರದಿ ದೃಢೀಕರಣ :

'ಅಕ್ರಮ ಗಣಿಗಾರಿಕೆಗೆ ಬಿಜೆಪಿ ಸರ್ಕಾರವೇ ಹೊಣೆ'



ಸಂದರ್ಶನ :
ಕೇರಳ - ಬಂಗಾಲದಲ್ಲಿ ಎಡಶಕ್ತಿಗಳ ಗೆಲುವು ಮಹತ್ವದ್ದು




ಬಾಬಾ ಆಸ್ತಿ ಸುತ್ತ ಚೋರ ಸಾಮ್ರಾಜ್ಯ

ಭ್ರಷ್ಟರ ರಕ್ಷಣೆಗೆ ಧರ್ಮದಂಡ ಎತ್ತಿದ ಮಠಾಧೀಶರು

ಕೇರಳ ಮತ್ತು ಪಶ್ಚಿಮ ಬಂಗಾಳದಲ್ಲಿ ಎಡಪಕ್ಷಗಳ ಜಯ, ಎಡ ಮತ್ತು ಪ್ರಜಾಸತ್ತಾತ್ಮಕ ಪರ್ಯಾಯ ಶಕ್ತಿಯನ್ನು ಬಲಿಷ್ಠಗೊಳಿಸಲಿದೆ

■ ಪ್ರಕಾಶ್ ಕಾರಟ್

ಐದು ರಾಜ್ಯಗಳ ಚುನಾವಣೆ ಫಲಿತಾಂಶಗಳನ್ನು ಗಮನಿಸುವುದಾದರೆ, ಅದರಲ್ಲೂ ಪ.ಬಂಗಾಳ ಮತ್ತು ಕೇರಳ ಚುನಾವಣಾ ಫಲಿತಾಂಶಗಳು ಎಡಪಕ್ಷಗಳಿಗೆ ತುಂಬಾ ಮುಖ್ಯವಾದುದಾಗಿದೆ. ಕೇರಳ ಮತ್ತು ಪ.ಬಂಗಾಳದಲ್ಲಿ ಎಡರಂಗ ಗೆಲುವು ಸಾಧಿಸಿದರೆ ರಾಷ್ಟ್ರಮಟ್ಟದಲ್ಲಿ ಎಡ ಮತ್ತು ಪ್ರಜಾಸತ್ತಾತ್ಮಕ ಪರ್ಯಾಯವನ್ನು ಬಲಿಪಡಿಸಲು ಎಡಪಕ್ಷಗಳು ಮುಂದುವರೆಸಿರುವ ಹೋರಾಟಕ್ಕೆ ಇನ್ನಷ್ಟು ಶಕ್ತಿ ತುಂಬಲಿದೆ. ಹಾಗಾಗಿ ಈ ಹೋರಾಟಕ್ಕೆ ಈ ಚುನಾವಣೆಗಳು ಇನ್ನಷ್ಟು ಪ್ರೇರಣೆ ನೀಡಲಿದೆ ಎಂದು ನಾನು ಭಾವಿಸಿದ್ದೇನೆ ಎಂದಿರುವ ಸಿಪಿಎಂ ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಕಾರಟ್ ಜೊತೆ ನಡೆಸಿದ ಸಂದರ್ಶನ ಇಲ್ಲಿದೆ.



ಪ್ರ: ಈಗಾಗಲೆ ಮತದಾನ ಮುಗಿದಿರುವ ಕೇರಳ, ತಮಿಳುನಾಡು ಮತ್ತು ಅಸ್ಸಾಂ ಫಲಿತಾಂಶಗಳ ಕುರಿತು ಯಾವ ಅಂದಾಜು ಹೊಂದಿದ್ದೀರಿ?

ಪ್ರಕಾಶ್: ಈ ಮೂರು ರಾಜ್ಯಗಳಲ್ಲಿ ಏಕರೀತಿಯ ಫಲಿತಾಂಶ ನಿರೀಕ್ಷಿಸಿದ್ದು ಮತದಾರರು ಕಾಂಗ್ರೆಸ್ ಮೈತ್ರಿಕೂಟಗಳನ್ನು ತಿರಸ್ಕರಿಸಲಿದ್ದಾರೆ. ತಮಿಳುನಾಡಿನಲ್ಲಿ ಕಾಂಗ್ರೆಸ್, ಡಿಎಂಕೆ ಜೊತೆ ಮೈತ್ರಿ ಮಾಡಿಕೊಂಡಿದೆ. ಅಸ್ಸಾಂನಲ್ಲಿ ಬೋಡೋ ಪೀಪಲ್ಸ್ ಫ್ರಂಟ್ ಜೊತೆ ಮೈತ್ರಿ ಮಾಡಿಕೊಂಡಿದೆ. ಕೇರಳದಲ್ಲಿ ಯುಡಿಎಫ್ ನೇತೃತ್ವ ವಹಿಸಿದೆ. ಪ್ರತ್ಯೇಕವಾಗಿ ಕೇರಳದಲ್ಲಿ ಹೇಳುವುದಾದರೆ ಕಳೆದ ಐದು ವರ್ಷಗಳಿಂದ ಎಲ್‌ಡಿಎಫ್ ಅಧಿಕಾರದಲ್ಲಿದ್ದು, ಅಲ್ಲಿ ಅಧಿಕಾರ ವಿರೋಧಿ ಅಲೆ ಇಲ್ಲ. ಹಾಗಾಗಿ ಎಲ್‌ಡಿಎಫ್ ಸರ್ಕಾರ ಮತ್ತೆ ಅಧಿಕಾರಕ್ಕೆ ಬರುವ ನಿರೀಕ್ಷೆ ಹೊಂದಿದ್ದೇವೆ.

ಪ್ರ: ಈ ವಿಧಾನಸಭೆ ಚುನಾವಣೆಯಲ್ಲಿ ಭ್ರಷ್ಟಾಚಾರ, ಬೆಲೆ ಏರಿಕೆ ಪ್ರಮುಖ ವಿಷಯಗಳಾಗಿದ್ದವು. ಹೀಗಿರುವಾಗ ಕೇರಳ ಚುನಾವಣೆಯಲ್ಲಿ ಎಡರಂಗದ ಮೇಲೆ ಇದರ ಪರಿಣಾಮವೇನು?

ಪ್ರಕಾಶ್: ರಾಷ್ಟ್ರೀಯ ಮಟ್ಟದಲ್ಲಿಯೂ ಇವು ತುಂಬಾ ಪ್ರಮುಖ ವಿಷಯಗಳು. ರಾಜ್ಯಗಳಲ್ಲೂ ಈ ವಿಷಯಗಳು ಅಷ್ಟೇ ಪ್ರಾಮುಖ್ಯತೆ ಹೊಂದಿವೆ. ವಾಸ್ತವವಾಗಿ ಹೇಳುವುದಾದರೆ ಜನ ಇದರ ವಿರುದ್ಧ ಪ್ರತಿಭಟನೆಗಳನ್ನು ನಡೆಸಿದ್ದಾರೆ. ಈ ಎರಡೂ ವಿಷಯಗಳಲ್ಲಿ ಎಡರಂಗಕ್ಕೆ ಹೆಚ್ಚು ಸಹಕಾರಿಯಾಗಲಿದೆ. ಏಕೆಂದರೆ ಕಾಂಗ್ರೆಸ್‌ನ ಇಮೇಜ್, ಅದರಲ್ಲೂ ಯುಪಿಎ ಸರ್ಕಾರ ಭ್ರಷ್ಟಾಚಾರದ ಅತ್ಯಂತ ಕೀಳುಮಟ್ಟಕ್ಕೆ ಇಳಿದಿದೆ. ಕೇರಳದಲ್ಲೂ ಯುಡಿಎಫ್ ತನ್ನ ಈ ಹಿಂದಿನ ಹಗರಣಗಳಿಂದ ನಲುಗುತ್ತಿದೆ. ಚುನಾವಣೆಗೆ ಮೊದಲು ಯುಡಿಎಫ್‌ನ ಮಾಜಿ ಮಂತ್ರಿಯೊಬ್ಬರಿಗೆ ಸುಪ್ರೀಂ ಕೋರ್ಟ್ ಒಂದು ವರ್ಷ ಜೈಲು ಶಿಕ್ಷೆ ವಿಧಿಸಿತು. ಮುಖ್ಯಮಂತ್ರಿ ಅಚ್ಯುತಾನಂದನ್ ಅವರೇ ಪ್ರಕರಣ ಕುರಿತು ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿದ್ದರು. ಚುನಾವಣೆಯಲ್ಲಿ ಈ ವಿಷಯ ಹೆಚ್ಚು ಪ್ರಾಮುಖ್ಯತೆ ಪಡೆದುಕೊಂಡಿತು. ಕಾಂಗ್ರೆಸ್‌ನ ಭ್ರಷ್ಟಾಚಾರಕ್ಕೆ ಹೋಲಿಸಿದರೆ ಎಡರಂಗದ ಸಾಧನೆ ತದ್ವಿರುದ್ಧವಾಗಿದೆ. ಇದು ಕೇರಳದ ಮತದಾರನ ಮೇಲೆ ಪರಿಣಾಮ ಬೀರಿದೆ ಎಂಬುದು ನನ್ನ ಭಾವನೆಯಾಗಿದೆ.

ಪ್ರ: ಈ ವಿಷಯಗಳು ಪ.ಬಂಗಾಳದ ಚುನಾವಣೆಯಲ್ಲೂ ಪ್ರಮುಖ ಪಾತ್ರ ವಹಿಸಲಿದೆಯೇ?

ಪ್ರಕಾಶ್: ಹೌದು. ವಿಶೇಷವಾಗಿ 2ಜಿ ಹಗರಣ ಸ್ವತಂತ್ರ ಭಾರತದಲ್ಲಿ ಅತಿದೊಡ್ಡ ಹಗರಣವಾಗಿದೆ. ಇಡೀ ದೇಶದ ಜನ ಇದರ ಬಗ್ಗೆ ಹಿಂದೆಂದಿಗಿಂತಲೂ ಹೆಚ್ಚು ಜಾಗೃತರಾಗಿದ್ದಾರೆ. ಉದಾಹರಣೆಗೆ ತಮಿಳುನಾಡಿನಲ್ಲಿ ಪ್ರತಿಹಳ್ಳಿ, ಪ್ರತಿ ವ್ಯಕ್ತಿಗೂ 2ಜಿ ಹಗರಣದ ಬಗ್ಗೆ ಗೊತ್ತು. ಹಾಗಾಗಿ ಬಂಗಾಳದ ಜನತೆಯೂ ದೇಶದಲ್ಲಿ ಏನೆಲ್ಲಾ ನಡೆಯುತ್ತಿದೆ ಎಂಬುದನ್ನು ಅರಿತಿದ್ದಾರೆ ಎಂಬುದು ನನ್ನ ಅನಿಸಿಕೆಯಾಗಿದೆ. ಎಡರಂಗವೂ ಈ ವಿಷಯವನ್ನು ಪ್ರಮುಖ ವಿಷಯವಾಗಿ ತೆಗೆದುಕೊಂಡಿದೆ. ಹಾಗಾಗಿ ಕೇಂದ್ರದಲ್ಲಿ ಕಾಂಗ್ರೆಸ್ ನೇತೃತ್ವದ ಯುಪಿಎ, ಮೈತ್ರಿಯ ಭಾಗವಾದ ತೃಣಮೂಲ ಮತ್ತು ಅದರ ಆಡಳಿತದ ಬಗ್ಗೆ ಜನತೆ ತಿಳಿದಿದ್ದಾರೆ.

ಪ್ರ: ಏಳನೆ ಬಾರಿಗೆ ಅಧಿಕಾರಕ್ಕೆ ಬಂದ ಎಡರಂಗ ಸರ್ಕಾರ ಸಾಕಷ್ಟು ಪ್ರಗತಿ ಸಾಧಿಸಲಿಲ್ಲ. ಹಾಗೂ ಈ ಅವಧಿ ನಂದಿಗ್ರಾಮದಂತಹ ಭೀಕರ ಘಟನೆಗಳಿಗೆ ಸಾಕ್ಷಿಯಾಯಿತು ಎಂಬ ಆಪಾದನೆಗಳಿವೆ. ಈ ಕುರಿತು ನಿಮ್ಮ ಪ್ರತಿಕ್ರಿಯೆ ಏನು?

ಪ್ರಕಾಶ್: ಏಳನೇ ಬಾರಿಗೆ ಅಧಿಕಾರಕ್ಕೆ ಬಂದ ಎಡರಂಗದ ಒಟ್ಟಾರೆ ಸಾಧನೆಯನ್ನು ಕಾಣಬೇಕು. ಕಳೆದ ಐದು ವರ್ಷಗಳಲ್ಲಿ ಎಡರಂಗ ಸರ್ಕಾರ ಭೂ ರಹಿತರಿಗೆ 20 ಸಾವಿರ ಎಕರೆ ಭೂಮಿ ಮಂಜೂರು ಮಾಡಿದೆ. ರಾಷ್ಟ್ರಮಟ್ಟದಲ್ಲಿ ಕೃಷಿ ಉತ್ಪಾದಕತೆ ಕುಂಠಿತಗೊಂಡರೆ ಪ.ಬಂಗಾಳದಲ್ಲಿ ಉತ್ಪಾದಕತೆಯನ್ನು ಕಾಯ್ದುಕೊಳ್ಳಲಾಗಿದೆ. ಉತ್ಪಾದಕತೆ ರಾಷ್ಟ್ರೀಯ ಸರಾಸರಿಗಿಂತಲೂ ಹೆಚ್ಚಾಗಿದೆ. ಎರಡನೆಯದಾಗಿ ಬೆಲೆ ಏರಿಕೆಯಿಂದ ಜನತೆ ಎದುರಿಸುತ್ತಿರುವ ಸಮಸ್ಯೆಗಳ ನಿವಾರಣೆಗೆ ಸಾಕಷ್ಟು ಕ್ರಮಗಳನ್ನು ಕೈಗೊಂಡಿದೆ. 2 ರೂ.ಗೆ ಕೆ.ಜಿ ಅಕ್ಕಿ ವಿತರಣಾ ಯೋಜನೆಯನ್ನು ಜಾರಿಗೆ ತಂದಿತು. ಈ ಯೋಜನೆಯನ್ನು ಇನ್ನಷ್ಟು ಸಮುದಾಯಕ್ಕೆ ವಿಸ್ತರಿಸುವ ಚಿಂತನೆ ನಡೆಸಿದೆ. ಬಿಪಿಎಲ್ ಸೌಲಭ್ಯಗಳನ್ನು ಇನ್ನಷ್ಟು ಹೆಚ್ಚಿಸುವ ಯೋಜನೆ ಹೊಂದಿದೆ. ಮುಚ್ಚಿರುವ ಕಾರ್ಖಾನೆಗಳ ಕಾರ್ಮಿಕರಿಗೆ ತಿಂಗಳಿಗೆ 1,500 ರೂ. ಗೌರವಧನ ನೀಡಲಾಗುತ್ತಿದೆ. ಅಸಂಘಟಿತ ಕ್ಷೇತ್ರದ ಕಾರ್ಮಿಕರಿಗೂ ಭವಿಷ್ಯನಿಧಿ ಯೋಜನೆಯನ್ನು ವಿಸ್ತರಿಸಲಾಗಿದೆ. ಹಾಗಾಗಿ ಕೇಂದ್ರ ಸರ್ಕಾರದ ನೀತಿಗಳು ಹಣದುಬ್ಬರ ಮತ್ತು ಬೆಲೆಗಳನ್ನು ಹೆಚ್ಚಿಸಿರುವಾಗ ಎಡರಂಗ ಜನತೆಯ ಒಳಿತಿಗಾಗಿ ಸಾಕಷ್ಟು ಕಾರ್ಯಕ್ರಮಗಳನ್ನು ರೂಪಿಸಿದೆ. ಈ ಅಂಶಗಳು ಈ ಚುನಾವಣೆಯಲ್ಲಿ ಹೆಚ್ಚು ಪ್ರಾಮುಖ್ಯತೆ ಪಡೆದುಕೊಳ್ಳಲಿದೆ ಎಂಬುದು ನನ್ನ ಅನಿಸಿಕೆಯಾಗಿದೆ.

ಪ್ರ: ಎಡರಂಗ ಸರ್ಕಾರ ಪ.ಬಂಗಾಳದಲ್ಲಿನ ಮುಸ್ಲಿಂ ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ಏನಾದರು ಮಾಡಲು ಸಾಧ್ಯವಾಗಿದೆಯಾ?

ಪ್ರಕಾಶ್: ಪ.ಬಂಗಾಳದಲ್ಲಿ ಕೈಗೊಂಡಿರುವ ಭೂಸುಧಾರಣೆ ಗಳು ಭೂ ರಹಿತ ಮುಸ್ಲಿಂ ಅಲ್ಪಸಂಖ್ಯಾತರಿಗೂ ಭೂಮಿ ಕಲ್ಪಿಸಿದೆ. ಅಲ್ಲಿ ವಿತರಿಸಿರುವ ಭೂಮಿಯಲ್ಲಿ ಶೇಕಡ 18ರಷ್ಟು ಮುಸ್ಲಿಂ ಸಮುದಾಯಗಳಿಗೆ ಸಿಕ್ಕಿದೆ. ಮುಸ್ಲಿಂ ಅಲ್ಪಸಂಖ್ಯಾತರಿಗೆ ಉದ್ಯೋಗ ಮೀಸಲಾತಿ ನೀಡಬೇಕೆಂಬ ರಂಗನಾಥ್ ಮಿಶ್ರ ಆಯೋಗದ ಶಿಫಾರಸಿನ ಹಿನ್ನೆಲೆಯಲ್ಲಿ ಇದು ತುಂಬಾ ಮುಖ್ಯವಾದುದಾಗಿದೆ. ಇದರಿಂದ ರಾಜ್ಯದಲ್ಲಿನ 1.72 ಕೋಟಿ ಮುಸ್ಲಿಂರಿಗೆ ಸಹಕಾರಿಯಾಗಿದೆ. ಕೇಂದ್ರವಾಗಲಿ, ಇನ್ಯಾವುದೇ ಸರ್ಕಾರ ಇಂತಹ ದೃಢ ಹೆಜ್ಜೆಗಳನ್ನು ಇಟ್ಟಿಲ್ಲ. ಶಿಕ್ಷಣ ಮತ್ತು ಇತರ ಕ್ಷೇತ್ರಗಳಲ್ಲಿಯೂ ಸಹ ಮುಸ್ಲಿಂ ಸಮುದಾಯಕ್ಕೆ ಒದಗಿಸಿರುವ ಸ್ಕಾಲರ್‌ಶಿಪ್ ಮತ್ತು ಇತರ ಸೌಲಭ್ಯಗಳಲ್ಲಿ ಪ.ಬಂಗಾಳ ಮುಂಚೂಣಿಯಲ್ಲಿದೆ. ಈ ಹಿನ್ನೆಲೆಯಲ್ಲಿ ನೋಡುವುದಾದರೆ ದೇಶದಲ್ಲಿನ ಮುಸ್ಲಿಮ ಸಮುದಾಯದ ಪರಿಸ್ಥಿತಿ ಕುರಿತು ಸಾಚರ್ ಸಮಿತಿ ಪ್ರಸ್ತಾಪಿಸಿರುವುದರಲ್ಲಿ ಪ. ಬಂಗಾಳ ಸರ್ಕಾರ ಬಹುತೇಕ ಪ್ರಗತಿ ಸಾಧಿಸಿದೆ.

ಪ್ರ: ತೃಣಮೂಲ ಕಾಂಗ್ರೆಸ್ ನಾಯಕಿ ಮಮತಾ ಬ್ಯಾನರ್ಜಿ ತುಂಬಾ ಪ್ರಗತಿಪರ ರಾಜಕಾರಣಿಯಾಗಿದ್ದು, ಪ.ಬಂಗಾಳದಲ್ಲಿ ಬದಲಾವಣೆಗಾಗಿ ಶ್ರಮಿಸುತ್ತಿದ್ದಾರೆ ಎಂದು ಮಾಧ್ಯಮ ಮತ್ತು ಚಿಂತಕರ ಕೆಲವು ವಿಭಾಗಗಳು ಬಿಂಬಿಸುತ್ತಿವೆ. ಇದನ್ನು ನೀವೇಗೆ ಅರ್ಥೈಸುತ್ತೀರಾ?

ಪ್ರಕಾಶ್: ಬಹಳ ಹಿಂದಿನಿಂದಲೂ ಪ.ಬಂಗಾಳದಲ್ಲಿ ಈ ಮಾತು ಕೇಳಿಬರುತ್ತಿದೆ. ಎಡ ತೀವ್ರವಾದಿಗಳು ಭೂಮಾಲೀಕರೊಂದಿಗೆ ಸೇರಿ ಇಂತಹ ಪ್ರಚಾರದಲ್ಲಿ ತೊಡಗಿರುವುದನ್ನು ಹಿಂದಿನಿಂದಲೂ ನಾವು ನೋಡಿಕೊಂಡು ಬರುತ್ತಿದ್ದೇವೆ. ಎಡರಂಗದ ವಿರುದ್ಧ ಭೂಮಾಲೀಕರು ಯಾವಾಗಲೂ ಎಡ ತೀವ್ರವಾದಿಗಳೊಂದಿಗೆ ಕೈಜೋಡಿಸಿದ್ದಾರೆ. ಪಶ್ಚಿಮ ಬಂಗಾಳದಲ್ಲಿ ಈಗಲೇ ಅದೇ ನಡೆದಿದೆ. ಈಗ ತೃಣಮೂಲ ಕಾಂಗ್ರೆಸ್ ಮಾವೊವಾದಿಗಳ ಜೊತೆ ಕೈಜೋಡಿಸಿದೆ. ಕೆಲವು ಚಿಂತಕರು ಸಹ ಇದೇ ಕ್ರಿಯೆಯಲ್ಲಿ ನಿರತರಾಗಿದ್ದಾರೆ. ಈಗ ಬದಲಾವಣೆಗಾಗಿ ಎಂದು ನೀಡಿರುವ ಘೋಷಣೆ ಈ ಹಿಂದಿನಿಂದಲೂ ಹೇಳಿಕೊಂಡು ಬಂದಿರುವುದಾಗಿದೆ. ಸತ್ಯ ಏನೆಂದು ಶೀಘ್ರದಲ್ಲಿ ಹೊರಬರಲಿದೆ.

ಪ್ರ: ಪಶ್ಚಿಮ ಬಂಗಾಳದ ಚುನಾವಣೆಯಲ್ಲಿ ರಾಷ್ಟ್ರೀಯ ಪಕ್ಷಗಳಾದ ಬಿಜೆಪಿ ಮತ್ತು ಕಾಂಗ್ರೆಸ್‌ನ ಪಾತ್ರಗಳ ಕುರಿತು ನಿಮ್ಮ ಆಲೋಚನೆ ಏನು?

ಪ್ರಕಾಶ್: ಇಲ್ಲಿ ನಾವು ಮತ್ತೆ ಕಾಣುವುದೇನೆಂದರೆ ಸಿಪಿಎಂ ಮತ್ತು ಎಡಪಕ್ಷಗಳ ವಿರುದ್ಧ ಬಂಡವಾಳಶಾಹಿ ಪಕ್ಷಗಳು ಒಗ್ಗೂಡುವುದನ್ನು ಕಾಣುತ್ತೇವೆ. ಕೇರಳದಲ್ಲಿ ಬಹಳ ಹಿಂದಿನಿಂದಲೂ ಇದನ್ನು ಕಂಡಿದ್ದೇವೆ. ಕೇರಳದಲ್ಲಿ ಬಿಜೆಪಿ ತನ್ನ ಮತಗಳನ್ನು ಕಾಂಗ್ರೆಸ್‌ಗೆ ವ್ಯವಸ್ಥಿತವಾಗಿ ಮಾರಾಟ ಮಾಡುತ್ತದೆ. ಪ.ಬಂಗಾಳದಲ್ಲೂ ಇದೇ ನಡೆಯುತ್ತಿದೆ. ರಾಷ್ಟ್ರೀಯ ಮಟ್ಟದಲ್ಲಿ ಕಾಂಗ್ರೆಸ್‌ಗೆ ಪರ್ಯಾಯವಾಗಿ ಎಡಪಕ್ಷಗಳು ಬೆಳೆಯಲು ಮತ್ತು ಬಿಜೆಪಿ ಹಾಗೂ ಕಾಂಗ್ರೆಸ್ ಪಕ್ಷಗಳ ಹೊರತಾದ ಪಕ್ಷಗಳನ್ನು ಒಗ್ಗೂಡಿಸುವ ಎಡಪಕ್ಷಗಳ ವಿರುದ್ಧ ಬಿಜೆಪಿ ಕಾರ್ಯನಿರ್ವಹಿಸುತ್ತಿದೆ. ಹಾಗಾಗಿ ಬಿಜೆಪಿ ಕಾಂಗ್ರೆಸ್ ಪಕ್ಷವನ್ನು ಆಯ್ಕೆ ಮಾಡಿಕೊಳ್ಳುತ್ತದೆ. ಪ.ಬಂಗಾಳದಲ್ಲಿ ಬಿಜೆಪಿ ಅಸ್ತಿತ್ವವೇ ಇಲ್ಲದಿರುವುದರಿಂದ ತೃಣಮೂಲ ಕಾಂಗ್ರೆಸ್‌ಗೆ ಸಹಕರಿಸುತ್ತದೆ.

ಪ್ರ: ಕಳೆದ ಎರಡು ವರ್ಷಗಳಿಂದ ಪ.ಬಂಗಾಳದಲ್ಲಿ ನಡೆದಿರುವ ಹಿಂಸಾಚಾರ ನಡೆಯುತ್ತಿದೆ. ಈ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಎಡರಂಗ ಸರ್ಕಾರ ಯಾವರೀತಿ ಶಾಂತಿ ನೆಲೆಸುವಂತೆ ಮಾಡಲಿದೆ.

ಪ್ರಕಾಶ್: ಕಳೆದ ಎರಡು ವರ್ಷಗಳಲ್ಲಿ ಕೆಲವು ಪ್ರಕರಣಗಳಿಗೆ ಸಂಬಂಧಿಸಿದಂತೆ ಸಿಪಿಎಂ ಹಿನ್ನಡೆ ಕಂಡಿರುವುದರಿಂದ ಎಡರಂಗವನ್ನು ಕಿತ್ತೊಗೆಯಬಹುದು ಎಂಬ ಭಾವನೆಗಳ ಬಲಪಂಥೀಯ ಪಕ್ಷಗಳು ಭಾವಿಸಿವೆ. ಹಾಗಾಗಿ ಈ ಶಕ್ತಿಗಳೂ ಭಾರಿ ಪ್ರಮಾಣದಲ್ಲಿ ಹಿಂಸೆ

ಪುಟ 4 ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಂಪಾದಕೀಯ

ಸರ್ಕಾರಗಳ ವಿರುದ್ಧ ಜನಧ್ವನಿ

ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳ ನೇತೃತ್ವದ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ಭಾರೀ ಭ್ರಷ್ಟಾಚಾರ, ಹಗರಣಗಳು ಹಾಗೂ ಬೆಲೆ ಏರಿಕೆ, ರೇಷನ್ ಅವ್ಯವಸ್ಥೆ ವಿರೋಧಿಸಿ, ರೇಷನ್‌ಗಾಗಿ ದುಡಿವ ಹಾಗೂ ಜನಸಾಮಾನ್ಯರ ಬೇಡಿಕೆಗಳನ್ನು ಈಡೇರಿಸಬೇಕೆಂದು ಇದೇ ಏಪ್ರಿಲ್ 19 ರಂದು ಸಿಪಿಐ(ಎಂ) ಹಾಗೂ ಸಾಮೂಹಿಕ ಸಂಘಟನೆಗಳು ರಾಜ್ಯವ್ಯಾಪಿ ಪ್ರತಿಭಟಿಸಿ ತಾಲ್ಲೂಕು ಕಛೇರಿ ಮುತ್ತಿಗೆ ನಡೆಸಿದುದು ಸ್ವಾಗತಾರ್ಹ. ದೊರೆತಿರುವ ಮಾಹಿತಿಯಂತೆ 126 ತಾಲ್ಲೂಕುಗಳಲ್ಲಿ 60 ಸಾವಿರಕ್ಕೂ ಅತ್ಯಧಿಕ ಜನತೆ ನೇರವಾಗಿ ಸ್ಫೂರ್ತಿಯಿಂದ ಚಳುವಳಿಯಲ್ಲಿ ಭಾಗವಹಿಸಿದ್ದು ಅಭಿನಂದನಾರ್ಹ.


ಕೇಂದ್ರ ಮತ್ತು ರಾಜ್ಯದಲ್ಲಿರುವ ಸರ್ಕಾರಗಳು ಜನತೆಯನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿವೆ. ನಿತ್ಯದ ಬೇಡಿಕೆ, ಸಮಸ್ಯೆಗಳ ಇತ್ಯರ್ಥಕ್ಕಾಗಿ ಆಗ್ರಹದ ಕೂಗನ್ನು ಕೇಳಿಸಿಕೊಳ್ಳುತ್ತಲೇ ಇಲ್ಲ. ಆಹಾರ, ಅಗತ್ಯ ವಸ್ತುಗಳ ಬೆಲೆ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇದ್ದರೂ ಕೇಂದ್ರ ಸರ್ಕಾರ ತಡೆಯದೇ ಮತ್ತೂ ಹೆಚ್ಚಿಸುವಂತಹ ಕ್ರಮಗಳನ್ನೇ ಕೈಗೊಳ್ಳುತ್ತಿದೆ. ರಾಜ್ಯ ಸರ್ಕಾರವೂ ಆಹಾರಧಾನ್ಯಗಳನ್ನು ಪೂರೈಸಿ ಜನರನ್ನು ರಕ್ಷಿಸಬೇಕಾದ ಕನಿಷ್ಟ ಕರ್ತವ್ಯವನ್ನೂ ನೆರವೇರಿಸುತ್ತಿಲ್ಲ. ಹಾಗೆಯೇ ಅಸಂಘಟಿತರು, ಕಾರ್ಮಿಕರು, ರೈತ ಕೂಲಿಕಾರರು, ಮಹಿಳೆ ವಿದ್ಯಾರ್ಥಿ ಯುವಜನರು ಹಲವಾರು ಬೇಡಿಕೆಗಳನ್ನಿಟ್ಟು ಹಲವು ಹಂತಗಳ ಚಳುವಳಿಗೆ ಇಳಿದಿದ್ದರೂ ಸರ್ಕಾರ ಕಿಂಚಿತ್ತೂ ಕಾಳಜಿಯನ್ನೂ ತೋರಿಸುತ್ತಿಲ್ಲ. ವಿದೇಶಿ ಬಂಡವಾಳಗಾರರು, ಭೂಮಾಲಿಕರುಗಳ 'ಅಭಿವೃದ್ಧಿ'ಗೆ ಸರ್ಕಾರಗಳು ಒತ್ತು ನೀಡುತ್ತವೆಯೇ ಹೊರತು ಜನರಿಗಲ್ಲ. ಜನರನ್ನು ಈ ಸರ್ಕಾರಗಳು ಸಂಪೂರ್ಣ ನಿರ್ಲಕ್ಷಿಸಿವೆ. ಮತ್ತೆ ಮತ್ತೆ ಈ ಪ್ರಶ್ನೆಗಳನ್ನು ಎತ್ತುತ್ತಿದ್ದಾಗಲೂ ಕಿವಿಗೊಡದಿರುವುದು ಅದರ ಜನವಿರೋಧಿ ಸ್ವರೂಪವನ್ನು ತೋರಿಸುತ್ತದೆ.

ಮುಖ್ಯವಾಗಿ ಬಿಜೆಪಿ, ಕಾಂಗ್ರೆಸ್ ಪಕ್ಷಗಳು ಉದಾರೀಕರಣ, ಜಾಗತೀಕರಣದ ನೀತಿಗಳನ್ನು ಪೂರ್ಣವಾಗಿ ಜಾರಿಗೊಳಿಸುತ್ತಿರುವುದೇ ಇದಕ್ಕೆ ಕಾರಣ. ಈ ನೀತಿಗಳನ್ನು ಹಿಮ್ಮೆಟ್ಟಿಸುವುದು ಗಂಭೀರ ವಿಷಯ. ಇದು ಅನಿವಾರ್ಯ ಅತ್ಯಗತ್ಯ.

ಇಂದು ರಾಜ್ಯದಲ್ಲಿ ಬಿಜೆಪಿಯ ಭ್ರಷ್ಟಾಚಾರದ ಬಗ್ಗೆ ಮಾತನಾಡುವ ಕಾಂಗ್ರೆಸ್ ಕೇಂದ್ರದಲ್ಲಿ ಭ್ರಷ್ಟಾಚಾರದಲ್ಲಿ ಮುಳುಗಿದೆ. ಕೇಂದ್ರದ ಭ್ರಷ್ಟಾಚಾರದ ಬಗ್ಗೆ ಮಾತನಾಡುವ ಬಿಜೆಪಿ ರಾಜ್ಯದಲ್ಲಿ ದಾಖಲೆ ನಿರ್ಮಿಸಿದೆ. ಒಂದೇ ರಾಜಕೀಯ, ಆರ್ಥಿಕ ನೀತಿಗಳನ್ನು ಅನುಸರಿಸುತ್ತಿರುವ ಇವರು ಪರಸ್ಪರ ಪರ್ಯಾಯವಲ್ಲ. ಪೂರಕವಾಗಿದ್ದಾರೆ. ಆದ್ದರಿಂದಲೇ ಅಧಿಕೃತ ಅಧಿಕೃತ ವಿರೋಧ ಪಕ್ಷವು ಪ್ರಶ್ನೆಗಳನ್ನೆತ್ತಿ ಜನರ ನಡುವೆ ಹೋಗುತ್ತಿಲ್ಲ. ಬದಲಾಗಿ ಮಾಧ್ಯಮಗಳಿಗೆ ಸಾಂಕೇತಿಕ ಹೇಳಿಕೆ ನೀಡುತ್ತಾ ಸೀಮಿತವಾಗಿದ್ದಾರೆ. ಆದ್ದರಿಂದ ಈ ಪಕ್ಷಗಳಿಗೆ ಪರ್ಯಾಯದ ಅಗತ್ಯವಿದೆ. ಜನಕೇಂದ್ರಿತ ಪರ್ಯಾಯ ರಾಜಕಾರಣ ಬೆಳೆಯಬೇಕಿದೆ.

ಇಂತಹ ಪ್ರಶ್ನೆಗಳನ್ನೆತ್ತಿ ಚಳುವಳಿಗೆ ಇಳಿದಾಗ ದೊರೆತ ಜನಸ್ಪಂದನ ರಾಜ್ಯ ಕೇಂದ್ರದಲ್ಲಿ ಆಳುವ ಪಕ್ಷಗಳ ವಿರುದ್ಧದ ಜನತೆಯ ಮನೋಭಾವವನ್ನು ತೋರಿಸುತ್ತದೆ. ಇದಕ್ಕೆ ಹೆಚ್ಚಿನ ಧ್ವನಿ ನೀಡಿ, ಜಾಗೃತಗೊಳಿಸಿ ಮತ್ತೂ ತೀವ್ರ ಹೋರಾಟಗಳಿಗೆ ಇಳಿದಲ್ಲಿ ಎಡ ಪ್ರಜಾಸತ್ತಾತ್ಮಕ, ಜಾತ್ಯಾತೀತ ಪರ್ಯಾಯ ರಾಜಕಾರಣ ಬೆಳೆಯಲು ಸಾಧ್ಯ.

ಜನತೆಯ ಈ ಆಗ್ರಹದ ಬಳಿಕವಾದರೂ ಸರ್ಕಾರಗಳು ಇದರತ್ತ ಗಮನ ಕೊಡಲೇಬೇಕು. ಅದಕ್ಕಾಗಿ ಹೋರಾಟ ಮುಂದುವರೆಯಬೇಕಾದ ಜರೂರಿ ಹೆಚ್ಚಿದೆ.



ಭ್ರಷ್ಟರ ರಕ್ಷಣೆಗೆ ಧರ್ಮದಂಡವೇ?

ಭ್ರಷ್ಟಾತಿಭ್ರಷ್ಟ ಸರ್ಕಾರವೆಂದು ಲೋಕಖ್ಯಾತಿ ಹೊಂದಿರುವ ಬಿಜೆಪಿ ಯಡಿಯೂರಪ್ಪನವರಿಗೆ ಅಭಯ ಹಸ್ತ ನೀಡಿರುವ ಮಠಾಧೀಶರು ಯಾವ ಧರ್ಮ ಪಾಲಿಸುತ್ತಿದ್ದಾರೆ?

ಮೈಸೂರಿನ ಸುತ್ತೂರಿನಲ್ಲಿನ 22ನೇ ವೀರಶೈವ ಲಿಂಗಾಯತ ಮಹಾಧಿವೇಶನ ಯಾವ ಘನೋದ್ದೇಶಕ್ಕಾಗಿ? ಎಂಬ ಪ್ರಶ್ನೆ ಇದೀಗ ಸಹಜವಾಗಿ ಎದ್ದಿದೆ. ಅದು ಜಾತೀಯ ಸಮ್ಮೇಳನ. ಜಾತಿವಾದದ ನೆಲೆಯಲ್ಲಿ ಬಲವನ್ನು ಕ್ರೋಡೀಕರಿಸುವ ಪ್ರಯತ್ನ. ಆದರೆ ಹೀಗೆ ಜಾತಿವಾದವನ್ನು ಬಲಗೊಳಿಸಿ, ಅದನ್ನು ರಾಜಕೀಯ ಬಲವಾಗಿ ಬಳಸುವ ಉದ್ದೇಶದ ಈ ಮಹಾಧಿವೇಶನ ನಿಜಕ್ಕೂ ವೀರಶೈವ ಧರ್ಮದ, ಶರಣರ ನಿಜ ಆಶಯಗಳಿಗೆ ವಿರುದ್ಧವಾದುದು? ಹಾಗೆ ನೋಡಿದರೆ ಅದು ನಡೆದ ರೀತಿ, ಅದರ ಅಂತಿಮ ಸಂದೇಶ ಸಮಾಜದ, ಸಮುದಾಯದ ಹಿತಚಿಂತನೆಗಳಿಗಿಂತ ಜಾತಿ ಹೆಸರೇಳಿ ಬದುಕುಳಿಯಬಯಸುವ ಮುಖವಾಡದವರನ್ನು ರಕ್ಷಿಸುವುದರತ್ತಲೇ ಅದರ ಲಕ್ಷ್ಯವಿತ್ತು. ಇಲ್ಲಿ ವೀರಶೈವ ಧರ್ಮದಲ್ಲಿ ಹುಟ್ಟಿದ ಲಕ್ಷಾಂತರ ಜನಸಾಮಾನ್ಯರ, ದುಡಿವ ಜನರ, ರೈತರ ಕೂಲಿಕಾರರ ಸಂಕಷ್ಟಗಳ ಪ್ರಶ್ನೆ, ಪರಿಹಾರಗಳು ಕೇಂದ್ರಬಿಂದುವಾಗಲಿಲ್ಲ. ಬದಲಾಗಿ ಸಾವಿರಾರು ಕೋಟಿ ರೂಪಾಯಿಗಳನ್ನು ಲೂಟಿ ಹೊಡೆಯುತ್ತಿರುವ ಕೆಲ ಅಧಿಕಾರಸ್ಥರ ಸುತ್ತ ಅವರಿಗೆ ರಕ್ಷಣೆಯ 'ಕೋಟೆ' ಕಟ್ಟುವುದರಲ್ಲೇ ಮಗ್ನವಾದುದು ಒಂದು ದುರಂತ.

ಪ್ರಬಲ ಜಾತಿಗಳು ಹೀಗೆ ಜಾತಿವಾದದ ಆಧಾರದಲ್ಲಿ ಬಲವನ್ನು ಕ್ರೋಢೀಕರಿಸುವುದು, ದುರ್ಬಲ ಜಾತಿ ವಿಭಾಗಗಳಲ್ಲಿ ಅತೀ ಹೆಚ್ಚಿನ ಆತಂಕಗಳನ್ನು ಸೃಷ್ಟಿಸಲಿದೆ. ಮಾತ್ರವಲ್ಲ. ಅಂತಹುದೇ ಜಾತಿವಾದದ ಧ್ರುವೀಕರಣಕ್ಕೂ ತನ್ನದೇ ವಿಧಾನದಲ್ಲಿ ಕಾರಣವೂ ಆಗುತ್ತದೆ. ಇದರ ಒಟ್ಟು ಪರಿಣಾಮ ಎಲ್ಲಾ ಜಾತಿಗಳಲ್ಲಿರುವ ಶೋಷಿತರ ನಡುವೆ ಅನೈಕ್ಯತೆ ತಂದು ಒಡೆದು, ಪರಸ್ಪರ ಶತ್ರುಗಳಂತೆ ಬಡಿದಾಡುವ ಪ್ರಕ್ರಿಯೆಗೆ ಚಾಲನೆ ಸಿಗುತ್ತದೆ. ಜಾತಿಯ ಹೊದಿಕೆಯೊಂದಿದ್ದರೆ ಎಂತಹದ್ದನ್ನೂ ದಕ್ಕಿಸಿಕೊಳ್ಳುವೆನೆಂಬ ಭಂಡತನ ಸ್ಥಾಪಿತ ಹಿತಾಸಕ್ತಿಗಳಲ್ಲಿ ಬಲಗೊಳ್ಳುತ್ತದೆ.

ಸುತ್ತೂರಿನಲ್ಲಿ ಆಗಿರುವುದೂ ಅದೇ. ನ್ಯಾಯಾಲಯ, ಸಂವಿಧಾನದ ಕತ್ತಿ ನೆತ್ತಿಯ ಮೇಲೆ ತೂಗಾಡುತ್ತಿರುವ ಮುಖ್ಯಮಂತ್ರಿ ಯಡಿಯೂರಪ್ಪನವರಿಗೆ ಅಲ್ಲಿ ನೆರೆದಿದ್ದ ಮಠಾಧೀಶರು ನೀಡಿದ ಬೆಂಬಲವೇ ಇಡೀ ಮಹಾಧಿವೇಶನದ ನೇರ ಆಶಯ. ಸಂದೇಶವನ್ನು ಸ್ಪಷ್ಟಗೊಳಿಸಿತು.

ಮುಖ್ಯಮಂತ್ರಿ ಯಡಿಯೂರಪ್ಪನವರು ಈಗಾಗಲೇ ನೂರಾರು ಭ್ರಷ್ಟ ಹಗರಣಗಳಲ್ಲಿ ಭಾಗಿಯಾದುದು ದಾಖಲೆಗಳ ಸಮೇತ ಬಯಲಾಗಿದೆ. ಅಧಿಕಾರದಾಹಕ್ಕಾಗಿ ನಡೆಸಿದ ಅಕ್ರಮ, ಅನೈತಿಕ ಕೃತ್ಯಗಳು ಜಗಜ್ಜಾಹೀರಾಗಿವೆ. ನ್ಯಾಯಾಲಯಗಳಲ್ಲಿ ಮೊಕದ್ದಮೆಗಳನ್ನು ಎದುರಿಸುತ್ತಿದ್ದಾರೆ. ಅಲ್ಲದೇ ಸ್ವತ: ಅವರದ್ದೇ ಬಿಜೆಪಿ ಪಕ್ಷದೊಳಗೆ, ಶಾಸಕಾಂಗ, ಸಚಿವ ಸಂಪುಟದಲ್ಲಿಯೂ ತೀವ್ರ ವಿರೋಧ ಭಿನ್ನಮತವನ್ನು ಎದುರಿಸುತ್ತಿದ್ದಾರೆ. ಹೀಗಿರುವಾಗ ಮುಖ್ಯಮಂತ್ರಿ ಅಧಿಕಾರದಲ್ಲಿ ಇರಬೇಕೋ, ಬೇಡವೋ ಎಂಬ ಬಗ್ಗೆ ನಿರ್ಧರಿಸಬೇಕಾದವರು ಕರ್ನಾಟಕದ ಜನತೆ ಹಾಗೂ ವಿಧಾನಸಭೆ ತಾಂತ್ರಿಕವಾಗಿ ಹೇಳಬೇಕಾದರೆ ಆಯ್ಕೆಯಾಗಿರುವ ಶಾಸಕರು ಮತ್ತು ಅವರ ಪಕ್ಷ ಇದು ಪ್ರಜಾಸತ್ತಾತ್ಮಕವಾದ ವಿಧಾನ. ಹೀಗಿರುವಾಗ ಸನ್ಮಾರ್ಗ ತೋರಿಸಬೇಕಾದ ಮಠಾಧೀಶರು ಯಡಿಯೂರಪ್ಪನವರನ್ನು 'ರಾಜ್ಯ ಕಂಡ ಅಪರೂಪದ ರಾಜಕಾರಣಿ' ಎಂದೂ, ದುರ್ಮಾರ್ಗದಲ್ಲಿರುವ ಅವರಿಗೆ ಅಳುಕಬೇಡಿ, ನಿಮ್ಮ ಬೆಂಬಲಕ್ಕೆ ನಾವಿದ್ದೇವೆ, ಆಭಾದಿತವಾಗಿ ಅಧಿಕಾರ ನಡೆಸಿ' ಎಂದು ಹುರಿದುಂಬಿಸಿದ್ದು ಅತ್ಯಂತ ನಾಚಿಕೆಗೇಡಿನ ಸಂಗತಿ. 'ಧರ್ಮಪೀಠ'ದಲ್ಲಿ ಕುಳಿತಿರುವ ಮಠಾಧೀಶರು ಯಡಿಯೂರಪ್ಪನನ್ನು ಸರ್ವಶ್ರೇಷ್ಟ ಎಂದು ಸಾರಿ ಅವರ ಕಳಂಕಗಳನ್ನು ಮೈಮೇಲೆ ಎಳೆದು ಕೊಂಡಿದ್ದಾರೆ. ಇಂತಹ ರಾಜಕೀಯ ಉಸಾಬರಿಯಿಂದ ಶರಣ ತತ್ವಕ್ಕೂ ಅಪಚಾರವೆಸಗಿದ್ದಾರೆ. ಹಿಂದೆ ಅದೇ ರೀತಿ ಕೆಲ ಮಠಾಧೀಶರು ಯಡಿಯೂರಪ್ಪ ನವರನ್ನು ಸಮರ್ಥಿಸಿದ್ದು ವ್ಯಾಪಕ ಸಾರ್ವಜನಿಕ ವಿರೋಧಕ್ಕೆ ಕಾರಣವಾಗಿದ್ದರೂ ನಿರ್ಲಕ್ಷಿಸಿದ್ದಾರೆ.

ತಮ್ಮಲ್ಲಿ ಧರ್ಮ ದಂಡವಿದೆ. ಯಾರನ್ನೂ ದಂಡಿಸಬಹುದು ಎಂಬ ಮಠಾಧೀಶರ ಅಹಂ ಅದೆಷ್ಟು ಠೊಳ್ಳು ಎಂದು ಗೊತ್ತಾಗಿದೆ. ಹಾದಿ ತಪ್ಪಿರುವ, ಅಕ್ರಮಗಳ ಸರದಾರ ಯಡಿಯೂರಪ್ಪನವರು ಸಾಮಾನ್ಯ ಜನ ಕೊಟ್ಟ ಹಣದಲ್ಲಿ ಸರ್ಕಾರದ ಬೊಕ್ಕಸದಿಂದ ಮಠಾಧೀಶರಿಗೆ ನೀಡಿದ ಹಣದ ಪ್ರಭಾವ ಇಲ್ಲಿ ಇಲ್ಲವೆಂದು ಹೇಗೆ ಹೇಳುವುದು? ಇಂದು ಬಹಳಷ್ಟು ಮಠಗಳು ಧರ್ಮ ಬೋಧನೆ, ಸಾಮಾಜಿಕ ಕಾರ್ಯಗಳಲ್ಲಿ ತೊಡಗುವಿಕೆ ಗಿಂತ ರಾಜಕಾರಣದ ನಂಟಿನ ರುಚಿ ಹತ್ತಿ ಮನ ಸೋತಿದೆ. ಅಧಿಕಾರದ ಕುರ್ಚಿ ಸುತ್ತ ಸುತ್ತುವವರಿದ್ದಾರೆ. ಆಶೆಗಣ್ಣಿನಿಂದ ಏನಾದರೂ ಸಿಗಬಹುದು ಎಂದು ನೋಡುತ್ತಿರುತ್ತಾರೆ. ಇಂತಹ ಮಠಗಳು, ರಾಜಕಾರಣಿಗಳ ಉದ್ಯಮಿಗಳ ಕಪ್ಪು ಹಣದ ರಕ್ಷಣಾ ಕೇಂದ್ರಗಳಾಗಿರುವುದನ್ನು ಹಿಂದೊಮ್ಮೆ ನಿಜ ಶರಣರು ನಿಷ್ಟುರವಾಗಿ ಖಂಡಿಸಿದ್ದರು. ಪರಿಣಾಮ ಅವರ ಮೇಲೆ ಧಾಳಿ, ಕೊಲೆ ಸಂಚು ನಡೆಯಿತು. ಇಂದೂ ಸಹ ದೇವಮಾನವನೆಂದೇ ಬಿಂಬಿಸಿಕೊಂಡ ಪುಟ್ಟಪರ್ತಿ ಸಾಯಿಬಾಬಾನ ಸುತ್ತಲಿನ ಆಸ್ತಿ 1 ಲಕ್ಷ 30 ಸಾವಿರ ಕೋಟಿ ಎಂದು ಕನ್ನಡಪ್ರಭ ವರದಿ ಮಾಡಿದೆ. ಅಂತಹ ಬಾಬಾ, ಮಠಾಧೀಶರಿಗೆ ಇದು ಅನೈತಿಕ, ಅಧರ್ಮ ಎಂದು ಅನ್ನಿಸುವುದಿಲ್ಲ. ಹೀಗೆ ಯಡಿಯೂರಪ್ಪನವರನ್ನು ಬೆಂಬಲಿಸುವ ಮೂಲಕ ಮಠಾಧೀಶರು ನೈತಿಕ ಅಧ:ಪತನ ತಲುಪಿದ್ದಾರೆ. ಸಂವಿಧಾನ, ಕಾನೂನು ಉಲ್ಲಂಘಿಸಿ ಅಪರಾಧಿ ಸ್ಥಾನದಲ್ಲಿರುವ ಮುಖ್ಯಮಂತ್ರಿಯನ್ನು ಜಾತಿಯ ಕಾರಣಕ್ಕೆ ಬೆಂಬಲಿಸುವುದು ಅಪರಾಧ. ಕಾನೂನು ಎಲ್ಲರಿಗೂ ಒಂದೇ. ಲಿಂಗಾಯತರಿಗೊಂದು, ಬ್ರಾಹ್ಮಣರಿಗೆ ಇನ್ನೊಂದು ಇಲ್ಲ. ಮಠಗಳನ್ನು ಸಂವಿಧಾನೇತರವಾಗಿಸಿ ಸಂವಿಧಾನೇತರ ಸಂಸ್ಥೆಗಳನ್ನು ದುರುಪಯೋಗಪಡಿಸಿ ಕೊಂಡಿರುವುದು ಪ್ರಜಾಪ್ರಭುತ್ವದ ಮೇಲಿನ ಧಾಳಿಯಾಗಿದೆ. ಇದು ಪ್ರಜಾಪ್ರಭುತ್ವ, ಕಾನೂನುಬದ್ಧ ಆಡಳಿತದ ವ್ಯವಸ್ಥೆಯನ್ನೇ ದುರ್ಬಲಗೊಳಿಸಿ ನಾಶದಂಚಿಗೆ ಒಯ್ಯುತ್ತದೆ.



ಕೃಪೆ : ಪ್ರಜಾವಾಣಿ ಪಿ.ಮಹಮ್ಮದ್

ಪುಟ 4 ಕ್ಕೆ

ಈ ವಾರ

ಪುಟ 3 ರಿಂದ

ಸಂವಿಧಾನೇತರ ಶಕ್ತಿಗಳನ್ನು ಬಳಸಿ ಧಾಳಿ ಮಾಡುವುದು ಆರ್.ಎಸ್.ಎಸ್.ನ ಆದ್ಯ ಗುರಿ. ಅದೇ ಕೆಲಸ ಈಗ ಮಠಾಧೀಶ ರಿಂದಲೂ ಮುಖ್ಯಮಂತ್ರಿಯವರಿಂದಲೂ ನಡೆದಿದೆ. ಸಂವಿಧಾನ, ಶಾಸನಬದ್ಧ ಆಡಳಿತಕ್ಕೆ ಅಡ್ಡಿಯೊಡ್ಡಿ ಜಾತ್ಯಾಂಧ ಪಾಳೇಗಾರಿ ಶಕ್ತಿಗಳನ್ನು ಪರ್ಯಾಯವಾಗಿ ಬಿಂಬಿಸುವುದು, ಬೆಳೆಸುವುದು ಪ್ರತಿಗಾಮಿಗಳ ಕುತಂತ್ರವಾಗಿದೆ. ಯಾರೇ ಆಗಲಿ ಮಂತ್ರಿಮಂಡಲ, ಶಾಸಕಾಂಗದ ಬೆಂಬಲದಿಂದ ಅಧಿಕಾರ ನಡೆಸಬೇಕೇ ಹೊರತು ಒಂದು ಜಾತೀವಾದಿಗಳ ಬೆಂಬಲದಿಂದ ಅಲ್ಲ. ಮುಖ್ಯಮಂತ್ರಿಯಾಗಿರುವುದು ಸಹ ಹಲವಾರು ವಿಭಿನ್ನ ಜಾತಿ, ಧರ್ಮದ ಜನರ ಬೆಂಬಲದಿಂದ ಎಂಬುದನ್ನು ಮರೆತುಬಿಟ್ಟಿದ್ದಾರೆ. ಹೌದು! ಈ ಯಡಿಯೂರಪ್ಪ ಸಾಮಾನ್ಯ ಬಡ ಲಿಂಗಾಯತರಿಗಾದರೂ ಮಾಡಿದ್ದೇನು? ಹಾವೇರಿಯಲ್ಲಿ ಗೋಲಿಬಾರ್ ನಡೆಸಿ ರೈತರನ್ನು ಕೊಂದರು. ನೆರೆ ಹಾವಳಿಯಲ್ಲಿ ನಲುಗುವ ಲಿಂಗಾಯತರನ್ನು ಏನು ಮಾಡಿದರು? ಕೂಲಿಕಾರ ಲಿಂಗಾಯತರು ಎಲ್ಲಾ ಕೂಲಿಕಾರರಂತೆ ಅಲೆಮಾರಿ.



ಹೀಗೆ ಜಾತಿ ಹೆಸರೇಳಿದವರು ಅವರು ದುಂಡಗಾದರು ಹೊರತು ಜನರಲ್ಲ.

ಇದರಲ್ಲಿ ಯಡಿಯೂರಪ್ಪನವರ ತಕ್ಷಣದ ಗುರಿ ಇದ್ದದ್ದೂ ಪಕ್ಷದೊಳಗೆ ಮತ್ತೆ ಭುಗಿಲೇಳುತ್ತಿರುವ ಭಿನ್ನಮತದ ದೋಣ್ಣೆಯಿಂದ ಪಾರಾಗುವುದು. ಚುನಾವಣೆ ನಂತರ ಮತ್ತೆ ಕಾಣಿಸಿಕೊಂಡ ಭಿನ್ನಮತದ ಪರಿಣಾಮ ಜಗಳ ಬಿಡಿಸಲು ಬಿಜೆಪಿ ಪ್ರಧಾನ ಕಾರ್ಯದರ್ಶಿ ಪ್ರಧಾನ್ ಭೇಟಿಯ ಹಿನ್ನೆಲೆಯಲ್ಲಿಯೇ ಮುಖ್ಯಮಂತ್ರಿ ಬದಲಾವಣೆಯಾಗಬೇಕು ಎಂಬ ಒತ್ತಡ ಹೆಚ್ಚಿರುವಾಗ ಲಿಂಗಾಯತರ ಬೆಂಬಲವಿರುವ ಮುಖ್ಯಮಂತ್ರಿಯನ್ನು ತೆಗೆದರೆ ನೆಲೆ ಕಳೆದುಕೊಳ್ಳಬೇಕಾಗುತ್ತದೆ ಎಂಬ ಬ್ಲಾಕ್‌ಮೇಲ್‌ಗೆ ಹಿಂದೆ ಬಿಜೆಪಿ ಹೈಕಮಾಂಡ್ ಮಣಿದಿತ್ತು. ಅದನ್ನೇ ಈಗಲೂ ಬೆದರಿಕೆ ತಂತ್ರವಾಗಿ ಯಡಿಯೂರಪ್ಪ ಬಳಸುತ್ತಿದ್ದಾರೆ. ಮೇಲಾಗಿ ಹೈಕಮಾಂಡ್ ಅವರ ಮೇಲೆ ದೃಢಕ್ರಮ ವಹಿಸಲು ಸಿದ್ಧವಿಲ್ಲ. ಅದೂ ಶಾಮೀಲಾಗಿದೆ. ಆದ್ದರಿಂದ ಹೇಗೋ ತೇಪೆ ಹಚ್ಚಿಕೊಂಡು, ಅನಿವಾರ್ಯವಾದರೆ ಮುಖ್ಯಮಂತ್ರಿಯನ್ನು ಬದಲಾಯಿಸಿಯೇ ಇನ್ನು ಎರಡು ವರ್ಷ ರಾಜ್ಯದಲ್ಲಿ ಲೂಟಿಯನ್ನು ಮುಂದುವರಿಸಬೇಕೆಂದೇ ಬಿಜೆಪಿ ಬಯಸುತ್ತಿದೆ. ಎಲ್ಲಾ ಸಂವೇದನೆ ಬಿಟ್ಟವರಿಂದ ಇದಕ್ಕಿಂತ ಇನ್ನೇನನ್ನು ನಿರೀಕ್ಷಿಸಲು ಸಾಧ್ಯ? ಇದಕ್ಕೆ ಕೊನೆ ಹಾಕಲೇಬೇಕಲ್ಲ.

* * *

ಭಿನ್ನಮತ ಬಗೆಹರಿಯಿತೇ?

ಉಪ ಚುನಾವಣೆಯ ಮತಯಂತ್ರ ಮೊಹರು ಹೊಡೆಯುತ್ತಿದ್ದಂತೆಯೇ ಮತ್ತೆ ಆರಂಭವಾಗಿದ್ದ ಬಿಜೆಪಿಯೊಳಗಿನ ಭಿನ್ನಮತೀಯ ಚಟುವಟಿಕೆಗಳು ಎಲ್ಲೆಲ್ಲೋ ಸುತ್ತಿ ಇದೀಗ ಅಂಥದ್ದೇನೂ ಇಲ್ಲವೇ ಇಲ್ಲ ಎಂದು ಕೋಲ್ಗೇಟ್ ನಗು ನಗುವವರೆಗೆ ಬಂದಿದೆ. ಸ್ವತ: ಪಕ್ಷಾಧ್ಯಕ್ಷ ಈಶ್ವರಪ್ಪ ಹುಬ್ಬಳ್ಳಿಯ ಆರ್.ಎಸ್.ಎಸ್.ನ ಬೇಂಗ್ಡೆ ಭೇಟಿಯಾಗಿ ಕುತೂಹಲ ಹುಟ್ಟಿಸಿದ್ದರು. ನಂತಹ ಬಹಿರಂಗ ಹೇಳಿಕೆಗಳು ದೆಹಲಿಗೆ ಒಂದು ದೊಡ್ಡ ನಿಯೋಗವೂ ಹೈಕಮಾಂಡ್‌ಗಳನ್ನು ಭೇಟಿ ಮಾಡಿದ ಹಿನ್ನೆಲೆಯಲ್ಲಿ ಬಿಜೆಪಿ ಪ್ರಧಾನ ಕಾರ್ಯದರ್ಶಿ ಧರ್ಮೇಂದ್ರ ಪ್ರಧಾನ ಆಗಮನವಾಗಿತ್ತು. ಆದರೆ ಅವರೊಂದಿಗೆ ಸಭೆಯಾದ ಬಳಿಕ ಭಿನ್ನಮತದ ಪ್ರಶ್ನೆಯೇ ಇಲ್ಲವೆಂದು ಹೇಳುತ್ತಿರುವುದು ಬೇರೇನೋ ಒಳಒಪ್ಪಂದದ ಪರಿಣಾಮ ವಿರಲೂಬಹುದು. ವಿಚಿತ್ರವೆಂದರೆ ಶಾಸಕರಿಂದ ಅಹವಾಲು ಕೇಳಲು ಬಂದಿದ್ದ ಪ್ರಧಾನ್ ಅದಕ್ಕೆ ಅವಕಾಶ ಕೊಡದೇ ಕ್ಷೇತ್ರದ ಅಭಿವೃದ್ಧಿ ಬಗ್ಗೆ ಮಾತ್ರ ಮಾತನಾಡಿ ಎಂದು ಈಶ್ವರಪ್ಪನವರೇ ಬಾಯಿ ಮುಚ್ಚಿಸಿದ್ದು ಅವರಿಗೆ ಏನಾದರೂ ಹೊಸ ಪ್ಯಾಕೇಜ್ ಸಿಕ್ಕಿದೆಯೇ ಎಂಬ ಅನುಮಾನ. ಇಷ್ಟಕ್ಕೇ ಭಿನ್ನಮತ ಶಮನ ಎಂದೇನೂ ಭಾವಿಸಲು ಸಾಧ್ಯವಾದೀತೇ? ಯಾಕೆಂದರೆ ಭಿನ್ನಮತ, ಬಂಡಾಯಗಾರರು ರಾಜ್ಯ ಜನರ ಪ್ರಶ್ನೆಗಳ ಬಗ್ಗೆ ಪ್ರಾಮಾಣಿಕ ಕಳಕಳಿ ಇಟ್ಟು ದನಿ ಎತ್ತುತ್ತಿಲ್ಲ. ಲೂಟಿಯಲ್ಲಿ ಪಾಲು, ಲೂಟಿಗೆ ಅವಕಾಶ ಮತ್ತು ಇನ್ನಷ್ಟು ಹೆಚ್ಚಿನದನ್ನು ಕಿತ್ತುಕೊಳ್ಳುವ ದುರ್ಲಾಭ ದೃಷ್ಟಿ. ಭಿನ್ನಮತದ ಮತ್ತೊಂದು ಸರಣಿ ಆರಂಭಕ್ಕೆ ಕ್ಷಣಗಣನೆ ನಿಜ.

ಕಾಯುತ್ತಲೇ ಇರುವ ಕಾಂಗ್ರೆಸ್

ರಾಹುಲ್ ಗಾಂಧಿಯ ಭೇಟಿ, ಸಿನಿಮಾ ನಟಿ ರಮ್ಯಾಗಳ ಸೇರ್ಪಡೆ ರಾಜ್ಯ ಕಾಂಗ್ರೆಸ್‌ಗೆ ಪುನಶ್ಚೇತನ ತರಲಿದೆಯೆಂದೇ ಮುಖಂಡರು ಭಾವಿಸಿದ್ದಾರೆ. ಸದಸ್ಯತ್ವ ಅಭಿಯಾನ, ಸಂವಾದವೆಂದು ರಾಜ್ಯದಲ್ಲಿ ರಾಹುಲ್ ಓಡಾಡಿದ್ದಾರೆ. ಬಹಿರಂಗ ಸಭೆಗಳನ್ನೂ ನಡೆಸಿದ್ದಾರೆ. ಆದರೆ ಇಷ್ಟರಿಂದಲೇ ಕಾಂಗ್ರೆಸ್ ಪುನಶ್ಚೇತನಗೊಂಡಿತೇ? ಇತ್ತೀಚೆಗೆ ರಾಜ್ಯ ಪದಾಧಿಕಾರಿಗಳ ನೇಮಕವೂ ಕಾಂಗ್ರೆಸ್ ಒಳಗಿನ ಒಳಜಗಳವನ್ನು ಇನ್ನಷ್ಟು ಹೆಚ್ಚಿಸಿದೆ. ಕಾಂಗ್ರೆಸ್ ಉಳಿದಿರೋದು ಕಾಲನನ್ನು ಕಾಯುವುದು ಮಾತ್ರವೇ? ○

ದಾರಿ ತಪ್ಪಿದ ಮಗ

ಕ್ಯಾತೆ

ಈ. ಬಸವರಾಜು
ಮಲ್ಲೇನಹಳ್ಳಿ

ಯಣ್ಣ, ದಾರಿ ತಪ್ಪಿದ ಮಗ ಯಾರ್ ಗೊತ್ತ?

ಇದ್ಯಾವ್ದೋ ವಸ ಪ್ರಸ್ನೆ ಕೇಳ್ತಾ ಇದ್ದೀಯಲ್ಲಣ್ಣ? ದಾರಿ ತಪ್ಪಿದ ಮಗ ಅಂತ ರಾಜ್ ಕುಮಾರ್ ಪಿಚ್ಚರ್ ಬಂದಿತ್ತು. ಬಾಳ ವಳ್ಳೆ ಪಿಚ್ಚರ್ರು. ಈಗೇನ್ ಏಳ್ತಾ ಇದ್ದೀಯೋ ನಂಗೆ ಗೊತ್ತಾಯ್ತಾ ಇಲ್ಲ.

ಆ ಪಿಚ್ಚರ್ ನಲ್ಲಿ ವಬ್ಬ ದಾರಿ ತಪ್ಪಿದ್ರೆ ಏನಾಗ್ ಬೌದು ಅಂತ ತೋರಿಸ್ಯವ್ರೆ. ಅಂಗೆ ಈಗ ನಮ್ ಲ್ಲಿ ವಬ್ಬ ದಾರಿ ತಪ್ಪಿದ್ ಮಗ ಅವ್ನೆ.

ಈ ಕಾಲ್ದಲ್ಲಿ ಬೇಕಾದಷ್ಟು ಜನ ಅಂತರಿರ್ತರೆ, ಆದ್ರೆ ವಬ್ಬ ಅಂತಿಯಲ, ಯಾರು?

ಇನ್ನ್ಯಾರು ಯಡೂರಪ್ಪ!

ಅವ್ನ ಅಂತದೇನ್ ಮಾಡ್ದ?

ನಾನು ಸ್ವಾಮಿಗಳು ಏಳಿದಂಗೆ ಕೇಳ್ತಿನಿ, ನಾನು ತಪ್ ಮಾಡಿದ್ರೆ ಕಿವಿ ಇಂಡಿ ಬುದ್ದಿ ಏಳಿ ಅಂದವ್ನೆ.

ಸರ್ಯಾಗೇ ಏಳ್ಯವ್ನೆ. ವಿನಯವಂತ ಅಲ್ವೆ?

ನಿಂಗೆ ಸ್ವಲ್ಪ ಇದು ಕಡ್ಮೆ ಅನ್ನದು ಇದ್ಕೆಯ.

ಯಾಕಣ್ಣ.

ವಬ್ಬ ಯಲೆಕ್ಷನ್ನಲಿ ಗೆದ್ದೋನು ಜನ ಏಳಿದಂಗೆ ಕೇಳ್ಬೇಕೋ, ಸ್ವಾಮಿಗಳು ಏಳಿದಂಗೆ ಕೇಳ್ಬೇಕೋ?

ಕರೆಟ್ಟು, ಇದು ನಂಗೆ ವಳ್ದಿರ್ಲ್ಲೇ ಇಲ್ಲ. ಅವ್ನ ಜನ ಏಳಿದಂಗೆ ಕೇಳ್ಬೇಕು. ಮತ್ತೆ ಅದ್ಯಾಕಂಗಂದ? ರಾತ್ರೆ ಏನಾರ ತಗಂಡು ಅದಿನ್ನು ಇಳ್ದಿರ್‌ಲ್ವಿಲ್ವೇನೋ!

ತಗಳೋರು ಸರ್ಯಾಗೇ ಮಾತಾಡ್ತರೆ. ಇದು ಬುದ್ದಿವಂತ್ರು ಲಕ್ಷಣ ಕಣಣ್ಣ.

ಇದ್ರಲ್ಲೇನ್ ಬುದ್ವಂತಿಕೆ?

ಈಗ ಅಷ್ಟೊಂತರ ಸ್ವಾಮಿಗೋಳು ಸೇರಿದ್ರು. ವೀರಶೈವರ ಸಮಾಜ್ವೆ ಅಲ್ಲಿ ಸೇರಿತ್ತು. ಅಲ್ಲಿ ಇಂತ ಮಾತಾಡಿದ್ರೆ ಸ್ವಾಮಿಗಳು ಸಂತೋಷಪಡ್ತರೆ. ಸ್ವಾಮಿಗೋಳು ಸಂತೋಸಪಟ್ರೆ ಅವ್ರ ಬಕ್ತರು ಸ್ವಾಮಿಗೋಳು ಏಳಿದಂಗೆ ಕೇಳ್ತರೆ. ಮುಂದಿನ್ ಯಲೆಕ್ಷನ್ನಿಗೆ ಅನುಕೂಲ ಆಯ್ತದೆ!

ಇನ್ನೇನ್ ಏಳಿದ್ನಂತೆ?

ನಂಗೆ ನಮ್ ಸರ್ಕಾರ್ದಲ್ಲೇ ವಿರೋದ್ ಪಕ್ಷಾನು ಅದೆ. ಬಾಳ ಕಷ್ಟಪಟ್ಟು ರಾಜ್ಯದ ಅಬಿವೃದ್ದಿ ಮಾಡ್ತಾ ಇದ್ದಿನಿ. ಇನ್ನೆಳ್ಡ್ ವರ್ಷ ಅಧಿಕಾರ ಕೊಡಿ. ಕರ್ನಾಟಕಾನ ಗುಜ್ರಾತ್ ಮಾಡ್ತಿನಿ, ಇನ್ ಮ್ಯಾಲೆ ತಪ್ ಮಾಡದಿಲ್ಲ ಅಂದ್ನಂತೆ!

ನಾನೇನಾದ್ರೂ ಅಲ್ಲಿದ್ರೆ ನೀನು ಏನಾದ್ರೂ ಮಾಡು, ಆದ್ರೆ ಕರ್ನಾಟಕಾನ ಗುಜ್ರಾತ್ ಮಾತ್ರ ಮಾಡ್ ಬ್ಯಾಡ ಕಣಪ್ಪ, ನಮ್ ರಾಜ್ಯಕ್ಕೆ ತುಂಬಾ ಮರ್ಯಾದಿ ಅದೆ, ಅದ ಕಳೀಬ್ಯಾಡ ಅಂತ ಅನಾಮತ್ ಕಾಲಿಡ್ಕಂಬುಡಿವೆ. ಜ್ವತಿಗೆ ಅವ್ನ ಓಗಿರದು ಒಂದ್ ಸಮಾಜದ ಸಮಾವೇಶಕ್ಕೆ. ಅಲ್ಲಿ ಅಧಿಕಾರ ಕೊಡಿ, ಅದ್ ಮಾಡ್ತಿನಿ, ಇದ್ ಮಾಡ್ತಿನಿ ಅನ್ನದು ತಪ್ಪಲ್ವೆ. ಎಲ್ಲಿ ಏನ್ ಮಾತಾಡ್ಬೇಕು ಅನ್ನದ ಅವ್ನಿಗೆ ಯಾರೂ ಏಳಿಕೊಟ್ಟೇ ಇಲ್ವೆ?

ಆ ಏಳಿಕೊಟ್ಟರೂ ಇದೇ ಬುದ್ದಿ ಮಾಡದಂತೆ. ಅದ್ಕೆ ಇವ್ನೂ ಅದ್ನೇ ಕಲ್ತವ್ನೆ? ಯಲ್ಲ ಕುರ್ಚಿ ರಾಜ್ಕೀಯ!

ಯಾರಣ್ಣ ಇವ್ರ ಗುರುಗಳು?

ಸಂಗಪರಿವಾರ ಅಂತ ಅದೆ. ಅವ್ರು ಬಾಯ್ ಬುಟ್ರೆ ಸುಳ್ಳೇ ಏಳದು.

ಅವ್ನು ಓಗ್ಲಿ, ಅಲ್ಲಿದ್ದ ಸ್ವಾಮಿಗಳಿರ ಸುಮ್ಕಿರಯ್ಯ. ಇಲ್ಲೇನ್ ಮಾತಾಡ್ಬೇಕೋ ಅದ ಮಾತಾಡು ಅನ್ನದಲ್ವೆ?

ಅವ್ರು ಸರಿ ಇದ್ರಲ್ವೆ? ಯಡೂರಪ್ಪ ಅಷ್ಟೊಂತರ ಆಸ್ತಿ ದುಡ್ ಮಾಡಿದ್ರೂ ನೀನೇ ವಳ್ಳೆ ಮು.ಮಂತ್ರಿ, ನಿನ್ ಬುಟ್ರೆಲ್ಲ ನಮ್ ಸಪೋರ್ಟೆಲ್ಲಾ ನಿಂಗೆಯಾ ಅಂತ ಏಳಿದ್ರಂತೆ.

ಬುಡು ಸ್ವಾಮಿಗೋಳೂ ಕೆಟ್ಟೋದ್ರು ಅಂದಂಗಾಯ್ತು. ಇಂತ ಸಿತಿ ಬರ್ಬಾರ್ದಾಗಿತ್ತು. ಇವ್ರು ಸ್ವಾಮಿಗಳೋ ಇಲ್ಲ ಪುಡಾರಿಗಳೋ ಅನ್ನದೇ ಗೊತ್ತಾಗ್ವಲ್ತು.

ಅವ್ರೇನಾರ ಆಗ್ಲಿ, ಯಡೂರಪ್ಪ ವಳ್ಳೆ ಮಾರ್ವಾಡಿ ಆಗ್ಯವ್ನೆ. ಯಂತ ಯಾಪಾರ ಮಾಡ್ತನೆ ಅಂತಿನಿ!

ಈಗ ಅದ್ನೂ ಸುರು ಮಾಡಿದ್ದನೇ?

ಅದ್ಕೆ ನಿಂಗೆ ಬುದ್ದಿ ಕಡ್ಮೆ ಅನ್ನದು. ದುಡ್ ಕೊಟ್ಟು ಸ್ವಾಮಿಗಳ್ನ ಕೊಂಡ್ ಕೊಂಡ. ಈಗ ಅವ್ರು ಇವ್ನ ಏನೇ ತಪ್ ಮಾಡಿದ್ರೂ ಎಲ್ಲಿ ಮಾಡಿದ್ದನು? ಅಂತ ಕೇಳಂಗಾದ್ರು. ಇನ್ನ ಯಮ್ಮೆಲ್ಲೆ ಗಳ್ನ ಕೊಂಡ್ ಕೊಂಡ. ಅಮ್ಯಾಲೆ ಜಾತಿ ಸಮಾವೇಶಕ್ಕೋಗಿ ಅಲ್ಲೂ ಗೋಳಾಡಿ ಅದಿಕಾರ ಕೊಡಿ ಅನ್ನದು, ಅವ್ರು ಅತ್ರ ಅಯ್ಯೋ ಪಾಪ ಅನಿಸ್ಕಳದು, ದುಡ್ನು ಆಸ್ತಿ ವಡ್ಯದು, ಇದ್ಕಿಂತ ಯಾಪಾರ ಬೇಕೇ? ○

ಬಲೆಯಲ್ಲಿ ಬಿದ್ದವರು

ಕರ್ಮ ಸಿದ್ದಾಂತವು ಪುನರ್ಜನ್ಮ ಎರಡು
ಕಟ್ಟುಕತೆ ನಮ್ಮವರ ಮಾಡಿಹವು ಕೊರಡು
ವಂಚಕರ ಈ ಎರಡು ಬಲೆಯಿಂದ ಹೊರಗೆ
ಬಾರದೇ ಭವಿಷ್ಯ ಇಲ್ಲವೋ ನಮಗೆ

- ವಿಡಂಬಾರಿ

ಬೊಗಳೆ ಪ್ರತಿಪಾದಕರು

ವಿಚಾರವಾದಿಗಳ ಪ್ರಶ್ನೆಗಳಿಗೆಲ್ಲ
ಮನುವಾದಿ ಜನರಲ್ಲಿ ಉತ್ತರವೇ ಇಲ್ಲ
ಹೀಗಾಗಿ ಏರುವುದು ಸಹಜವೇ ಸಿಟ್ಟು
ಇದು ಬೊಗಳೆ ಪ್ರತಿಪಾದಕರುಗಳ ಗುಟ್ಟು

- ವಿಡಂಬಾರಿ

ಜನಶಕ್ತಿ
ಕನ್ನಡ ವಾರಪತ್ರಿಕೆ

ಬುಡಕಟ್ಟು ಜನರ ದುಃಖ ದುಮ್ಮಾನ

ಏಪ್ರಿಲ್ 25 ಪ್ರಪ್ರಥಮ ರಾಜ್ಯ ಸಮಾವೇಶ

ಅರಣ್ಯ ಭೂಮಿಯ ಸಕ್ರಮಕ್ಕಾಗಿ, ಎಲ್ಲಾ ಆದಿವಾಸಿ ಕುಟುಂಬಗಳಿಗೆ ಅಂತ್ಯೋದಯ ರೇಷನ್ ಕಾರ್ಡಿಗಾಗಿ, ಮನೆ ನಿವೇಶನ, ವಸತಿಗಾಗಿ, ಬ್ಯಾಂಕ್ ಸಾಲ, ಶಿಕ್ಷಣಕ್ಕಾಗಿ, ರೇಗಾ ಜಾರಿಗಾಗಿ, ಆದಿವಾಸಿ ಜನರ ಸ್ವಾಭಿಮಾನ ಹಾಗೂ ಹಕ್ಕುಗಳಿಗಾಗಿ ಆದಿವಾಸಿಗಳ ಪ್ರಪ್ರಥಮ ರಾಜ್ಯ ಸಮಾವೇಶವನ್ನು ಏಪ್ರಿಲ್ 25.2011ರ ಸೋಮವಾರ ಬೆಳ್ಳಿಗೆ 11.00ಗಂಟೆಗೆ, ಮೈಸೂರಿನ ಕಲಾಮಂದಿರದಲ್ಲಿ ಸಂಘಟಿಸಲಾಗುತ್ತಿದೆ.

ಮೈಸೂರು, ಚಾಮರಾಜನಗರ, ಕೊಡಗು, ದಕ್ಷಿಣ ಕನ್ನಡ, ಉತ್ತರ ಕನ್ನಡ, ಉಡುಪಿ, ಚಿಕ್ಕ ಮಗಳೂರು, ಶಿವಮೊಗ್ಗ, ರಾಮನಗರ ಜಿಲ್ಲೆಗಳಿಂದ ಸಾವಿರಕ್ಕೂ ಹೆಚ್ಚು ಆದಿವಾಸಿಗಳು ಭಾಗವಹಿಸು ತ್ತಿದ್ದಾರೆ. ಈ ಹಿನ್ನಲೆಯಲ್ಲಿ ಈ ಲೇಖನ.

ದೇಶದ್ಯಂತ ಸುಮಾರು 8 ಕೋಟಿ ಆದಿವಾಸಿಗಳು ವಾಸವಾಡುತ್ತಿದ್ದಾರೆ. ರಾಜ್ಯದಲ್ಲಿಯೂ ಲಕ್ಷಾಂತರ ಜನ ವಾಸ ಮಾಡುತ್ತಿದ್ದಾರೆ. ಇವರಲ್ಲಿ ಅರಣ್ಯಗಳಲ್ಲಿ ವಾಸಮಾಡುವ ಹಾಗೂ ಅರಣ್ಯಗಳಿಂದ ಹೊರಗೆ ವಾಸ ಮಾಡುವ ಎರಡು ರೀತಿಯ ಗುಂಪುಗಳಿವೆ.

ಜೇನು ಕುರುಬರು, ಹಾಲು ಕುರುಬರು, ಕೊರಗ, ಮಲೆ ಕುಡಿಯರು, ಮರಾಠಿ ನಾಯಕರು, ...ಂಬಾಣಿಗಳು, ಸಿದ್ದಿ ಇತ್ಯಾದಿ ಗುಂಪುಗಳು ಅರಣ್ಯದಿಂದ ಹೊರಗೆ ಜೀವನ ಮಾಡುತ್ತಿರುವವರು. ಇದೇ ರೀತಿಯಲ್ಲಿ ಗುಂಪುಗಳಲ್ಲಿ ಕೆಲವರು, ಅಲ್ಲದೆ ...ವರ ಇನ್ನಷ್ಟು ಗುಂಪುಗಳು ಆರಣ್ಯದೊಳಗೆ ಜೀವನ ಮಾಡುತ್ತಿರುವವರು ಇದ್ದಾರೆ.

ಅರಣ್ಯದಿಂದ ಹೊರಗೆ ವಾಸ ಮಾಡುತ್ತಿರುವರ ಗುಂಪುಗಳು ಬಹುತೇಕ ಆದಿವಾಸಿಗಳಿಗೆ ಸ್ವಂತ ಭೂಮಿ, ಮನೆ ಇಲ್ಲ, ಮಾಲೀಕರ ತೋಟ, ಭೂಮಿಗಳಲ್ಲಿ ವಾಸ. ಇವರಲ್ಲಿ ದೊಡ್ಡ ಸಂಖ್ಯೆಯ ...ನರು, ಅಲೆಮಾರಿಗಳು ಆಗಿರುವ ಹಿನ್ನಲೆಯಲ್ಲಿ ...ತದಾರರ ಪಟ್ಟಿಯಲ್ಲಿ ಹೆಸರಿಲ್ಲದೆ, ರೇಷನ್ ಕಾರ್ಡ್, ಇತ್ಯಾದಿ ಸರ್ಕಾರಿ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಸ್ವಂತ ಭೂಮಿ, ಮನೆಯಿಲ್ಲದೆ ಮಾಲೀಕರ ಖಾಸಗಿ ತೋಟಗಳಲ್ಲಿ ವಾಸ ಮಾಡುತ್ತಿರುವ ಇವರಿಗೆ ಸರಿಯಾದ ಕೂಲಿ ಇಲ್ಲ. ...ಳ್ಳು ಲೆಕ್ಕಾಚಾರಗಳು, ಸಾಲವನ್ನು ತೀರಿಸಲಾಗದೇ, ...ೀತ ಪದ್ಧತಿ'ಯು ಹಲವಾರು ಕಡೆ ಜಾರಿಯಲ್ಲಿ ಇದೆ. ...ೀತಕ್ಕೆ' ಇರುವವರು, ಜೀವನದ ಉದ್ದಕ್ಕೂ ಮಾಲೀಕರು ಹೇಳಿದ ಲೆಕ್ಕಚಾರಗಳು, ಸಾಲಗಳನ್ನು ತೀರಿಸಲು ಸಾಧ್ಯವಾಗದಿರುವ ಸಂದರ್ಭಗಳಲ್ಲಿ ...ಜಮಾನರಿಂದ 'ಆದಿವಾಸಿ' ಗಳ ಮಾರಾಟದಂತ



ದುಷ್ಟ ಪದ್ದತಿಯು ರಾಜ್ಯದ ಹಲವಾರು ಕಡೆ ಜಾರಿಯಲ್ಲಿ ಇದೆ.

ಅರಣ್ಯದಲ್ಲಿ ಮತ್ತು ಆರಣ್ಯ ಅಂಚಿನಲ್ಲಿ ವಾಸಮಾಡುವ 'ಆದಿವಾಸಿ'ಗಳಿಗೆ ಅರಣ್ಯದ ಕಿರು ಉತ್ಪನ್ನಗಳ ಸಂಗ್ರಹಣೆ, ಮತ್ತು ಮಾರಾಟಕ್ಕೂ ಅವಕಾಶವಿರಬೇಕು.

ಇಂತಹ ದುಸ್ಥಿತಿಯಲ್ಲಿರುವ ಈ 'ಆದಿವಾಸಿ' ಗಳ ಅಭಿವೃದ್ದಿಗಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಹಲವಾರು ಯೋಜನೆಗಳು ಹಾಗೂ ಕಾಯ್ದೆಗಳು ಇದ್ದು, ಸಮರ್ಪಕವಾಗಿ ಜಾರಿಯಾಗುತ್ತಿಲ್ಲ. ವಿಶೇಷ ಯೋಜನೆಗಳ ಹೆಸರಿನಲ್ಲಿ ಬರುವ ಹಣ ನಿಜವಾದ ಫಲಾನಿಭವಿಗಳಿಗೆ ಸಿಗದೇ, ದೊಡ್ಡ ಪ್ರಮಾಣದಲ್ಲಿ ಸೋರಿಕೆಯಾಗುತ್ತಿದೆ.

ಈ ಹಿನ್ನಲೆಯಲ್ಲಿ ಹಲವಾರು ದಶಕಗಳ ಹೋರಾಟದ ಫಲವಾಗಿ ಜಾರಿಗೆ ಬಂದಿರುವ ಅರಣ್ಯ ಕಾಯ್ದೆ-2006ರನ್ನು ಸಮರ್ಪಕವಾಗಿ ಜಾರಿ ಮಾಡಿ, ಎಲ್ಲಾ ಆದಿವಾಸಿಗಳಿಗೆ ಭೂಮಿಯ ಒಡೆತನವನ್ನು ನೀಡಬೇಕು. ಈ ಕಾಯ್ದೆ ಜಾರಿಯಾಗಿ ಮೂರು ವರ್ಷ ಕಳೆದರೂ, ಆದಿವಾಸಿಗಳಿಂದ ಬಂದಿರುವ ಒಟ್ಟು 20,457 ಅರ್ಜಿಗಳಲ್ಲಿ ಈ ತನಕ 6522 ಅರ್ಜಿದಾರರಿಗೆ 8500.22 ಎಕರೆಗಳನ್ನು ಮಾತ್ರ ಭೂಮಿಯ ಒಡೆತನವನ್ನು ನೀಡಲಾಗಿದೆ. ರಾಮನಗರ ಇತ್ಯಾದಿ ಜಿಲ್ಲೆಗಳಲ್ಲಿ ಈ ದಿಸೆಯಲ್ಲಿ ಪ್ರಥಮಿಕ ಹಂತದ ಕೆಲಸಗಳನ್ನೆ ರಾಜ್ಯ ಸರ್ಕಾರ ಆರಂಭ ಮಾಡಿಲ್ಲ. ಈ ಬಗ್ಗೆ ಹಲವಾರು ಹೋರಾಟಗಳನ್ನು ನಡೆಸಿದ ನಂತರವೂ, ಸಾವಿರಾರು ಆದಿವಾಸಿಗಳು ಇರುವ ರಾಮನಗರದಲ್ಲಿ ಆರ್ಜಿಗಳನ್ನು ತೆಗೆದುಕೊಳ್ಳಲು ಆರಣ್ಯ ಕಾಯ್ದೆ ಅನ್ವಯ ಗ್ರಾಮ ಸಮಿತಿ ಇತ್ಯಾದಿಗಳನ್ನು ರಾಜ್ಯ ಸರ್ಕಾರ ರಚನೆಯೇ ಮಾಡಿಲ್ಲ. ಈಗ ಆರ್ಜಿಗಳು ಬಂದಿರುವ ಜಿಲ್ಲೆಗಳಲ್ಲಿ ಇನ್ನೂ ಈ ಬಗ್ಗೆ ಮಾಹಿತಿಯಿಲ್ಲದೆ ಆರ್ಜಿಗಳನ್ನು ಸಲ್ಲಿಸಿಲ್ಲ 'ಆದಿವಾಸಿ' ಗಳ ಅಭಿವೃದ್ದಿಗೆ ಮೂಲ ಅಂಶವಾಗಿರುವ 'ಭೂಮಿ ಪ್ರಶ್ನೆ' ಇತ್ಯಾರ್ಥ ಮಾಡಲು ರಾಜ್ಯ ಸರ್ಕಾರ ಪರಿಣಾಮಕಾರಿಯಾಗಿ ಕೆಲಸಕ್ಕೆ ಮುಂದಾಗಬೇಕಾಗಿದೆ. ಅಲ್ಲದೆ, ಈಗಾಗಲೇ ತಿಳಿಸಿದಂತೆ 'ಆದಿವಾಸಿ'ಗಳನ್ನು ತಕ್ಷಣ ಹಸಿವಿನಿಂದ ಪಾರುಮಾಡಲು ವಿಶೇಷ ಪ್ರಯತ್ನಗಳ ಮೂಲಕ ಎಲ್ಲರಿಗೂ 'ಅಂತ್ಯೋದಯ ರೇಷನ್ ಕಾರ್ಡ್' ಗಳನ್ನು ನೀಡಬೇಕು, 'ಆದಿವಾಸಿ' ಗಳ ಮನೆ ನಿವೇಶನ, ಮನೆ ನಿರ್ಮಾಣ, ಮನೆಗಳ ರಿಪೇರಿಗಾಗಿ ಇರುವ ಯೋಜನೆಗಳನ್ನು ಕಟ್ಟು ನಿಟ್ಟಾಗಿ ಜಾರಿ ಮಾಡಿ ಪರಿಹಾರ ನೀಡಬೇಕು. ಅಗತ್ಯ ವಿದ್ದಲ್ಲಿ ಹೆಚ್ಚಿನ ಅನುದಾನವನ್ನು ಸಹ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನೀಡಬೇಕು. ಪರಿಶಿಷ್ಟ ಜಾತಿ, ಪಂಗಡ, ಆದಿವಾಸಿಗಳಿಗೆ 'ಆದ್ಯತೆ' ವಲಯ ವಾಗಿರುವ ಹಿನ್ನಲೆಯಲ್ಲಿ ಕಡಿಮೆ ಬಡ್ಡಿಯಲ್ಲಿ ಕೃಷಿ ಮತ್ತು ಕೃಷಿಯೇತರ ಬ್ಯಾಂಕ್ ಸಾಲಗಳನ್ನು ನೀಡಬೇಕು, ಶಿಕ್ಷಣಕ್ಕಾಗಿ ಹಾಲಿ ಇರುವ ಯೋಜನೆಗಳನ್ನು ಸಕ್ರಮವಾಗಿ ಜಾರಿಮಾಡಬೇಕು, ವಸತಿ ಶಾಲೆಗಳು ಹೆಚ್ಚಾಗಬೇಕು. ವಿದ್ಯಾರ್ಥಿನಿಲಯಗಳಲ್ಲಿ ನಡೆಯುತ್ತಿರುವ ಭ್ರಷ್ಟಚಾರಕ್ಕೂ ಕಡಿವಾಣ ಹಾಕಿ, 'ವಸತಿ' ಮತ್ತು 'ಊಟದ' ಗುಣಮಟ್ಟವನ್ನು ಹೆಚ್ಚಿಸಬೇಕು. 'ಆದಿವಾಸಿ'ಗಳು ವಾಸಮಾಡುವ 'ಹಾಡಿ'ಗಳ ರಸ್ತೆ, ಕುಡಿಯುವ ನೀರು ಇತ್ಯಾದಿಗಳನ್ನು ನಾಗರೀಕ ಸೌಗಭ್ಯಗಳಿಗೆ ಹೆಚ್ಚಿನ ಒತ್ತು ನೀಡಬೇಕು. ವಿಶೇಷವಾಗಿ ಗ್ರಾಮೀಣಾ ಉದ್ಯೋಗ ಖಾತರಿ ಯೋಜನೆಯನ್ನು ಈ ದಿಸೆಯಲ್ಲಿ ಪರಿಣಾಮಕಾರಿ ಯಾಗಿ ಬಳಸಲು ಸಾಧ್ಯವಾಗಬೇಕು. ಇದು ಹಾಡಿಗಳ ಅಭಿವೃದ್ದಿಯ ಜೊತೆಗೆ 'ಆದಿವಾಸಿ' ಗಳ ಉದ್ಯೋಗವನ್ನು ನೀಡಿದಂತಾಗುತ್ತದೆ.

ಹಾಲಕ್ಕಿ ಒಕ್ಕಲು ಸೇರ್ಪಡೆಯ ಬಗ್ಗೆ :-

ಉತ್ತರ ಕನ್ನಡ ಜಿಲ್ಲೆಯಲ್ಲಿ ವಾಸವಾಗಿರುವ 'ಹಾಲಕ್ಕಿ ಒಕ್ಕಲು' ಜನಾಂಗವನ್ನು 'ಪರಿಶಿಷ್ಟ ಪಂಗಡ' ದ ಪಟ್ಟಿಗೆ ಸೇರಿಸಬೇಕೆಂಬ ರಾಜ್ಯ ಸರ್ಕಾರದ 21.10.2009ರ ಶಿಫಾರಸ್ಸಿಗೆ ಕೇಂದ್ರ ಸರ್ಕಾರ ತಕ್ಷಣ ಒಪ್ಪಿಗೆ ನೀಡಬೇಕು.

ಆದೇ ಸಂದರ್ಭದಲ್ಲಿ 'ಹಾಲಕ್ಕಿ ಒಕ್ಕಲು' ಜನಾಂಗದ ರೀತಿಯಲ್ಲಿಯೇ ಜೀವನ ಮಾಡುತ್ತಿರುವ ಉತ್ತರ ಕನ್ನಡ ಜಿಲ್ಲೆಯ 'ಕುಣಬಿ' 'ಗೌಳಿ' 'ಕುಂಬಿ, ಮಾರಾಠಿ' ಜನಾಂಗಗಳನ್ನು ಸಹ 'ಪರಿಶಿಷ್ಟ ಪಂಗಡ'ದ ಪಟ್ಟಿಗೆ ಸೇರಿಸಲು ರಾಜ್ಯ ಸರ್ಕಾರ ತೀರ್ಮಾನಿಸಿ, ಕೇಂದ್ರ ಸರ್ಕಾರದ ಆಂಗೀಕರಣಕ್ಕೆ ಕಳುಹಿಸಿ ಕೊಡಬೇಕೆಂಬ ಆಗ್ರಹಗಳಿವೆ.

ಈ ಎಲ್ಲಾ ಸೌಲಭ್ಯಗಳ ಜೊತೆಗೆ, ಆದಿವಾಸಿಗಳ ಸಂಸತಿ ರಕ್ಷಣೆ, ಆದಿವಾಸಿಗಳ ಮೇಲೆ, ವಿಶೇಷವಾಗಿ ಆದಿವಾಸಿ ಮಹಿಳೆಯರ ಮೇಲೆ ನಿರಂತರ ವಾಗಿ ನಡೆಯುತ್ತಿರುವ ದೌರ್ಜನ್ಯ, ಆತ್ಯಚಾರಗಳು ಸಂಪೂರ್ಣವಾಗಿ ನಿಲ್ಲಿಸಲು ಸಾಧ್ಯವಾಗಬೇಕು.

ಈ ಹಿನ್ನಲೆಯಲ್ಲಿ ಏಪ್ರಿಲ್ 25.2011ರಂದು ಮೈಸೂರಿನಲ್ಲಿ ನಡೆಯುತ್ತಿರುವ 'ಆದಿವಾಸಿಗಳ ರಾಜ್ಯ ಸಮಾವೇಶ' ಈ ಮೇಲಿನ ಎಲ್ಲಾ ಅಂಶಗಳ ಬಗ್ಗೆ ಸಮಗ್ರ ವಾಗಿ ಚರ್ಚಿಸಿ 'ಆದಿವಾಸಿ'ಗಳ ಬೇಡಿಕೆಗಳ ಜೊತೆಗೆ ಅವರ ಬದುಕು, ಸಂಸ್ಕತಿ, ಹಕ್ಕುಗಳನ್ನು ರಕ್ಷಿಸಿ ಕೊಳ್ಳಲು ಅಗತ್ಯವಿರುವ 'ಚಳುವಳಿ' ಮತ್ತು 'ಸಂಘಟನೆ' ಯನ್ನು ಕಟ್ಟುವುದರ ಕುರಿತು ಹಲವಾರು ನಿರ್ಣಯಗಳನ್ನು ಕೈಗೊಳಲಿದೆ.

ಭ್ರಷ್ಟಾಚಾರ ಮತ್ತು ದುಡಿವ ವರ್ಗದ ದೃಷ್ಟಿಕೋನ

ಮೇ ದಿನದ ವಿಶೇಷ : ಮುಂಗಡ ಪ್ರತಿಗಳನ್ನು ಕಾಯ್ದಿರಿಸಿ

ಈ ಮೇ ದುಡಿವ ಜನರ ಪ್ರಾಣಮಿತ್ರ ಪುನರಾರಂಭಗೊಂಡು ನಾಲ್ಕು ವರುಷಗಳ ಕಳೆದವಿ. 5 ಕ್ಕೆ ಪಾದಾರ್ಪಣೆ. ಈ ಒಂದು ಘಟ್ಟದಲ್ಲಿ ಪತ್ರಿಕೆ ಹೊಸ ಸ್ವರೂಪದಲ್ಲಿ ಓದುಗರ ಕೈ ಸೇರಬೇಕೆಂಬುದು ಸಂಪಾದಕೀಯ ಮಂಡಳಿಯ ಸಂಕಲ್ಪ. ಮೇ ದಿನದ ವಿಶೇಷಕ್ಕೆಂದೇ ನಾವು ಆಯ್ಕೆ ಮಾಡಿಕೊಂಡ ವಿಷಯ. 'ಭ್ರಷ್ಟಾಚಾರ ಮತ್ತು ದುಡಿಯುವ ವರ್ಗ.' ಅತ್ಯಂತ ವ್ಯಾಪಕವಾಗಿರುವ ಹಾಗೂ ನಿತ್ಯವೂ ಬಹು ಚರ್ಚಿತವಾಗುತ್ತಿರುವ ಭ್ರಷ್ಟಾಚಾರದ ಪ್ರಶ್ನೆ ಅಮೂರ್ತವಾದ ಸಂಗತಿಯಲ್ಲ, ಅದಕ್ಕೊಂದು ವರ್ಗ ತಳಹದಿ ಇದೆ. ಅದನ್ನು ದುಡಿವ ವರ್ಗದ ದೃಷ್ಟಿಕೋನದಿಂದ ಜನರೆದುರು ವಿಶ್ಲೇಷಿಸುವ ಅಗತ್ಯವಿದೆ.


ಹೀಗೆ ವಿಭಿನ್ನ ಬರಹಗಳನ್ನು ಈ ಸಂಚಿಕೆ ಒಳಗೊಳ್ಳಲಿದೆ. ಇಂತಹ ಸಂಚಿಕೆ, ಎಲ್ಲರಿಗೂ ಸಿಗುವಂತಾಗಬೇಕು. ವಿಶೇಷವಾಗಿ ಪ್ರತಿವಾರವೂ ಜನಶಕ್ತಿ ಪತ್ರಿಕೆಯು ದುಡಿವ ಎಲ್ಲಾ ವಿಭಾಗಗಳ ಜನರನ್ನು ತಲುಪಬೇಕು. ಅದಕ್ಕೆಂದೇ ಈ ವಿಶೇಷ ಬರಹಗಳ ಸಂಚಿಕೆಯನ್ನು ಮೇ ದಿನದ ರ್‍ಯಾಲಿಗಳಲ್ಲಿ ಶ್ರಮಿಕರ ಕೈಗಿಡಬೇಕು. ಈ ಹಿನ್ನೆಲೆಯಲ್ಲಿ ಈ ಕೂಡಲೇ ಅಗತ್ಯವಿರುವಷ್ಟು ಪ್ರತಿಗಳನ್ನು ಮುಂಗಡ ಕಾಯ್ದಿರಿಸಿ. ವಿಶೇಷವಾಗಿ ಏಜೆನ್ಸಿದಾರರು ಇದನ್ನು ಗಮನಿಸಬೇಕು. ಮುಂಗಡ ತಿಳಿಸಬೇಕು.

ಸಂಪರ್ಕಕ್ಕೆ : 9448505759, 9482220931

ರಾಜ್ಯ ಮತ್ತು ಕೇಂದ್ರ ಸರಕಾರದ ಭ್ರಷ್ಟಾಚಾರದ ವಿರುದ್ಧ ಕರಾವಳಿ ಜಿಲ್ಲೆಗಳಲ್ಲಿ ಪ್ರತಿಭಟನೆ

ರಾಜ್ಯ ಮತ್ತು ಕೇಂದ್ರ ಸರಕಾರಗಳ ಭ್ರಷ್ಟಾಚಾರ, ಅಸಮರ್ಪಕ ಆಡಳಿತದ ವಿರುದ್ಧ ಹಾಗೂ ಜನತೆಯ ಜ್ವಲಂತ ಸಮಸ್ಯೆಗಳ ಪರಿಹಾರಕ್ಕೆ ಒತ್ತಾಯಿಸಿ ಸಿಪಿಎಂ ಪಕ್ಷದ ವತಿಯಿಂದ.ದಕ್ಷಿಣಕನ್ನಡ ಹಾಗೂ ಉಡುಪಿ ಜಿಲ್ಲೆಗಳ ಎಲ್ಲ ತಾಲ್ಲೂಕು ಕಚೇರಿಗಳ ಎದುರುಗಡೆ ಏಪ್ರಿಲ್ 19 ರಂದು ಪ್ರತಿಭಟನಾ ಪ್ರದರ್ಶನಗಳು ನಡೆದವು. ಭ್ರಷ್ಟಾಚಾರದ ವಿರುದ್ಧ ರಾಜ್ಯಾದ್ಯಂತ ಪ್ರತಿಭಟನೆಗಳನ್ನು ನಡೆಸಬೇಕೆಂದು ಸಿಪಿಐ(ಎಂ) ಪಕ್ಷ ಕೊಟ್ಟ ಕರೆ ಮೇರೆಗೆ ಈ ದಿನದಂದು ಎಲ್ಲೆಡೆ ಪ್ರತಿಭಟನೆಗಳು ನಡೆದವು.

ಮಂಗಳೂರು : ಸಿಪಿಎಂ ದಕ್ಷಿಣ ಕನ್ನಡ ಜಿಲ್ಲಾ ಸಮಿತಿ ವತಿಯಿಂದ ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ಕಚೇರಿ ಎದುರುಗಡೆ ಧರಣಿ ಸತ್ಯಾಗ್ರಹ ಮತ್ತು ಪಿಕೆಟಿಂಗ್ ನಡೆಸಲಾಯಿತು. ಸಾವಿರ ಸಂಖ್ಯೆಯ ಪ್ರತಿಭಟನಾಕಾರರು ಮಂಗಳೂರು ಪುರಭವನದ ಬದಿಯಿಂದ ಘೋಷಣೆಗಳೊಂದಿಗೆ ಮೆರವಣಿಗೆ ಹೊರಟು, ಜಿಲ್ಲಾಧಿಕಾರಿ ಕಚೇರಿ ಎದುರು ಧರಣಿ ಕುಳಿತರು.



ವಾ. ಉ.

ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದ ಸಿಪಿಎಂ ದಕ್ಷಿಣಕನ್ನಡ ಜಿಲ್ಲಾ ಸಮಿತಿ ಕಾರ್ಯದರ್ಶಿ ಬಿ.ಮಾಧವ ಅವರು ಭ್ರಷ್ಟಾಚಾರದಲ್ಲಿ ನಿರತವಾಗಿರುವ ಕೇಂದ್ರದ ಯುಪಿಎ ಸರಕಾರ ಹಾಗೂ ರಾಜ್ಯದ ಬಿಜೆಪಿ ಸರಕಾರ ಜನಸಾಮಾನ್ಯರ ಸಮಸ್ಯೆಗಳನ್ನು ಸಂಪೂರ್ಣವಾಗಿ ಕಡೆಗಣಿಸಿದೆ ಎಂದು ಟೀಕಿಸಿದರು. ರೇಷನ್ ಪದ್ಧತಿಯ ಅವ್ಯವಸ್ಥೆ, ಅಸಂಘಟಿತ ಕಾರ್ಮಿಕರಿಗೆ ಕನಿಷ್ಟ ಕೂಲಿ ನಿಗದಿಪಡಿಸುವ ಬಗ್ಗೆ ನಿರ್ಲಕ್ಷ್ಯ ತಾಳಿರುವ ಸರಕಾರ, ದೋಷಪೂರ್ಣವಾಗಿರುವ ಹೊಸ ಪಿಂಚಣಿ ಯೋಜನೆಯನ್ನು ಅಸಂಘಟಿತ ಕಾರ್ಮಿಕರ ಮೇಲೆ ಹೇರಲು ಪ್ರಯತ್ನಿಸುತ್ತಿದೆ ಎಂದು ಖಂಡಿಸಿದರು.

ಸಿಪಿಎಂ ಜಿಲ್ಲಾ ಸಮಿತಿ ನಾಯಕರಾದ ಕೆ.ಆರ್.ಶ್ರೀಯಾನ್, ಸುನಿಲ್‌ಕುಮಾರ್ ಬಜಾಲ್ ಕೂಡಾ ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದರು. ಜಿಲ್ಲಾ ಸಮಿತಿ ಸದಸ್ಯರಾದ ಯು.ಬಿ.ಲೋಕಯ್ಯ, ಜೆ.ಬಾಲಕೃಷ್ಣ ಶೆಟ್ಟಿ, ಕೃಷ್ಣಪ್ಪ ಸಾಲ್ಯಾನ್, ಸುಕುಮಾರ್, ಪದ್ಮಾವತಿ ಶೆಟ್ಟಿ ಭಾಗವಹಿಸಿದ್ದರು. ಪಿಕೆಟಿಂಗ್ ಮೂಲಕ ತಾಲ್ಲೂಕು ಕಚೇರಿಗೆ ಮುತ್ತಿಗೆ ಹಾಕಿದ ಪ್ರತಿಭಟನಾಕಾರರನ್ನು ಪೊಲೀಸರು ಬಂಧಿಸಿ ಬಳಿಕ ಬಿಡುಗಡೆ ಮಾಡಿದರು.

ಉಡುಪಿ : ಸಿಪಿಎಂ ಉಡುಪಿ ತಾಲ್ಲೂಕು ಸಮಿತಿಯ ನೇತೃತ್ವದಲ್ಲಿ ಉಡುಪಿ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಿಂದ ಪ್ರತಿಭಟನಾ ಮೆರವಣಿಗೆ ನಡೆಸಿದ ಕಾರ್ಮಿಕರು, ರೈತರು, ಮಹಿಳೆಯರು ಸರಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು. ಬಳಿಕ ಉಡುಪಿ ತಾಲ್ಲೂಕು ಕಚೇರಿ ಎದುರು ಪ್ರತಿಭಟನಾ ಸಭೆ ನಡೆಸಲಾಯಿತು.

ಸಿಪಿಎಂ ಪಕ್ಷದ ಜಿಲ್ಲಾ ಸಮಿತಿ ಮುಖಂಡರಾದ ಪಿ.ವಿಶ್ವನಾಥ್ ರೈ ಮತ್ತಿತರರು ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಉಡುಪಿ ತಾಲ್ಲೂಕು ಸಿಪಿಎಂ ಮುಖಂಡರಾದ ರಮೇಶ್ ಮೆಂಡನ್, ದೋಗು ಸುವರ್ಣ, ಎಚ್.ವಿಠ್ಠಲ, ಕೆ.ಲಕ್ಷ್ಮಣ ಮೊದಲಾದವರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ಕುಂದಾಪುರ : ಸಿಪಿಎಂ ಕುಂದಾಪುರ ತಾಲ್ಲೂಕು ಸಮಿತಿ ನೇತೃತ್ವದಲ್ಲಿ ಬೃಹತ್ ಸಂಖ್ಯೆಯಲ್ಲಿ ಕಾರ್ಮಿಕರು, ರೈತರು ಮತ್ತು ಮಹಿಳೆಯರು ಕುಂದಾಪುರ ತಾಲ್ಲೂಕು ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು. ಬಳಿಕ ತಹಶೀಲ್ದಾರರ ಮೂಲಕ ಮುಖ್ಯಮಂತ್ರಿಗೆ ಮನವಿ ಸಲ್ಲಿಸಲಾಯಿತು.

ಪ್ರತಿಭಟನಾಕಾರರನ್ನುದ್ದೇಶಿಸಿ, ಸಿಪಿಎಂ ಉಡುಪಿ ಜಿಲ್ಲಾ ಸಮಿತಿ ಕಾರ್ಯದರ್ಶಿ ಕೆ.ಶಂಕರ್ ಮಾತನಾಡಿದರು. ಎಲ್ಲ ಕೈಗಾರಿಕಾ ಕಾರ್ಮಿಕರಿಗೆ ತಿಂಗಳಿಗೆ 6000 ರೂ. ಕನಿಷ್ಟ ಕೂಲಿ ನಿಗದಿಪಡಿಸಬೇಕು; ಎಲ್ಲರಿಗೂ ಪಡಿತರ ಚೀಟಿ ಮೂಲಕ 2 ರೂ. ದರದಲ್ಲಿ 1 ಕೆ.ಜಿ ಅಕ್ಕಿ ಹಾಗೂ 35 ಕೆ.ಜಿ. ದವಸಧಾನ್ಯ ನೀಡಬೇಕು; ಅಸಂಘಟಿತ ಕಾರ್ಮಿಕರಿಗೆ ನಿಧಿ ಸ್ಥಾಪನೆ, ಬೀಡಿ ಕಾರ್ಮಿಕರಿಗೆ ಸಾವಿರ ಬೀಡಿಗೆ 125 ರೂ. ಪಾವತಿ ನೀಡಬೇಕೆಂದು ಧರಣಿ ನಿರತರು ಆಗ್ರಹಿಸಿದರು. ಸಿಪಿಎಂ ಮುಖಂಡರಾದ ದಾಸು ಭಂಡಾರಿ, ಮಹಾಬಲ ವಡೇರಹೋಬಳಿ, ಎಚ್. ನರಸಿಂಹ, ಚಂದ್ರಶೇಖರ.ವಿ, ಸುರೇಶ್ ಕಲ್ಲಾಗರ ಮೊದಲಾದವರು ಉಪಸ್ಥಿತರಿದ್ದರು.


ಉಡುಪಿಯ ತಾಲ್ಲೂಕು ಕಚೇರಿ ಎದುರು ನಡೆದ ಪ್ರತಿಭಟನೆ

ಬಂಟ್ವಾಳ : ಬಿ.ಸಿ.ರೋಡ್ ಸರ್ಕಲ್‌ನಿಂದ ಬಂಟ್ವಾಳ ತಾಲ್ಲೂಕು ಕಚೇರಿಗೆ ಮೆರವಣಿಗೆಯಲ್ಲಿ ಸಾಗಿ ಬಂದ ಕಾರ್ಮಿಕ ರೈತರು ತಾಲ್ಲೂಕು ಕಚೇರಿಗೆ ಮುತ್ತಿಗೆ ಹಾಕಿ ಬಂಧನಕ್ಕೊಳಗಾದರು. ಪ್ರತಿಭಟನಾಕಾರರನ್ನುದ್ದೇಶಿಸಿ ಸಿಪಿಎಂ ಪಕ್ಷದ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ವಸಂತ ಆಚಾರಿ ಮಾತನಾಡಿದರು.

ತಾಲ್ಲೂಕು ಸಿಪಿಎಂ ಮುಖಂಡರಾದ ರಾಮಣ್ಣ ವಿಟ್ಲ, ವಾಸುಗಟ್ಟಿ, ಸಂಜೀವ ಬಂಗೇರ, ಉದಯಕುಮಾರ್, ಶೀನ ಬಂಗೇರ, ವಿಮಲಾ, ಮಾರಪ್ಪ, ಬಡಕಬೈಲು, ಜಾನಕಿ ಶಂಬೂರು, ವೈ.ಕೆ.ನಾರಾಯಣ, ನಾರಾಯಣ ಬಡಕಬೈಲು, ಡೊಂಬಯ್ಯ ಮತ್ತಿತರರು ಉಪಸ್ಥಿತರಿದ್ದರು.


ಮಂಗಳೂರಿನಲ್ಲಿ ದಕ್ಷಿಣಕನ್ನಡ ಜಿಲ್ಲಾಧಿಕಾರಿ ಕಛೇರಿ ಎದುರು ನಡೆದ ಪ್ರತಿಭಟನೆ

ಪುತ್ತೂರು : ಪಕ್ಷದ ತಾಲ್ಲೂಕಿನ ಸದಸ್ಯರ ನೇತೃತ್ವದಲ್ಲಿ ಪುತ್ತೂರು ತಾಲ್ಲೂಕು ಕಚೇರಿ ಮುಂಭಾಗದಲ್ಲಿ ಧರಣಿ ನಡೆಸಲಾಯಿತು. ತಾಲ್ಲೂಕು ಕಚೇರಿ ಮುಂಭಾಗದಲ್ಲಿ ಕುಳಿತುಕೊಂಡ ಧರಣಿನಿರತರನ್ನು ನಗರ ಪೊಲೀಸರು ಬಂಧಿಸಿ ಬಳಿಕ ಬಿಡುಗಡೆಗೊಳಿಸಿದರು. ತಾಲ್ಲೂಕಿನ ಪಕ್ಷದ ಮುಖಂಡರಾದ ಸತೀಶನ್ ಹಾಗೂ ರವೀಂದ್ರ ರೈ, ಕೇಶವ ಗೌಡ, ಬೇಬಿ, ಗೀತಾ ಕೊರಗಪ್ಪ ಮತ್ತಿತರರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ಸುಳ್ಯ : ಸಿಪಿಎಂ ಸುಳ್ಯ ಘಟಕದ ವತಿಯಿಂದ ಸುಳ್ಯ ತಾಲ್ಲೂಕು ಕಚೇರಿಯೆದುರು ಪಿಕೆಟಿಂಗ್ ನಡೆಸಲಾಯಿತು. ಪಕ್ಷದ ಕಚೇರಿಯಿಂದ ಪ್ರತಿಭಟನಾ ಮೆರವಣಿಗೆಯಲ್ಲಿ ಬಂದ ಸಿಪಿಎಂ ಮತ್ತು ಪ್ರಾಂತ ರೈತ ಸಂಘದ ಕಾರ್ಯಕರ್ತರು ತಾಲ್ಲೂಕು ಕಚೇರಿ ಎದುರು ಘೋಷಣೆಗಳನ್ನು ಕೂಗಿದರು. ಘಟಕ ಕಾರ್ಯದರ್ಶಿ ರಾಬರ್ಟ್ ಡಿ'ಸೋಜ ಪ್ರತಿಭಟನಾಕಾರನ್ನುದ್ದೇಶಿಸಿ ಮಾತನಾಡಿದರು. ಬಳಿಕ ಪ್ರತಿಭಟನಾಕಾರರು ಸ್ವಯಂ ಬಂಧನಕ್ಕೊಳಗಾಗಿ ಬಳಿಕ ಬಿಡುಗಡೆಗೊಂಡರು.

ಸಿಪಿಎಂ, ಪ್ರಾಂತ ರೈತ ಸಂಘ, ಅಕ್ಷರ ದಾಸೋಹ ನೌಕರರ ಸಂಘ, ಬಿಎಸ್‌ಎನ್‌ಎಲ್ ಕಾರ್ಮಿಕರ ಒಕ್ಕೂಟ, ಹಮಾಲಿ ಕಾರ್ಮಿಕರ ಸಂಘ ಮತ್ತಿತರ ಸಂಘಟನೆಗಳು ಪಾಲ್ಗೊಂಡಿದ್ದ ಈ ಪ್ರತಿಭಟನೆಯಲ್ಲಿ ವಾಸುದೇವ ಗೌಡ, ಫಕೀರ ಪಾಟಾಳಿ, ಹೇಮಾವತಿ, ವಿಜಯಲಕ್ಷ್ಮಿ, ಜೂಲಿಯಾನ್‌ರಾಸ್ತಾ, ರಿಚರ್ಡ್ ಕ್ರಾಸ್ತಾ, ಶೇಷಪ್ಪ ಗೌಡ, ಬಾಲಕೃಷ್ಣ ಭೀಮಗುಳಿ, ಜತ್ತಪ್ಪಗೌಡ, ಅಬ್ದುಲ್ಲಾ ಬಾರಿಕಾಡ್, ಜಗನ್ನಾಥ ಮತ್ತಿತರರು ಉಪಸ್ಥಿತರಿದ್ದರು.

ಮೂಡಬಿದ್ರಿ : ಮೂಡಬಿದ್ರಿ ಸಿಪಿಎಂ ವಲಯಸಮಿತಿ ನೇತೃತ್ವದಲ್ಲಿ ಮೂಡಬಿ[...] ನಾಡಕಚೇರಿ ಎದುರು ಸುಮಾರು 500 ಮಂ[...] ಪ್ರತಿಭಟನಾಕಾರರು ಪಿಕೆಟಿಂಗ್ ನಡೆ[...] ಬಂಧನಕ್ಕೊಳಗಾದರು.

ಸಿಪಿಎಂ ಪಕ್ಷದ ವಲಯ ಸಮಿತಿ ಕಾರ್ಯದರ್ಶಿ ಕೆ.ಯಾದವಶೆಟ್ಟಿ ಪ್ರತಿಭಟನಾಕಾರನ್ನುದ್ದೇಶಿ[...] ಮಾತನಾಡಿದರು. ಪಕ್ಷದ ಜಿಲ್ಲಾ ಸಮಿತಿ ಸದಸ್ಯ[...] ರಮಣಿ, ಪಕ್ಷದ ಸ್ಥಳಿಯ ಕಾರ್ಯಕರ್ತರಾ[...] ಶಂಕರ್, ಗಿರಿಜ, ರಾಧಾ ಮೊದಲಾದವ[...] ಉಪಸ್ಥಿತರಿದ್ದರು.

ಬೆಳ್ತಂಗಡಿ : ಬೆಳ್ತಂಗಡಿ ತಾಲ್ಲೂ[...] ಕಚೇರಿಯ ಎದುರು ಸಿಪಿಎಂ ತಾಲ್ಲೂ[...] ಸಮಿತಿಯ ವತಿಯಿಂದ ಧರ[...] ನಡೆಸಲಾಯಿತು. ಬಳಿಕ 22 ಬೇಡಿಕೆಗಳಿರು[...] ಮನವಿಯನ್ನು ತಹಶೀಲ್ದಾರರ ಮೂಲ[...] ಮುಖ್ಯಮಂತ್ರಿಗೆ ಸಲ್ಲಿಸಲಾಯಿತು. ಮುನ್ನೂರಕ್ಕೂ ಹೆಚ್ಚಿಗೆ ಪ್ರತಿಭಟನಾಕಾರ[...] ಬಂಧನಕ್ಕೊಳಗಾಗಿ ಬಳಿ[...] ಬಿಡುಗಡೆಗೊಂಡರು.

ಪ್ರತಿಭಟನೆಯ ನೇತೃತ್ವವನ್ನು ಸಿಪಿಎ[...] ತಾಲ್ಲೂಕು ಸಮಿತಿ ಕಾರ್ಯದರ್ಶಿ ಎಸ್.ಎಂ.ಶಿವಕುಮಾರ್ ಜಿಲ್ಲಾ ಸಮಿ[...] ಮುಖಂಡರಾದ ಬಿ.ಎಂ.ಭಟ್, ಹರಿದಾಸ್ ಎಸ್.ಎಂ, ಸ್ಥಳೀಯ ಕಾರ್ಯಕರ್ತರಾ[...] ಜಯರಾಂ, ಸುಂದರಿ, ಶೇಖರ್.ಎಲ್ ಮತ್ತಿತರ[...] ವಹಿಸಿದ್ದರು.

ಜನಶಕ್ತಿ ಚಂದಾದಾರರಾಗಿ

ಬಿಡಿ ಪ್ರತಿ	:	ರೂ.5.00
ವಾರ್ಷಿಕ ಚಂದಾ	:	ರೂ.250.00
ದ್ವೈವಾರ್ಷಿಕ ಚಂದಾ	:	ರೂ.500.00

ವಿ.ಸೂ : ಅವಧಿ ಮುಗಿಯುತ್ತಿರುವ ಚಂದಾದಾರರು ತಮ್ಮ ಚಂದಾವನ್ನು ಪರಿಶೀಲಿಸಿ, ನವೀಕರಿಸಬೇಕಾಗಿ ವಿನಂತಿ.

'ಬ್ರಿಕ್ಸ್' ಜಾಗತಿಕ ರಾಜಕೀಯದಲ್ಲಿ ಅಮೆರಿಕನ್ ಅಧಿಪತ್ಯಕ್ಕೆ ಸವಾಲಾಗಬೇಕು

ರಷ್ಯ, ಭಾರತ, ಚೀನ ಮತ್ತು ದಕ್ಷಿಣ ಆಫ್ರಿಕ ದೇಶಗಳ ಸರಕಾರಗಳ ಮುಖ್ಯಸ್ಥರ ಮೊದಲ ಶೃಂಗ ಸಭೆ ಯಶಸ್ವಿಯಾಗಿ ನಡೆದಿದೆ. 'ಬ್ರಿಕ್ಸ್' ಎಂದು ಹೆಸರಾದ ಈ ವ್ಯವಸ್ಥೆಯ ಮೊದಲ ಸಭೆ ನಡೆದದ್ದು ಸದ್ಯದ ಆರ್ಥಿಕ ಬಿಕ್ಕಟ್ಟಿನಲ್ಲಿ ಮುಂದುವರೆದ ದೇಶಗಳ ಅಗತ್ಯಗಳನ್ನು ಪೂರೈಸುವುದಕ್ಕಾಗಿಯಾದರೂ, ಈಗಿನ ಸನ್ನಿವೇಶದಲ್ಲಿ ಸಾಮ್ರಾಜ್ಯಶಾಹಿ ಆಧಿಪತ್ಯದ ಏಕಧ್ರುವೀಯತೆಗೆ ಸವಾಲು ಹಾಕಿ ಜಾಗತಿಕ ರಾಜಕೀಯವನ್ನು ಜಗತ್ತಿನ ಬಹುಪಾಲು ಜನರ ಹಿತದೃಷ್ಟಿಯಿಂದ ರೂಪಿಸುವ ಒಂದು ಸಾಚಾ ಬಹುಧ್ರುವೀಯತೆಯತ್ತ ಸಾಗುವ ಸಾಮರ್ಥ್ಯವನ್ನು ಇದು ಹೊಂದಿದೆ.

ಪ್ರಧಾನ ಮಂತ್ರಿ ಮನಮೋಹನ್‌ಸಿಂಗ್ ಚೀನೀ ನಗರ ಸಾನ್ಯದಲ್ಲಿ ಒಂದು ಶೃಂಗಸಭೆಯನ್ನು ಮುಗಿಸಿಕೊಂಡು ಹಿಂದಿರುಗಿದ್ದಾರೆ. ಇದು ಬ್ರೆಜಿಲ್, ರಷ್ಯ, ಭಾರತ, ಚೀನ ಮತ್ತು ದಕ್ಷಿಣ ಆಫ್ರಿಕ ದೇಶಗಳ ಸರಕಾರಗಳ ಮುಖ್ಯಸ್ಥರ ಮೊದಲ ಯಶಸ್ವಿ ಶೃಂಗ ಸಭೆ (ಇದು ಈಗ ಈ ದೇಶಗಳ ಹೆಸರುಗಳ ಮೊದಲ ಇಂಗ್ಲಿಷ್ ಅಕ್ಷರಗಳನ್ನು ಜೋಡಿಸಿದ 'ಬ್ರಿಕ್ಸ್'-ಬಿಆರ್‌ಐಸಿಎಸ್ ಎಂಬ ಪದದಿಂದ ಹೆಸರಾಗಿದೆ). ಇದು ಔಪಚಾರಿಕ ಸ್ವರೂಪ ಪಡೆದಿರುವುದು ಸ್ವಾಗತಾರ್ಹ ಸಂಗತಿ. ಏಕೆಂದರೆ ಜಾಗತಿಕ ಸಂಬಂಧಗಳಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನ ಏಕೈಕ ಮಹಾಶಕ್ತಿ ಎಂದು ಅಮೆರಿಕನ್ ಸಾಮ್ರಾಜ್ಯಶಾಹಿಯು ಏಕಧ್ರುವೀಯತೆಯನ್ನು ಹೇರಬಯಸುತ್ತಿರುವಾಗ ಅದಕ್ಕೆ ಸವಾಲು ಹಾಕಬಲ್ಲ ಒಂದು ಸಮಬಲದ ವ್ಯವಸ್ಥೆಯಾಗಿ ಮೂಡಿ ಬರುವ ಸಾಮರ್ಥ್ಯ ಇದಕ್ಕಿದೆ. ಎರಡನೇ ಮಹಾಯುದ್ಧದ ನಂತರ ಮೂಡಿ ಬಂದ ಎರಡು ಧ್ರುವಗಳ ಜಾಗತಿಕ ಸನ್ನಿವೇಶ, ಎರಡು ಮಹಾಶಕ್ತಿಗಳ ನಡುವಿನ ಶೀತಲ ಸಮರ ಮುಗಿದುಹೋದ ನಂತರ ಸಹಜವಾಗಿಯೇ ಜಾಗತಿಕ ರಾಜಕೀಯದಲ್ಲಿ ಈಗ ಸೂಪರ್ ಪವರ್‌ಗಳು ಅಥವ ಮಹಾಶಕ್ತಿಗಳೆಂಬುದು ಇಲ್ಲ ಎನ್ನುವ ಬಹು ಧ್ರುವೀಯತೆಯತ್ತ ಸಾಗುತ್ತಿರುವುದನ್ನು ಅಮೆರಿಕ ಈ ಏಕಧ್ರುವೀಯತೆಯ ಮೂಲಕ ತಡೆದು ನಿಲ್ಲಿಸಲು ಪ್ರಯತ್ನಿಸುತ್ತಿರುವಾಗ ಬ್ರಿಕ್ಸ್ ರೂಪ ಪಡೆದಿದೆ. ನಿಜ, ಈ ಪ್ರಥಮ ಶೃಂಗಸಭೆ ನಡೆದದ್ದು ಈ ಉದ್ದೇಶದಿಂದ ಅಲ್ಲ. ಈ ಬಗ್ಗೆ ಆಮೇಲೆ ನೋಡೋಣ.

ಈಗ ಜಗತ್ತಿನಲ್ಲಿ ಬಹುದೇಶೀಯ ಸಂಬಂಧಗಳು ರೂಪುಗೊಳ್ಳುತ್ತಿವೆ. ಇಂತಹ ಎರಡು ಪ್ರಕ್ರಿಯೆಗಳಲ್ಲಿ ಭಾರತದ ಹೆಸರು ಇದೆ- ಒಂದು, ಭಾರತ, ಚೀನ ಮತ್ತು ರಷ್ಯ ದೇಶಗಳ ವಿದೇಶಾಂಗ ಮಂತ್ರಿಗಳ ಸಭೆಗಳು ನಿಯಮಿತವಾಗಿ ನಡೆಯುತ್ತಿವೆ; ಇನ್ನೊಂದು, 'ಇಬ್ಸ'(ಐಬಿಎಸ್‌ಎ) ಎಂದು ಹೆಸರಾದ ಭಾರತ, ಬ್ರೆಜಿಲ್ ಮತ್ತು ದಕ್ಷಿಣ ಆಫ್ರಿಕ ದೇಶಗಳ ಮುಖ್ಯಸ್ಥರ ಶೃಂಗ ಸಭೆಗಳು ನಡೆಯುತ್ತಿವೆ. ಇವೆರಡನ್ನು ಒಂದುಗೂಡಿಸಿ ಈ 'ಬ್ರಿಕ್ಸ್' ನ್ನು ರಚಿಸುವ ಅಗತ್ಯವಿತ್ತು, ಅದಕ್ಕೆ ಭಾರತ ಮುಂದಾಗಬೇಕು ಎಂದು ನಾವು ಹೇಳುತ್ತಿದ್ದೆವು.

ಅಮೆರಿಕನ್ ಆಧಿಪತ್ಯಕ್ಕೆ ಎದುರಾಗಿ

ಈಗಿನ ಜಾಗತಿಕ ಸಂದರ್ಭದಲ್ಲಿ ಇದು ಮಹತ್ವದ್ದಾಗಿದೆ. ವಿಶ್ವ ಸಂಸ್ಥೆಯನ್ನು ಪ್ರಜಾಸತ್ತಾತ್ಮಕ ಗೊಳಿಸುವ ಪ್ರಯತ್ನಗಳಿಗೆ ಪ್ರಮುಖವಾಗಿ ಅಮೆರಿಕಾದಿಂದ ಪ್ರತಿರೋಧಗಳು ಬರುತ್ತಿದ್ದು, ಅದು ಈಗ 21ನೇ ಶತಮಾನದ ವಾಸ್ತವತೆಗಳನ್ನು ಬಿಂಬಿಸುತ್ತಿಲ್ಲ ಎಂಬ ಸಂಗತಿ ಕಾಣಬರುತ್ತಿದೆ. ಈ ವಾಸ್ತವತೆ, ಎರಡನೇ ಮಹಾಯುದ್ಧದ ನಂತರ ಬಂದ ಶೀತಲ ಸಮರದ ಎರಡು ಧ್ರುವಗಳ ವಾಸ್ತವತೆಗಿಂತ ಸಂಪೂರ್ಣ ಭಿನ್ನವಾದದ್ದು. 'ಬ್ರಿಕ್ಸ್' ವಿಶ್ವಸಂಸ್ಥೆಯ ಪ್ರಜಾಸತ್ತಾತ್ಮಕ ಪುನರ್ರಚನೆಯನ್ನು ತ್ವರಿತಗೊಳಿಸುವ ಒಂದು ಪರಿಣಾಮಕಾರಿ ವೇದಿಕೆಯಾಗಬಲ್ಲದು.

ಅಲ್ಲದೆ, ವಾತಾವರಣ ಬದಲಾವಣೆ, ವಿಶ್ವ ವ್ಯಾಪಾರ ಸಂಘಟನೆ(ಡಬ್ಲ್ಯುಟಿಒ) ಅಡಿಯಲ್ಲಿ ದೋಹಾ ಸುತ್ತಿನ ಮಾತುಕತೆಗಳು ಇತ್ಯಾದಿ ಮಹತ್ವದ ವಿಷಯಗಳ ಮೇಲಿನ ಜಾಗತಿಕ ಮಾತುಕತೆಗಳನ್ನು ತಮಗೆ ಅನುಕೂಲವೆನಿಸುವ ದಿಕ್ಕಿನಲ್ಲಿ ಹೈಜಾಕ್ ಮಾಡಿ ಅಮೆರಿಕಾದ ಆಧಿಪತ್ಯವನ್ನು ಬಲಪಡಿಸುವ ಪ್ರಯತ್ನಗಳನ್ನು ಎದುರಿಸುವಲ್ಲಿಯೂ 'ಬ್ರಿಕ್ಸ್' ಮಹತ್ವದ ಪಾತ್ರ ವಹಿಸಬಲ್ಲದು. ಈಗಾಗಲೇ ಹವಾಮಾನ ಬದಲಾವಣೆ ಕುರಿತ ಕೊಪನ್ಹೆಗನ್ ಶೃಂಗದಲ್ಲಿ 'ಬೇಸಿಕ್' ಕೂಟ ಅಂದರೆ ಬ್ರೆಜಿಲ್, ದಕ್ಷಿಣ ಆಫ್ರಿಕ, ಭಾರತ ಮತ್ತು ಚೀನ ದೇಶಗಳು ಅಮೆರಿಕಾದ ತಂತ್ರಗಳನ್ನು ಬಹು ಮಟ್ಟಿಗೆ ವಿಫಲಗೊಳಿಸುವ ಪಾತ್ರವನ್ನು ವಹಿಸಿವೆ.

ಪ್ರಸಕ್ತ ತೀವ್ರ ಜಾಗತಿಕ ಹಿಂಜರಿತದ ನಂತರ ಅಭಿವೃದ್ಧಿ ಹೊಂದಿದ ದೇಶಗಳ ಸರಕಾರಗಳಿಂದ ಭಾರೀ ಸಹಾಯಧನ ಪಡೆಯುವ ಕೃಷಿ ಮತ್ತು ಹಾಲಿನ



ಉತ್ಪನ್ನಗಳಿಗೆ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಮಾರುಕಟ್ಟೆಗಳನ್ನು ತೆರೆದು ಕೊಡುವಂತೆ ಮಾಡುವ ಪ್ರಯತ್ನಗಳು ಇನ್ನಷ್ಟು ತೀವ್ರಗೊಂಡಿವೆ. ಈ ಅಭಿವೃದ್ಧಿ ಹೊಂದುತ್ತಿರುವ ಆರ್ಥಿಕಗಳ ಹಿತದೃಷ್ಟಿಯಿಂದ, ಅದಕ್ಕಿಂತಲೂ ಮುಖ್ಯವಾಗಿ ಕೃಷಿಯನ್ನೇ ಅವಲಂಬಿಸಿ ಬದುಕು ಸಾಗಿಸುತ್ತಿರುವ ಈ ದೇಶಗಳ ಕೋಟ್ಯಂತರ ಜನರ ಜೀವನೋಪಾಯ ರಕ್ಷಣೆಗಾಗಿ ಇಂತಹ ಪ್ರಯತ್ನಗಳನ್ನು ಪ್ರತಿರೋಧಿಸುವುದು ಅನಿವಾರ್ಯವಾಗಿದೆ. 'ಬ್ರಿಕ್ಸ್' ಇಂತಹ ಪ್ರತಿರೋಧವನ್ನು ಒಡ್ಡುವಲ್ಲಿ, ಈಗ ಕೃಷಿ ಕುರಿತಂತೆ ನಡೆಯುತ್ತಿರುವ ದೋಹ ಸುತ್ತಿನ ಮಾತುಕತೆಗಳಲ್ಲಿ, 'ನಾಮ'(ಕೃಷಿಯೇತರ ಸರಕುಗಳ ಮಾರುಕಟ್ಟೆ ಅವಕಾಶ) ಮಾತುಕತೆಗಳಲ್ಲಿ ಪ್ರತಿರೋಧವನ್ನು ಒಡ್ಡುವಲ್ಲಿ ಒಂದು ಮಹತ್ವದ ಪಾತ್ರ ವಹಿಸಬಲ್ಲದು.

ಈಗ ವಿಶ್ವಸಂಸ್ಥೆಯ ಭದ್ರತಾ ಸಮಿತಿಯ ಸದಸ್ಯರುಗಳಾಗಿರುವ ಬ್ರೆಜಿಲ್, ರಷ್ಯ, ಭಾರತ ಮತ್ತು ಚೀನ ಲಿಬ್ಯಾದ ಮೇಲೆ ಹಾರಾಟ ನಿಷೇಧದ ನಿರ್ಣಯದ ಮೇಲೆ ಮತದಾನದಲ್ಲಿ ಭಾಗವಹಿಸಲಿಲ್ಲ. ಈ ನಿರ್ಣಯವನ್ನು ಅಮೆರಿಕಾ ಮತ್ತು ನಾಟೋ ಕೂಟ ಮಿಲಿಟರಿ ಹಸ್ತಕ್ಷೇಪಕ್ಕೆ ಕೊಟ್ಟ ಪರವಾನಿಗೆ ಎಂದು ವ್ಯಾಖ್ಯಾನಿಸಿವೆ. 'ಬ್ರಿಕ್ಸ್' ಇದನ್ನು ವಿರೋಧಿಸುವಲ್ಲಿ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಬೇಕಿತ್ತು. ಮುಂದೆ ಇಂತಹ ಸಂಯೋಜಿತ ರಾಜಕೀಯ ನಿಲುವುಗಳು ಮೂಡಿಬಂದು ಸಾಮ್ರಾಜ್ಯಶಾಹಿ ಯಜಮಾನಿಕೆಗೆ ಅಡ್ಡಿಯಾಗಿ ನಿಲ್ಲುವ ಸಾಧ್ಯತೆಯಿದೆ.

ಸದ್ಯದ ವೈರುಧ್ಯ-ಮುಂದಿನ ಸಾಧ್ಯತೆ

ಈ ಗುರಿಗಳು 'ಬ್ರಿಕ್ಸ್'ನ ಭವಿಷ್ಯದ ಕೆಲಸಗಳನ್ನು ನಿರೂಪಿಸುವಂತವು. ಆದರೆ ಇದು, ಈ ಲೇಖನದ ಆರಂಭದಲ್ಲಿ ಹೇಳಿದಂತೆ, ಈ ಮೊದಲ ಸಮ್ಮೇಳನದ ಗುರಿ ಇದ್ದಂತಿಲ್ಲ. ಇದು ಅಭಿವೃದ್ಧಿ ಹೊಂದಿರುವ ದೇಶಗಳಿಗೆ, ಸದ್ಯದ ತೀವ್ರ ಜಾಗತಿಕ ಹಿಂಜರಿತವನ್ನು ಮೀರಿ ನಿಲ್ಲುವಲ್ಲಿ ಮೂಡಿ ಬರುತ್ತಿರುವ ಆರ್ಥಿಕಗಳು ('ಮಾರುಕಟ್ಟೆಗಳು' ಎಂದರೇ ಸೂಕ್ತ) ಎಂದು ಕರೆಯಲಾಗುವ ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಪ್ರಮುಖವಾಗಿ ಕಾಣಿಸುತ್ತಿರುವ ದೇಶಗಳ ಸಹಕಾರ ಅನಿವಾರ್ಯವಾಗಿರುವ ಒತ್ತಡದಿಂದಾಗಿ ನಡೆದ ಸಭೆ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ಎಡೆಬಿಡದೆ ಹೊಸ-ಹೊಸ ಮಾರುಕಟ್ಟೆಗಳ ಹುಡುಕಾಟದಲ್ಲಿರುವ ಜಾಗತಿಕ ಹಣಕಾಸು ಬಂಡವಾಳ ತನಗೆ ಲಾಭ ಸತತವಾಗಿ ದಕ್ಕುವಂತೆ ಮಾಡಬಲ್ಲ ಯಾವುದೇ ರಂಗವನ್ನೂ ಬಿಡುವುದಿಲ್ಲ. ವಾಸ್ತವವಾಗಿ, ಈ ದೇಶಗಳ ಕೂಟಕ್ಕೆ 'ಬ್ರಿಕ್' ಎಂದು ಹೆಸರು ಕೊಟ್ಟದ್ದೇ ಪ್ರಮುಖ ಹೂಡಿಕೆ ಬ್ಯಾಂಕ್ 'ಗೋಲ್ಡ್‌ಮನ್ ಸ್ಯಾಕ್ಸ್'ನ ಜಿಮ್ ಒನಿಲ್ ಎಂಬಾತ. ಹೂಡಿಕೆ ಬ್ಯಾಂಕುಗಳ ಗಿರಾಕಿಗಳ ನಡುವೆ ಬೆಳೆಯುತ್ತಿರುವ ಮಾರುಕಟ್ಟೆಗಳಲ್ಲಿ ಆಸಕ್ತಿ ಹುಟ್ಟಿಸುವ ಒಂದು ದಾರಿ ಇದಾಗಿತ್ತು. ಮೈಕ್ರೊ ಫಿನಾನ್ಸ್ ಅಥವ ಕಿರು ಹಣಕಾಸು ಎಂದು ಕರೆದು ಅದರಲ್ಲಿ ತೋರಿಸಿದ ಅತೀವ ಆಸಕ್ತಿಯನ್ನು ಗಮನಿಸಿ. ಇದಕ್ಕೆ ಅಭಿವೃದ್ಧಿ ಹೊಂದುತ್ತಿರುವ ಮತ್ತು ಹಿಂದುಳಿದ ದೇಶಗಳಲ್ಲಿ ಅಸಂಘಟಿತ ಬಡವರಿಗೆ ಕಾಮಧೇನು ಎಂಬ ವೇಷ ತೊಡಿಸಲಾಯಿತು. ವಾಸ್ತವವಾಗಿ, ಅದು ಜಾಗತಿಕ ಹಣಕಾಸು ಬಂಡವಾಳಕ್ಕೆ ಜಗತ್ತಿನ ಅತ್ಯಂತ ವಂಚಿತ ಜನಸಮೂಹಗಳಿಂದ ಸೂಪರ್ ಲಾಭ ಹಿಂಡಿ ತೆಗೆಯಲು ಅನುಕೂಲ ಮಾಡಿಕೊಡುವ ಒಂದು ವಿಶಾಲವಾದ, ವಿಸ್ತರಿಸುತ್ತಿರುವ ಮಾರುಕಟ್ಟೆಯಾಗಿ ಮೂಡಿಬಂದದ್ದು. ಹೀಗೆ, ಈ ಹಿಂದೆ ಶ್ರೀಮಂತ ದೇಶಗಳು ಅಭಿವೃದ್ಧಿ ಹೊಂದುತ್ತಿರುವ ದೇಶಗಳ ನಡುವೆ ಬಲಿಷ್ಟಗೊಳ್ಳುತ್ತಿದ್ದ ಆರ್ಥಿಕಗಳನ್ನು ತಮ್ಮೊಡನೆ ಸೇರಿಸಿಕೊಳ್ಳಲು ಪ್ರಸಕ್ತ ಜಾಗತಿಕ ಬಿಕ್ಕಟ್ಟನ್ನು ಮೀರಿ ನಿಲ್ಲುವ ಪ್ರಯತ್ನದ ಭಾಗವಾಗಿ ಜಿ-7ನ್ನು ಜಿ-20 ಕ್ಕೆ ವಿಸ್ತರಿಸಿದಂತೆ, ಈಗಿನ ಬಿಕ್ಕಟ್ಟಿನಲ್ಲಿ ಅಭಿವೃದ್ಧಿ ಹೊಂದಿರುವ ಜಗತ್ತಿನ ಅಗತ್ಯಗಳನ್ನು ಪೂರೈಸಲು ಈ 'ಬ್ರಿಕ್ಸ್' ಶೃಂಗಸಭೆ ಬೇಗನೇ ಸೇರುವಂತೆ ಮಾಡಲಾಗಿದೆ.

ನಿಜಸಂಗತಿಯೆಂದರೆ, ಇವು ನಮ್ಮ ಕಾಲದ ವೈರುಧ್ಯಗಳು. ಸಾಮ್ರಾಜ್ಯಶಾಹಿ ಸದ್ಯದ ಬಿಕ್ಕಟ್ಟಿನಿಂದ ಹೊರಬರಲು ಮೂಡಿ ಬರುತ್ತಿರುವ ಆರ್ಥಿಕಗಳನ್ನು ಬಳಸಿಕೊಳ್ಳುವುದೇ ಅತ್ಯಂತ ಭರವಸೆಯ ದಾರಿ ಎಂದು ಪಯತ್ನದಲ್ಲಿದ್ದರೂ, 'ಬ್ರಿಕ್ಸ್' ಜಗತ್ತನ್ನು ಅಮೆರಿಕನ್ ಸಾಮ್ರಾಜ್ಯಶಾಹಿಯ ಏಕಧ್ರುವೀಯತೆಯ ತಂತ್ರಗಳಿಗೆ ಎದುರಾಗಿ ಒಂದು ಸಾಚಾ ಬಹು-ಧ್ರುವೀಯತೆಯತ್ತ ಒಯ್ಯುವ ಜಾಗತಿಕ ರಾಜಕೀಯ ಪ್ರಯತ್ನವಾಗಿ ಮೂಡಿ ಬರುವ ಸಾಮರ್ಥ್ಯ ಹೊಂದಿದೆ. 'ಬ್ರಿಕ್ಸ್' ಈ ಗುರಿ ಸಾಧನೆಗೆ 'ಶಾಂಘಾಯ್ ಸಹಕಾರ', 'ಅಲ್ಬ' (ಎಎಲ್‌ಬಿಎ-ಲಾಟಿನ್ ಅಮೆರಿಕಾದ ಬೊಲಿವೇರಿಯನ್ ಪರ್ಯಾಯ) ಮುಂತಾದ ಇತರ ಭೂಗೋಳಿಕ-ರಾಜಕೀಯ ರಚನೆಗಳೊಂದಿಗೆ ಸಂಬಂಧಗಳನ್ನು ಬಲಪಡಿಸಿಕೊಳ್ಳಬೇಕಾಗಿದೆ.

('ಪೀಪಲ್ಸ್ ಡೆಮಾಕ್ರಸಿ' ಪತ್ರಿಕೆಯ ಏಪ್ರಿಲ್ 22, 2001 ರ ಸಂಪಾದಕೀಯ ಆಧರಿಸಿ)



ಜನಶಕ್ತಿ ನೂತನ ಕಾರ್ಯಾಲಯ ನಿಧಿ : ಸ್ಪಂದನೆಗೆ ವಂದನೆ

'ಜನಶಕ್ತಿ ಕನ್ನಡ ವಾರಪತ್ರಿಕೆ'ಯ ನೂತನ ಕಾರ್ಯಾಲಯವನ್ನು ಸರ್ವ ಸಜ್ಜುಗೊಳಿಸುವ ಸಂದರ್ಭದಲ್ಲಿ ಉದಾರ ಕೊಡುಗೆ ಮಾಡಲಾದ ಮನವಿಗೆ 'ಜನಶಕ್ತಿ'ಯ ಓದುಗ ಬಳಗದಿಂದ ಇದು ಸ್ಪಂದನೆ.

ದುಡಿಯುವ ಜನರ ಪ್ರಾಣಮಿತ್ರ 'ಜನಶಕ್ತಿ' ಕಾರ್ಯಾಲಯವನ್ನು ವ್ಯವಸ್ಥಿತವಾಗಿ ಏರ್ಪಡಿಸಿಕೊಳ್ಳುವ ನಿಟ್ಟಿನಲ್ಲಿ ಇನ್ನಷ್ಟು ಸ್ಪಂದನೆ ದೊರೆಯುತ್ತದೆಂದು ನಿರೀಕ್ಷಿಸುತ್ತೇವೆ.

ಜನಶಕ್ತಿ ನೂತನ ಕಾರ್ಯಾಲಯ ನಿಧಿ

ಹಿಂದಿನ ಮೊತ್ತ	:	16,500,00
1) ಕಾಂ.ಕುಮಾರಸ್ವಾಮಿ ಉಡುಪ, ಬೆಂಗಳೂರು	:	250.00
2) ಕಾಂ. ಲಕ್ಷ್ಮಿನಾರಾಯಣ ಭಟ್, ದಾವಣಗೆರೆ	:	500.00
ಈಗಿನ ಮೊತ್ತ	:	750.00
ಒಟ್ಟು	ರೂ.	17,250.00

ಇತಿ ತಮ್ಮ ವಿಶ್ವಾಸಿ

ಎಸ್.ವೈ.ಗುರುಶಾಂತ್

ಸಂಪಾದಕರು

ಭಾರತ ಕಮ್ಯೂನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) -ಸಿಪಿಐ(ಎಂ) ನೇತೃತ್ವದಲ್ಲಿ ಭ್ರಷ್ಟಾಚಾರ, ಬೆಲೆ ಏರಿಕೆ ವಿರುದ್ಧ, ಎಲ್ಲರಿಗೂ 35 ಕೆ.ಜಿ.ರೇಷನ್(ಕೆ.ಜಿ.ಗೆ ರೂ 2ರ ದರದಲ್ಲಿ), ವಸತಿ, ನಿವೇಶನ ಇತ್ಯಾದಿ ಬೇಡಿಕೆಗಳನ್ನು ಮುಂದಿಟ್ಟು ನಡೆಸಿದ ಹೋರಾಟವು ರಾಜ್ಯದಾದ್ಯಂತ ಯಶಸ್ವಿಯಾಗಿದೆ. ಇದನ್ನು ಯಶಸ್ವಿಗೊಳಿಸಲು ಸಹಕರಿಸಿದ ಕಾರ್ಯಕರ್ತರನ್ನು ಸಿಪಿಐ(ಎಂ) ಅಭಿನಂದಿಸಿದೆ.

ಜನತೆಯಲ್ಲಿ ಮಡುಗಟ್ಟಿದ ಅತೃಪ್ತಿ ಆಕ್ರೋಶ, ಸ್ಫೋಟ

ಕೇಂದ್ರ, ರಾಜ್ಯ ಸರ್ಕಾರಗಳ ವಿರುದ್ಧ 126 ತಾಲ್ಲೂಕು ಕಛೇರಿಗಳಿಗೆ ಮುತ್ತಿಗೆ

ಇದು ಸರ್ಕಾರಗಳಿಗೆ ಎಚ್ಚರಿಕೆ


ಬೆಂಗಳೂರು ತಾಲ್ಲೂಕು ಕಛೇರಿ ಮುತ್ತಿಗೆ

ರಾಜ್ಯದ ಎಲ್ಲಾ 30 ಜಿಲ್ಲೆಗಳಲ್ಲಿ ನಡೆದ ಪ್ರತಿಭಟನೆಯಲ್ಲಿ ಸುಮಾರು 50,000ಕ್ಕೂ ಹೆಚ್ಚು ಜನರು ಭಾಗವಹಿಸಿದ್ದು ಸುಮಾರು 15,000ಕ್ಕೂ ಹೆಚ್ಚು ಮಹಿಳೆಯರು ಪಾಲ್ಗೊಂಡಿದ್ದರು. ಈ ವರೆಗೆ ಬಂದ ವರದಿಗಳ ಪ್ರಕಾರ 110ಕ್ಕೂ ಹೆಚ್ಚು ತಾಲ್ಲೂಕು ಕೇಂದ್ರಗಳಲ್ಲಿ ಪಿಕೆಟಿಂಗ್/ಪ್ರತಿಭಟನೆ ನಡೆಸಲಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಮಾತುಕತೆ ನಡೆಸಿ ಪರಿಹಾರ ನೀಡುವುದಾಗಿ ಭರವಸೆ ಪಡೆದ ನಂತರವೇ ಪಿಕೆಟಿಂಗ್ ಹಿಂತೆಗೆದುಕೊಳ್ಳಲಾಯಿತು.

ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿಯಲ್ಲಿ ಸುಮಾರು 5000ಕ್ಕೂ ಹೆಚ್ಚು ಸಿಪಿಐ(ಎಂ) ಕಾರ್ಯಕರ್ತರು ಪ್ರತಿಭಟನೆಯಲ್ಲಿ ತೊಡಗಿದ್ದು, ಕುಂದಾಪುರ, ಗುಡಿಬಂಡೆ, ಗೌರಿಬಿದನೂರು, ಮಂಗಳೂರು, ಬೆಳ್ತಂಗಡಿ, ಬಳ್ಳಾರಿ ಜಿಲ್ಲೆಯ ಕುರುಗೋಡು, ಸಿರುಗುಪ್ಪ ಮೊದಲಾದ ಕಡೆಗಳಲ್ಲಿ ಸಾವಿರಕ್ಕೂ ಹೆಚ್ಚು ಸಿಪಿಐ(ಎಂ) ಕಾರ್ಯಕರ್ತರು, ಕಾರ್ಮಿಕರು, ರೈತರು, ಕೃಷಿಕೂಲಿಕಾರರು, ವಿದ್ಯಾರ್ಥಿ-ಯುವಜನರು, ಮಹಿಳೆಯರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಶಾಂತಿಯುತವಾಗಿ ಪ್ರತಿಭಟನೆ ನಡೆಸುತ್ತಿದ್ದ ಕಾರ್ಯಕರ್ತರನ್ನು ಮಳವಳ್ಳಿ, ಮದ್ದೂರು, ಮಂಡ್ಯ ಮೊದಲಾದೆಡೆ ಬಂಧಿಸಿ ಬಿಡುಗಡೆ ಮಾಡಿದ್ದಾರೆ.

ಜನತೆಯಲ್ಲಿ ಮಡುಗಟ್ಟಿರುವ ಅತೃಪ್ತಿಯನ್ನು ಮನಗಂಡು ಸರಕಾರವು ಕೂಡಲೇ ಬೇಡಿಕೆಗಳನ್ನು ಈಡೇರಿಸಬೇಕೆಂದು ಸಿಪಿಐ(ಎಂ) ಆಗ್ರಹಿಸುತ್ತದೆ. ಅದೇ ಸಂದರ್ಭದಲ್ಲಿ ಕಾರ್ಯಕರ್ತರ ಬಂಧನವನ್ನು ಖಂಡಿಸಿದ ಸಿಪಿಐ(ಎಂ) ಇವರನ್ನು ಕೂಡಲೇ ಬಿಡುಗಡೆ ಮಾಡಬೇಕೆಂದು ಆಗ್ರಹಿಸಿದೆ.

ಚಿಕ್ಕಬಳ್ಳಾಪುರ: 19ರಂದು ಎಲ್ಲಾ ತಾಲ್ಲೂಕುಗಳಲ್ಲಿ ಪಿಕೆಟಿಂಗ್ ನಡೆದಿದೆ. ಬಾಗೇಪಲ್ಲಿಯಲ್ಲಿ 5000, ಗುಡಿಬಂಡೆ 1500, ಗೌರಿಬಿದನೂರು 1000, ಶಿಡ್ಲಘಟ್ಟದಲ್ಲಿ 850ರಿಂದ 1000, ಚಿಕ್ಕಬಳ್ಳಾಪುರ 300/350, ಚಿಂತಾಮಣಿ 200ರಿಂದ250 ಜನರ ಭಾಗವಹಿಸುವಿಕೆ. ಬಾಗೇಪಲ್ಲಿ, ಗುಡಿಬಂಡೆ, ಗೌರಿಬಿದನೂರುಗಳಲ್ಲಿ ತಾಲ್ಲುಕು ಕಛೇರಿಗಳಿಗೆ ಬೀಗ ಜಡಿದಿದ್ದರೂ ಪೋಲೀಸರಿಂದ ಯಾವುದೇ ಪ್ರತಿರೋಧವಿಲ್ಲ.. ಶಿಡ್ಲಘಟ್ಟದಲ್ಲಿ ಹಳೆಯ ಕಾಮ್ರೇಡ್‌ಗಳು ಭಾಗವಹಿಸಿದ್ದು ವಿಶೇಷ. - ಒಟ್ಟು 6 ಕೇಂದ್ರಗಳಲ್ಲಿ

ಬೆಂಗಳೂರು: ಕೆ.ಜಿರಸ್ತೆಯಲ್ಲಿರುವ ತಾಲ್ಲೂಕು ಕಛೇರಿಗಳ ಮುಂದೆ ಸುಮಾರು 250 ಜನರಿಂದ ಪಿಕೆಟಿಂಗ್. 11.30ರಿಂದ 1ಗಂಟೆಗೆ ಬಂಧನ. ಮುಖ್ಯದ್ವಾರದಲ್ಲಿ ಬೀಗ ಜಡಿದು ಪ್ರತಿಭಟನೆ. ಆನೇಕಲ್‌ನಲ್ಲಿ 500ಜನರಿಂದ ಮೆರವಣಿಗೆ ಮತ್ತು ಪ್ರತಿಭಟನೆ. ಬೆಂಗಳೂರು ಪೂರ್ವ 250, ದೊಡ್ಡಬಳ್ಳಾಪುರದಲ್ಲಿ 250/300 - ಇವುಗಳು ಪಕ್ಷದ ನೇತೃತ್ವದಲ್ಲಿ.

ಹೊಸಕೋಟೆ-200, ನೆಲಮಂಗಲ 80 - ಸಿಐಟಿಯು ನೇತೃತ್ವದಲ್ಲಿ ಮಾಗಡಿಯಲ್ಲಿ 100/120 - ಕೆಪಿಆರ್‌ಎಸ್ ಮತ್ತು ರಾಮನಗರದಲ್ಲಿ ರೈತರು ಮತ್ತು ಬೀಡಿ ಕಾರ್ಮಿಕರು. ದೇವನಹಳ್ಳಿಯಲ್ಲಿ 18ರಂದು ಶ್ರೀರಾಮರೆಡ್ಡಿಯವರಿಂದ ಉದ್ಘಾಟನೆಗೊಂಡ ಧರಣಿ 19ರಂದು ಮುಂದುವರಿದಿದ್ದು 500 ಜನರು ಭಾಗವಹಿಸಿದ್ದರು. - ಒಟ್ಟು 9ಕೇಂದ್ರಗಳಲ್ಲಿ


ಆನೇಕಲ್ ಪ್ರತಿಭಟನೆ

ದ.ಕ. ಮಂಗಳೂರಿನಲ್ಲಿ 1500(332), ಬೆಳ್ತಂಗಡಿ 1000(650), ಮೂಡಬಿದ್ರಿ 500(293) ಬಂಟ್ವಾಳ 256(256) ಪುತ್ತೂರು 150(73), ಸುಳ್ಯ 400(200) - ಆವರಣದಲ್ಲಿರುವುದು ಬಂಧನಕ್ಕೆ ಒಳಗಾದವರು ಒಟ್ಟು 6 ಕೇಂದ್ರಗಳಲ್ಲಿ ಪಿಕೆಟಿಂಗ್.

ಉಡುಪಿ: ಕುಂದಾಪುರದಲ್ಲಿ 3500/4000 11ರಿಂದ 12.30ರ ವರೆಗೆ ಪಿಕೆಟಿಂಗ್ 2000/2500 ಮಹಿಳೆಯರು. ಅದೇ ತಾಲ್ಲೂಕಿನ ಬೈಂದೂರಿನಲ್ಲಿ 100 ಹಾಗೂ ಉಡುಪಿ ತಾಲ್ಲೂಕು ಕೇಂದ್ರದಲ್ಲಿ 500 ಜನರ ಪಿಕೆಟಿಂಗ್ - ಒಟ್ಟು 3 ಕೇಂದ್ರಗಳಲ್ಲಿ



ಕೋಲಾರ: ನೀತಿ ಸಂಹಿತೆಯ ಹೆಸರಿನಲ್ಲಿ ಕೋಲಾರ ಮತ್ತು ಬಂಗಾರಪೇಟೆಯಲ್ಲಿ ಮೆರವಣಿಗೆಗೆ ಅವಕಾಶ ನೀಡಿಲ್ಲ. ತಾಲ್ಲೂಕು ಕಛೇರಿ ಪಿಕೆಟಿಂಗ್ ನಡೆಸುವಾಗ ಪೋಲೀಸರೇ ಬೀಗ ಜಡಿದರು. 11.30ರಿಂದ 2ಗಂಟೆವರೆಗೆ. ಸುಮಾರು 400 ಜನ ಇದ್ದರು. ಬಂಗಾರಪೇಟೆಯಲ್ಲಿ ಮೆರವಣಿಗೆಗೆ ಅವಕಾಶ ಕೊಡದೆ ಇದ್ದುದರಿಂದ 1 ಗಂಟೆ ಸಭೆ, ನಂತರ ಪೋಲೀಸರಿಂದ ಬಂಧನ. ಶ್ರೀನಿವಾಸಪುರದಲ್ಲಿ 500, ಮಾಲೂರಿನಲ್ಲಿ 200 ಹಾಗೂ ಮುಳಬಾಗಿಲುನಲ್ಲಿ 100ಜನರಿಂದ ತಾಲ್ಲೂಕು ಕಛೇರಿ ಮುಂದೆ ಪಿಕೆಟಿಂಗ್ - ಒಟ್ಟು 5 ಕೇಂದ್ರಗಳಲ್ಲಿ

ಗುಲ್ಬರ್ಗ: ಗುಲ್ಬರ್ಗ ನಗರದಲ್ಲಿ 300ರಿಂದ 400, ಅಫ್‌ಜಲ್ಪುರದಲ್ಲಿ 300, ಆಳಂದ 250/300, ಜೇವರ್ಗಿ 500, ಶಾಪುರ 600, ಸುರಪುರ 500/600, ಚಿತಾಪುರ 200/300, ಚಿಂಚೋಳಿ 600/700 - ಒಟ್ಟು 8 ಕೇಂದ್ರಗಳಲ್ಲಿ,

ಬಳ್ಳಾರಿ: ಕುರುಗೋಡು 1500(1000), ಹೊಸಪೇಟೆ 1000(580) ಸಿರುಗುಪ್ಪ 1000, ಹಗರಿಬೊಮ್ಮನಹಳ್ಳಿ 500, ಹಡಗಲಿ 150 ಸಂಡೂರು 150, ಬಳ್ಳರಿ 100 - ಒಟ್ಟು 7 ಕೇಂದ್ರಗಳಲ್ಲಿ 4400 ಜನರು ಭಾಗವಹಿಸಿದ್ದು 2992 ಮಂದಿ ಬಂಧನಕ್ಕೊಳಗಾಗಿದ್ದಾರೆ.







ಪುಟ 9 ಕ್ಕೆ



ಬಾಗೇಪಲ್ಲಿ ತಾಲ್ಲೂಕು ಕಛೇರಿ ಮುತ್ತಿಗೆ ಜಿ.ವಿ.ಶ್ರೀರಾಮರೆಡ್ಡಿ ನೇತೃತ್ವದಲ್ಲಿ

ಉತ್ತರ ಕನ್ನಡ: ಕಾರವಾರದಲ್ಲಿ 350ಕ್ಕೂ ಹೆಚ್ಚು ಜನರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದು, ಬಂಧನಕ್ಕೊಳಗಾಗಿದ್ದಾರೆ. ಹಳಿಯಾಳದಲ್ಲಿ 200, ಮುಂಡಗೋಡದಲ್ಲಿ 300, ಶಿರಸಿ 500/550, ಹೊನ್ನಾವರದಲ್ಲಿ 600, ಭಟ್ಕಳದಲ್ಲಿ 70, ಅಂಕೋಲಾದಲ್ಲಿ 150ಕ್ಕೂ ಹೆಚ್ಚು ಪ್ರತಿಭಟನೆಯಲ್ಲಿ ಭಾಗವಹಿಸಿದ್ದಾರೆ. ಹೊನ್ನಾವರದಲ್ಲಿ ತಾಲ್ಲೂಕು ಕಛೇರಿ ಒಳಗೆ ನುಗ್ಗಿದರೂ ಪೋಲೀಸರ ಮಧ್ಯ ಪ್ರವೇಶ ಇರಲಿಲ್ಲ. - ಒಟ್ಟು 7 ಕೇಂದ್ರಗಳು



ಬಾಗೇಪಲ್ಲಿ ಪ್ರತಿಭಟನೆಯಲ್ಲಿ ಮಹಿಳೆಯರ ಬೃಹತ್ ಸಮೂಹ

ರಾಯಚೂರು: 1500/1600 ಜನರು ತಾಲ್ಲೂಕು ಕಛೇರಿಯನ್ನು 3 ತಾಸುಗಳ ಕಾಲ ಬಂದ್ ಮಾಡಿದುದರಿಂದ ತಹಶಿಲ್ದಾರ್ ಮೇ ಪ್ರಥಮ ವಾರದಲ್ಲಿ ಮಾತುಕತೆ ನಡೆಸುವುದಾಗಿ ಭರವಸೆ ನೀಡಿರುತ್ತಾರೆ. ದೇವದುರ್ಗ ಮತ್ತು ಸಿಂಧನೂರುಗಳಲ್ಲಿ ತಲಾ 800 ಮಂದಿ ಭಾಗವಹಿಸಿದ್ದು ಪೋಲೀಸರೊಂದಿಗೆ ಚಕಮಕಿ ನಡೆದಿದೆ. ದೇವದುರ್ಗದಲ್ಲಿ ಬಂಧನ ನಡೆಸಿದಾಗ ತಹಶಿಲ್ದಾರ್ ಸ್ಟೇಷನ್‌ಗೆ ತೆರಳಿ ಮಾತುಕತೆ ನಡೆಸುವುದಾಗಿ ತಿಳಿಸಿರುತ್ತಾರೆ. ಸಿಂಧನೂರಿನಲ್ಲಿ ಏಪ್ರಿಲ್ 30ರಂದು ಮಾತುಕತೆ ನಡೆಯಲಿದೆ. ಲಿಂಗಸುಗೂರಿನಲ್ಲಿ 1200 ಜನರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರೆ, ಮಾನ್ವಿಯಲ್ಲಿ 200 ಜನರು ಭಾಗವಹಿಸಿರುತ್ತಾರೆ.

ಕೊಪ್ಪಳ: ಗಂಗಾವತಿ - 2000 ಜನ ಭಾಗವಹಿಸಿದ್ದರು. ಸುಮಾರು 2 ತಾಸು ಎರಡು ಕಡೆಗಳಲ್ಲಿ ರಸ್ತೆ ತಡೆ. ಕುಷ್ಟಗಿಯಲ್ಲಿ 500 ಮಂದಿ-25ನೇ ತಾರೀಕು ಮಾತುಕತೆಗೆ ಕರೆದಿದ್ದಾರೆ. ಕೊಪ್ಪಳದಲ್ಲಿ 300 ಜನರಿಂದ ಮುತ್ತಿಗೆ, ಮಧ್ಯಾಹ್ನ 3ಗಂಟೆ ವರೆಗೆ-ಮಾತುಕತೆ ನಡೆಸುವುದಾಗಿ ಭರವಸೆ. ಯಲಬುರ್ಗ -200. ಒಟ್ಟು 4 ಕೇಂದ್ರಗಳಲ್ಲಿ

ಬೆಳಗಾಂ: ಜಿಲ್ಲೆಯ 7 ಕೇಂದ್ರಗಳಲ್ಲಿ ಪ್ರತಿಭಟನೆಗಳು ನಡೆದಿವೆ. ಗೋಕಾಕದಲ್ಲಿ 20ನೇ ತಾರೀಕಿನಂದು ನಡೆದಿದೆ. ರಾಮದುರ್ಗ ಮತ್ತು ಚಿಕ್ಕೋಡಿಗಳಲ್ಲಿ ತಲಾ 600, ಹುಕ್ಕೇರಿ 300, ಖಾನಾಪುರ 250, ಬೈಲಹೊಂಗಲ ಮತ್ತು ಸವದತ್ತಿ ತಲಾ 150, ಬೆಳಗಾಂನಲ್ಲಿ 120 ಮಂದಿ ಭಾಗವಹಿಸಿದ್ದರು.



ಬಾಗೇಪಲ್ಲಿ ಹೋರಾಟದಲ್ಲಿ ಮತ್ತೊಂದು ಚಿತ್ರ

ಪುಟ 10ಕ್ಕೆ

ಸುಪ್ರೀಂ ಕೋರ್ಟ್ ಸಿಇಸಿ ವರದಿ: ಅಕ್ರಮ ಗಣಿಗಾರಿಕೆಗೆ ಬಿಜೆಪಿ ಸರ್ಕಾರವೇ ಹೊಣೆ

■ ಜಯ

ಅಕ್ರಮ ಗಣಿಗಾರಿಕೆಯಲ್ಲಿ ಕರ್ನಾಟಕವೇ ನಂಬರ್ 1:

ಅಕ್ರಮ ಗಣಿಗಾರಿಕೆ ಕುರಿತು ಸುಪ್ರೀಂಕೋರ್ಟ್ ನೇಮಿಸಿದ್ದ ಕೇಂದ್ರ ಉನ್ನತಾಧಿಕಾರ ಸಮಿತಿ (ಸಿಇಸಿ) ಯು ತನ್ನ ಮಧ್ಯಂತರ ವರದಿಯನ್ನು ನ್ಯಾಯಾಲಯಕ್ಕೆ ಕಳೆದ ವಾರ ಸಲ್ಲಿಸಿದೆ. ಇಡೀ ದೇಶದಲ್ಲಿ ನಡೆಯುತ್ತಿರುವ ಅಕ್ರಮ ಗಣಿಗಾರಿಕೆಯಲ್ಲಿ ಕರ್ನಾಟಕ ರಾಜ್ಯವೇ ನಂಬರ್ ಒನ್ ಎಂದೂ ಅದರಲ್ಲೂ ಬಳ್ಳಾರಿಯಲ್ಲಿ ದೊಡ್ಡ ಪ್ರಮಾಣದ ಅಕ್ರಮ ಗಣಿಗಾರಿಕೆ ನಡೆದಿದೆ ಎಂದೂ ವರದಿ ತಿಳಿಸಿದೆ.

ರಾಜ್ಯದಲ್ಲಿ 2003 ರಿಂದ 2009ರವರೆಗೆ ಸುಮಾರು 3.04 ಕೋಟಿ ಟನ್ ಕಬ್ಬಿಣದ ಅದಿರನ್ನು



ಅಕ್ರಮವಾಗಿ ಸಾಗಣೆಯಾಗಿರುವುದನ್ನು ಕರ್ನಾಟಕ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳೇ ವಿವರಿಸಿದ್ದಾರೆ. ಪ್ರತಿ ಟನ್ ಅದಿರಿಗೆ ರೂ. 5,000 ನಂತೆ ಇದರ ಮೌಲ್ಯ 15,000 ಕೋಟಿ ರೂಪಾಯಿಗೂ ಹೆಚ್ಚು. ಸರ್ಕಾರದ ಪರವಾನಗಿ ಪಡೆಯದ ಕಂಪನಿಗಳು ಅಕ್ರಮವಾಗಿ ಗಣಿಗಾರಿಕೆಯಲ್ಲಿ ತೊಡಗಿವೆ. ಇದೇ ಕಂಪನಿಗಳಿಂದ ನೊಂದಣಿಯಾಗಿರುವ ಕಂಪನಿಗಳು ಕಡಿಮೆ ಬೆಲೆಗೆ ಅದಿರನ್ನು ಖರೀದಿಸಿ ಹೆಚ್ಚಿನ ಬೆಲೆಗೆ ರಫ್ತು ಮಾಡಿ ಅಪಾರ ಲಾಭ ಮಾಡಿವೆ ಎಂದು ಕೇಂದ್ರ ಉನ್ನತಾಧಿಕಾರ ಸಮಿತಿ ವರದಿ ತಿಳಿಸಿದೆ.

ಅಕ್ರಮ ಗಣಿಗಾರಿಕೆಯ ವಿಧಾನಗಳು :

ಅಕ್ರಮ ಗಣಿಗಾರಿಕೆ ನಡೆಸಿರುವ ಪ್ರಮುಖ ವಿಧಾನಗಳೆಂದರೆ ಒಬ್ಬರ ಗುತ್ತಿಗೆಯಲ್ಲಿ ಇನ್ನೊಬ್ಬರಿಗೆ ಉಪಗುತ್ತಿಗೆ ನೀಡುವ ಮೂಲಕ ಗಣಿಗಾರಿಕೆ ನಡೆಸಿರುವುದು, ಕಾನೂನುಬಾಹಿರವಾಗಿ ಅದಿರು ಸಾಗಣೆ ಮಾಡಲು ತಾತ್ಕಾಲಿಕ ಪರವಾನಗಿ ನೀಡಿರುವುದು, ಅಕ್ರಮ ಅದಿರು ಸಾಗಣೆಗೆ ಅವಕಾಶ, ಅಕ್ರಮವಾಗಿ ಅದಿರು ಸಂಗ್ರಹ ಮಾಡಲು ಸಂಗ್ರಹಾಗಾರಗಳಿಗೆ ಅನುಮತಿ ನೀಡಿರುವುದು, ಗಣಿಗಾರಿಕೆ ಅಕ್ರಮಗಳಿಗೆ ಸಂಬಂಧಿಸಿದ ಪ್ರಕರಣಗಳ ವಿಚಾರಣೆಯಲ್ಲಿ ನ್ಯಾಯಾಲಯದಲ್ಲಿ ಸರ್ಕಾರವು ಸಮರ್ಥವಾಗಿ ವಾದಿಸದೇ ಇರುವುದು ಅಕ್ರಮ ಗಣಿಗಾರಿಕೆ ಹೆಚ್ಚಲು ಪ್ರಮುಖ ಕಾರಣ ಎಂದು ವರದಿಯಲ್ಲಿ ವಿವರವಾಗಿ ತಿಳಿಸಿದೆ.

ಸುಪ್ರೀಂ ಕೋರ್ಟ್ ನೇಮಿಸಿದ್ದ ಕೇಂದ್ರ ಉನ್ನತಾಧಿಕಾರ ಸಮಿತಿಯು ಹರಿಯಾಣ, ರಾಜಸ್ತಾನ, ಒಡಿಶಾ, ಉತ್ತರಪ್ರದೇಶ, ಮಧ್ಯಪ್ರದೇಶ, ಛತ್ತೀಸ್‌ಘಡ, ಕರ್ನಾಟಕ ಒಳಗೊಂಡಂತೆ ಹಲವು ರಾಜ್ಯಗಳಲ್ಲಿ ನಡೆದಿರುವ ಅಕ್ರಮ ಗಣಿಗಾರಿಕೆ ಕುರಿತು ತನಿಖೆ ನಡೆಸಿತ್ತು. ಬಳ್ಳಾರಿ ಜಿಲ್ಲೆಯಲ್ಲಿ ಸುಮಾರು 2700 ಎಕರೆ ಅರಣ್ಯ ಪ್ರದೇಶದಲ್ಲಿ ಅಕ್ರಮ ಗಣಿಗಾರಿಕೆ ನಡೆದಿದೆ. ಈ ಕುರಿತು ಲೋಕಾಯುಕ್ತರು ವರದಿ ನೀಡಿದ್ದರೂ ರಾಜ್ಯ ಬಿಜೆಪಿ ಸರ್ಕಾರ ಯಾವುದೇ ಕಡಿವಾಣ ಹಾಕುವಲ್ಲಿ ಅಸಡ್ಡೆ ತೋರಿದೆ ಎನ್ನಲಾಗಿದೆ. ಬಳ್ಳಾರಿಯ ರಾಮಗಡ ಅರಣ್ಯ ವಲಯದಲ್ಲಿ ದಾಖಲೆಗಳನ್ನು ತಿದ್ದಿ ಗಣಿಗಾರಿಕೆಗೆ ಅನುಮತಿ ನೀಡಲು ಯತ್ನಿಸಲಾಗಿದೆ. ರಾಮಗಡ ವಲಯದಲ್ಲಿ ರಾಮಗಡ ಮೈನ್ಸ್ ಅಂಡ್ ಮಿನರಲ್ಸ್ ಕಂಪನಿಗೆ ಅರ್ಜಿ ಸಲ್ಲಿಸಿದ್ದ ಸುಮಾರು 850 ಎಕರೆ ವಿಸ್ತೀರ್ಣದ ಗಣಿ ಪ್ರದೇಶದಲ್ಲಿ ಸುತ್ತಲಿನ ಗುತ್ತಿಗೆದಾರ ಖಾಸಗಿ ಕಂಪನಿಗಳು ಭಾರಿ ಪ್ರಮಾಣದ ಅಕ್ರಮ ಗಣಿಗಾರಿಕೆ ನಡೆಸಿವೆ. ಇದಕ್ಕೆ ಬಳ್ಳಾರಿ ಜಿಲ್ಲಾಡಳಿ ಮತ್ತು ರಾಜ್ಯ ಸರ್ಕಾರ ಪೂರ್ಣ ಸಹಕಾರ ನೀಡಿವೆ. ಈ ಗಣಿಯಿಂದಲೇ ಸಾವಿರಾರು ಕೋಟಿ ಮೌಲ್ಯದ ಅದಿರು ಅಕ್ರಮವಾಗಿ ಸಾಗಣೆಯಾಗಿದೆ ಎಂದು ವರದಿಯಲ್ಲಿ ದಾಖಲಾಗಿದೆ.

ಸಂಡೂರು ಅರಣ್ಯ ವಲಯದಲ್ಲಿ ಲಕ್ಷ್ಮಿನಾರಾಯಣ ಗಣಿ ಕಂಪನಿಯು ತನಗೆ ನೀಡಿರುವ ಗುತ್ತಿಗೆ ಪ್ರದೇಶದ ಜೊತೆಗೆ ಅರಣ್ಯ ಭೂಮಿಯನ್ನೂ ಒತ್ತುವರಿ ಮಾಡಿಕೊಂಡಿದೆ ಎಂದು ಲೋಕಾಯುಕ್ತ ವರದಿ ತಿಳಿಸಿತ್ತು. ಆದರೆ ಬಿಜೆಪಿ ಸರ್ಕಾರ ಈ ಕುರಿತು ಕ್ರಮ ಕೈಗೊಳ್ಳುವ ಬದಲು ನ್ಯಾಯಾಲಯದಲ್ಲಿ ಅಕ್ರಮ ಗಣಿಗಾರಿಕೆಗೆ ಪೂರಕವಾಗಿ ಅನುಮತಿ ನೀಡುವುದಕ್ಕೆ ವಾದ ಮಂಡಿಸಿತು.

ರಾಜಕಾರಣಿಗಳು, ಜಿಲ್ಲಾಡಳಿತ ಮತ್ತು ಕಂಪನಿಗಳ ಶಾಮೀಲು:

ಜನಪ್ರತಿನಿಧಿಗಳು, ಬಳ್ಳಾರಿ ಜಿಲ್ಲಾಧಿಕಾರಿ, ಜಿಲ್ಲಾ ಎಸ್‌ಪಿ, ಉಪ ಅರಣ್ಯ ಸಂರಕ್ಷಣಾಧಿಕಾರಿ, ಗಣಿ ಮತ್ತು ಭೂವಿಜ್ಞಾನ ಅಧಿಕಾರಿಗಳೆಲ್ಲರೂ ಅಕ್ರಮ ಗಣಿಗಾರಿಕೆ ನಡೆಸುತ್ತಿರುವ ಕಂಪನಿಗಳ ಜೊತೆ ಶಾಮೀಲಾಗಿದ್ದರು.

ಪುಟ 10ಕ್ಕೆ

ಸುಪ್ರೀಂ ಕೋರ್ಟ್ ಸಿಇಸಿ ವರದಿ:

ಪುಟ 9 ರಿಂದ

ಲೋಕಾಯುಕ್ತರ ವರದಿಯಲ್ಲಿ ಹೆಸರಿಸಿರುವ ಎಲ್ಲ ಅಕ್ರಮ ಗಣಿಗಳನ್ನು ಸ್ಥಗಿತಗೊಳಿಸಬೇಕು. ಅರಣ್ಯ, ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ಜಂಟಿ ಸರ್ವೇ ನಡೆಸಬೇಕು. ಗಣಿಗಳ ಗಡಿ ಒತ್ತುವರಿಯಂತಹ ಪ್ರಕರಣಗಳ ಬಗ್ಗೆ ವಿಸ್ತೃತ ತನಿಖೆ ನಡೆಸಬೇಕು.

ಅಕ್ರಮವಾಗಿ ಗಣಿಗಾರಿಕೆ ನಡೆಸುತ್ತಿರುವ ಮತ್ತು ಕಾನೂನುಬಾಹಿರವಾಗಿ ಅದಿರು ಸಾಗಣೆ ಮಾಡುತ್ತಿರುವ ಕಂಪನಿಗಳ ಮೇಲೆ ಅದಿರಿನ ಮೌಲ್ಯದ ಐದು ಪಟ್ಟು ದಂಡ ವಿಧಿಸಬೇಕು. ಇದರಲ್ಲಿ ಷಾಮೀಲಾಗಿರುವ ಎಲ್ಲ ಅಧಿಕಾರಿ ಸಿಬ್ಬಂದಿಗಳಿಗೆ ಶಿಕ್ಷೆ ವಿಧಿಸಬೇಕೆಂದು ಸಮಿತಿ ಶಿಫಾರಸು ಮಾಡಿದೆ.

ಅಕ್ರಮ ಗಣಿಗಾರಿಕೆಗೆ ಅನುಮತಿ ನೀಡಿಲ್ಲ: ನಾಚಿಕೆಗೇಡಿ ಯಡ್ಡಿ

ಕೇಂದ್ರ ಉನ್ನತಾಧಿಕಾರ ಸಮಿತಿ ವರದಿಗೆ ಉತ್ತರವಾಗಿ 'ನಾನು ಮುಖ್ಯಮಂತ್ರಿ ಆದಾಗಿನಿಂದ ಈವರೆಗೂ ಯಾವುದೇ ಅಕ್ರಮ ಗಣಿಗಾರಿಕೆಗೆ ಅನುಮತಿ ನೀಡಿಲ್ಲ. ರಾಜ್ಯದ ಸಂಪತ್ತನ್ನು ಉಳಿಸಲು ಪ್ರಾಮಾಣಿಕ ಪ್ರಯತ್ನ ಮಾಡಿದ್ದೇನೆ' ಎಂದು ಮುಖ್ಯಮಂತ್ರಿ ಯಡಿಯೂರಪ್ಪ ಹೇಳಿದ್ದಾರೆ. ಕೇಂದ್ರ ಉನ್ನತಾಧಿಕಾರ ಸಮಿತಿಯ ಶಿಫಾರಸ್ಸಿನ ಅನ್ವಯ ತಾನು ಇನ್ನು ಮುಂದೆ ಅಕ್ರಮ ಗಣಿಗಾರಿಕೆ ವಿರುದ್ಧ ಕ್ರಮಕೈಗೊಳ್ಳುವುದಾಗಿ ಯಡಿಯೂರಪ್ಪ ಸರ್ಕಾರ ಸುಪ್ರೀಂಕೋರ್ಟ್‌ಗೆ ಉತ್ತರಿಸಲು ತರಾತುರಿ ತೋರಿಸುತ್ತಿದೆ.

ಕಿವುಡು ಸರ್ಕಾರಗಳಿಗೆ ಎಚ್ಚರಿಕೆ

ಪುಟ 9 ರಿಂದ

ಬಿಜಾಪುರ/ಬಾಗಲಕೋಟೆ: ಬಿಜಾಪುರ, ಇಂಡಿಗಳಲ್ಲಿ ತಲಾ 600, ಸಿಂದಗಿಯಲ್ಲಿ 300, ಮುದ್ದೇಬಿಹಾಳದಲ್ಲಿ 400, ಬಾದಾಮಿಯಲ್ಲಿ 100(ಪಂಚಾಯಿತಿ ನೌಕರರು) ಮಂದಿ ಪ್ರತಿಭಟನೆ ನಡೆಸಿದ್ದಾರೆ. ಜಮಖಂಡಿಯಲ್ಲೂ ಪ್ರತಿಭಟನೆ ನಡೆದಿದೆ. ಒಟ್ಟು 6 ಕೇಂದ್ರಗಳು.

ಧಾರವಾಡ: ಸಿಐಟಿಯು ನೇತೃತ್ವದಲ್ಲಿ ಹುಬ್ಬಳ್ಳಿ, ಧಾರವಾಡ, ನವಲಗುಂದಗಳಲ್ಲಿ ಕ್ರಮವಾಗಿ 200, 150, 120 ಮಂದಿ ಭಾಗವಹಿಸಿರುತ್ತಾರೆ. ಗದಗ ಜಿಲ್ಲೆಯ ರೋಣ ತಾಲ್ಲೂಕಿನಲ್ಲಿ ಪಕ್ಷದ ನೇತೃತ್ವದಲ್ಲಿ ಎಲ್ಲಾ ಸಂಘಟನೆಗಳು ಸೇರಿ 400 ಜನ ಪ್ರತಿಭಟನೆ ನಡೆಸಿರುತ್ತಾರೆ.

ಹಾವೇರಿ ಜಿಲ್ಲೆಯ 7 ತಾಲ್ಲೂಕಿನಲ್ಲಿ ಪಂಚಾಯತ್ ನೌಕರರು ಮತ್ತು 3 ತಾಲ್ಲೂಕುಗಳಲ್ಲಿ ವಿದ್ಯಾರ್ಥಿಗಳು ಪ್ರತ್ಯೇಕವಾಗಿ ಪ್ರತಿಭಟನೆ ನಡೆಸಿರುತ್ತಾರೆ.

ಹಾಸನ: ಹಾಸನ-250, ಸಕಲೇಶ್‌ಪುರ-150, ಬೇಲೂರು-150, ಚನ್ನರಾಯ ಪಟ್ಟಣ-200, ಅರಸೀಕೆರೆ-100, ಅರಕಲಗೂಡು ಮತ್ತು ಹೊಳೆನರಸೀಪುರ ಸೇರಿ ಒಟ್ಟು ಏಳು ತಾಲ್ಲೂಕುಗಳಲ್ಲಿ ಪ್ರತಿಭಟನೆ ನಡೆದಿದೆ. ಆಲೂರು ತಾಲ್ಲೂಕಿನಲ್ಲಿ ಪ್ರತಿಭಟನೆ ನಡೆದಿಲ್ಲ.

ಕೊಡಗು: ವಿರಾಜಪೇಟೆಯಲ್ಲಿ-400 ರಿಂದ 450, ಮಡಿಕೇರಿಯಲ್ಲಿ-150, ಜನ ಪ್ರತಿಭಟನೆಯಲ್ಲಿ ಭಾಗವಹಿಸಿದ್ದಾರೆ.

ತುಮಕೂರು: ತುಮಕೂರು-300 ರಿಂದ 350, ಕೊರಟಗೆರೆ-150, ಗುಬ್ಬಿ-200, ತುರುವೇಕೆರೆ-100, ಕುಣಿಗಾಲ್-200 ರಿಂದ 250, ಪಾವಗಡ, ಚಿಕ್ಕನಾಯಕನಹಳ್ಳಿ ಮತ್ತು ಸಿರಾ ಸೇರಿ ಒಟ್ಟು ಎಂಟು ತಾಲ್ಲೂಕುಗಳಲ್ಲಿ ಪ್ರತಿಭಟನೆ ನಡೆದಿದೆ.


ದಾವಣಗೆರೆಯಲ್ಲಿ ಪ್ರತಿಭಟನಾ ಮೆರವಣಿಗೆ

ದಾವಣಗೆರೆ: ದಾವಣಗೆರೆ-120 ರಿಂದ 150, ಹರಪನಹಳ್ಳಿ-125, ಚಿತ್ರದುರ್ಗ-250, ಚಳ್ಳಕೆರೆ-200 ಒಟ್ಟು ನಾಲ್ಕು ತಾಲ್ಲೂಕುಗಳಲ್ಲಿ ಪ್ರತಿಭಟನೆ ನಡೆದಿದೆ.

ಬೀದರ್: ಬಸವಕಲ್ಯಾಣ -1300 ರಿಂದ 1400, ಹುಮ್ನಾಬಾದ್-500 ರಿಂದ 600, ಔರಾದ್-300, ಭಾಲ್ಕಿ-800, ಬೀದರ್-100 ಸೇರಿ ಒಟ್ಟು ಐದು ತಾಲ್ಲೂಕುಗಳಲ್ಲಿ ಪ್ರತಿಭಟನೆ ನಡೆದಿದೆ.

ಶಿವಮೊಗ್ಗ: ಸೊರಬ-100, ಹೊಸನಗರ, ಶಿಕಾರಿಪುರ, ಸಾಗರ ಮತ್ತು ಶಿವಮೊಗ್ಗ(120)ಗಳಲ್ಲಿ, ಪ್ರತಿಭಟನೆಗಳು ನಡೆದಿವೆ.

ಮಂಡ್ಯ: ಮಳವಳ್ಳಿ-500, ಮದ್ದೂರು-500, ಮಂಡ್ಯ-500, ಪಾಂಡವಪುರ-60, ನಾಗಮಂಗಲ, ಶ್ರೀರಂಗಪಟ್ಟಣ ಮತ್ತು ಕೆ. ಆರ್. ಪೇಟೆ ಸೇರಿ ಒಟ್ಟು ಏಳು ತಾಲ್ಲೂಕುಗಳಲ್ಲಿ ಪ್ರತಿಭಟನೆ ನಡೆದಿದೆ. ಮಳವಳ್ಳಿ, ಮದ್ದೂರು, ಮಂಡ್ಯಗಳಲ್ಲಿ ಬಂಧಿಸಿ ಸಂಜೆ ಬಿಡುಗಡೆ ಮಾಡಿರುತ್ತಾರೆ.

ಮೈಸೂರು: ಮೈಸೂರು-100, ಹುಣಸೂರು -250, ಹೆಚ್. ಡಿ. ಕೋಟೆ-250, ಪಿರಿಯಾ ಪಟ್ಟಣ-250, ನಂಜನಗೂಡು-250 ಸೇರಿ ಒಟ್ಟು ಐದು ತಾಲ್ಲೂಕುಗಳಲ್ಲಿ ಪ್ರತಿಭಟನೆ ನಡೆದಿದೆ. ಚಾಮರಾಜನಗರದ ವಿವರ ದೊರೆತಿಲ್ಲ.


ಹರಪನಹಳ್ಳಿಯಲ್ಲಿ ಧರಣಿ

ಆನೇಕಲ್ :

ಆನೇಕಲ್‌ನಲ್ಲಿ ಸಿಪಿಐ(ಎಂ), ಸಿಐಟಿಯು ಕರ್ನಾಟಕ ರಾಜ್ಯ ಗ್ರಾಮ ಪಂಚಾಯತಿ ನೌಕರರ ಸಂಘ ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘ ಕರ್ನಾಟಕ ಪ್ರಾಂತ ರೈತ ಸಂಘ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಗಳ ನೇತೃತ್ವದಲ್ಲಿ ಆನೇಕಲ್ ತಾಲ್ಲೂಕು ಪಂಚಾಯತಿಯಿಂದ ಮೆರವಣಿಗೆ ನಡೆಸಿದ ನೂರಾರು ಕಾರ್ಯಕರ್ತರು ತಹಶೀಲ್ದಾರ್ ಕಛೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು. ಪ್ರಚಾರಾಂದೋಲನದ ಅಂಗವಾಗಿ ಬೊಮ್ಮಸಂದ್ರ, ಹೆಬ್ಬುಗೋಡಿ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಬೈಕ್ ರ್‍ಯಾಲಿ ನಡೆಸಿ, ಸಭೆಗಳನ್ನು ನಡೆಸಲಾಯಿತು.

ಪ್ರತಿಭಟನಾ ಸಭೆಯನ್ನು ಉದ್ದೇಶಿಸಿ ಸಿಪಿಐ(ಎಂ) ತಾಲ್ಲೂಕು ಕಾರ್ಯದರ್ಶಿ ಮಹದೇಶ್, ಸಿಐಟಿಯು ತಾಲ್ಲೂಕು ಅಧ್ಯಕ್ಷರಾದ ಶಿವರಾಮರೆಡ್ಡಿ, ಸಿಐಟಿಯು ತಾಲ್ಲೂಕು ಪ್ರಧಾನ ಕಾರ್ಯದರ್ಶಿ ಬಿ.ಎನ್.ಮಂಜುನಾಥ್ ಜನವಾದಿ ಮಹಿಳಾ ಸಂಘಟನೆಯ ತಾಲ್ಲೂಕು ಅಧ್ಯಕ್ಷರಾದ ಸುಬ್ಬಲಕ್ಷ್ಮಮ್ಮನವರು ಕೇಂದ್ರ, ರಾಜ್ಯ ಸರ್ಕಾರಗಳ ಜನವಿರೋಧಿ ನೀತಿಗಳನ್ನು ಖಂಡಿಸಿ ಮಾತನಾಡಿ ಆನೇಕಲ್ ತಾಲ್ಲೂಕಿನಲ್ಲಿ ರೈತರು ಹತ್ತಾರು ವರ್ಷಗಳಿಂದ ಸಾಗುವಳಿ ಮಾಡುತ್ತಾ ಬಂದಿದ್ದರೂ ಭೂ ಸುಧಾರಣೆ ಕಾಯ್ದೆ ಮತ್ತು ಅಕ್ರಮ ಸಾಗುವಳಿ ಸಕ್ರಮಗೊಳಿಸುವ ಕಾರ್ಯಕ್ರಮದ ಅಡಿಯಲ್ಲಿ ಸಕ್ರಮಗೊಳಿಸಲು ಅರ್ಜಿಗಳನ್ನು ವಿಲೇವಾರಿ ಮಾಡಲು ಮೀನಾಮೇಷ ಎಣಿಸುತ್ತಿರುವ ರಾಜ್ಯ ಬಿಜೆಪಿ ಸರ್ಕಾರ ಭೂಗಳ್ಳರಿಗೆ ಜಮೀನನ್ನು ಕೊಡುವ ನಿಟ್ಟಿನಲ್ಲಿ ಮೂಲ ದಾಖಲೆಗಳಿಲ್ಲ ಎನ್ನುವ ಹೆಸರಿನಲ್ಲಿ ರೈತರ ಮೇಲೆ ಕೇಸ್‌ಗಳನ್ನು ಹಾಕಿ ರೈತರನ್ನು ಒಕ್ಕಲೆಬ್ಬಿಸಲು ಹುನ್ನಾರ ನಡೆಸಿದೆ. ರಾಜ್ಯ ಸರ್ಕಾರ ಕೂಡಲೇ ಈ ಕ್ರಮವನ್ನು ವಾಪಸ್ಸು ಪಡೆದು ಸರ್ಕಾರವೇ ಜಮೀನುಗಳಿಗೆ ಮೂಲ ದಾಖಲೆಗಳನ್ನು ಒದಗಿಸಬೇಕು ಮತ್ತು ಅಕ್ರಮ ಬೀಗಮುದ್ರೆ ಹಾಕಿ ಕಾರ್ಮಿಕರನ್ನು ಬೀದಿಪಾಲು ಮಾಡಿರುವ ಬೊಮ್ಮಸಂದ್ರ ಕೈಗಾರಿಕಾ ಪ್ರದೇಶದ ಪೆನೆಸ್ಕೋ ಬಿಲ್ಡಿಂಗ್ ಸಿಸ್ಟಮ್ ಮಿಲ್‌ಟೆಕ್ ಮಿಷನರಿ ಪ್ರೈ.ಲಿ., ಆಡಳಿತ ಮಂಡಳಿಗಳ ಮೇಲೆ ಕಾನೂನು ಕ್ರಮ ಕೈಗೊಂಡು ಕಾರ್ಮಿಕರಿಗೆ ನ್ಯಾಯ ದೊರಕಿಸಬೇಕು ಹಾಗೂ ಸರ್ಕಾರದ ಹೊಸ ಆದೇಶದಂತೆ ಗ್ರಾಮ ಪಂಚಾಯತಿ ನೌಕರರಿಗೆ ಆನೇಕಲ್ ತಾಲ್ಲೂಕಿನ ಎಲ್ಲಾ ಗ್ರಾಮ ಪಂಚಾಯತಿಗಳು ವೇತನವನ್ನು ನೀಡಬೇಕೆಂದು ಆಗ್ರಹಿಸಿದರು. ನಂತರ ಮನವಿಪತ್ರ ಸ್ವೀಕರಿಸಿದ ತಹಶೀಲ್ದಾರ್ ಮತ್ತು ತಾಲ್ಲೂಕು ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮಾತನಾಡಿ ಈ ಸಂಬಂಧ ಸಂಘದ ಮುಖಂಡರೊಂದಿಗೆ ಚರ್ಚಿಸಲು ಸಭೆ ಕರೆಯಲಾಗುತ್ತದೆ ಎಂದರು.

ಪ್ರತಿಭಟನೆಯ ನೇತೃತ್ವವನ್ನು ಸಿಪಿಐ(ಎಂ) ತಾಲ್ಲೂಕು ಮುಖಂಡ ರಾಮಕೃಷ್ಣ, ಸಿಐಟಿಯು ತಾಲ್ಲೂಕು ಮುಖಂಡರಾದ ಶಿವಕುಮಾರ್, ಚಂದ್ರಶೇಖರ್, ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ನೌಕರರ ಸಂಘದ ತಾಲ್ಲೂಕು ಅಧ್ಯಕ್ಷರಾದ ನಂಜಾರೆಡ್ಡಿ ತಾಲ್ಲೂಕು ಕಾರ್ಯದರ್ಶಿ ಅಶೋಕಕುಮಾರ್, ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘದ ತಾಲ್ಲೂಕು ಪ್ರಧಾನ ಕಾರ್ಯದರ್ಶಿ ಶಾಂತಮ್ಮ ಮುಖಂಡರಾದ ಉಮಾ, ಇಂದ್ರಾಣಿ, ಜಗದಾಂಬ ಕರ್ನಾಟಕ ಪ್ರಾಂತ ರೈತ ಸಂಘದ ತಾಲ್ಲೂಕು ಉಪಾಧ್ಯಕ್ಷರಾದ ಬಾಲರಾಜ್, ನಾರಾಯಣಪ್ಪ ವಹಿಸಿದ್ದರು.

ಕೇರಳ ಮತ್ತು ಪಶ್ಚಿಮ ಬಂಗಾಳದಲ್ಲಿ.....

ಪುಟ 2 ರಿಂದ

ಮುಂದಾಗಿವೆ. ಈ ಹಿಂಸೆಯ ಮತ್ತೊಂದು ಮುಖ ಮಾವೋವಾದಿ ಹಿಂಸಾಚಾರವಾಗಿದ್ದು, ಸಿಪಿಎಂನ್ನು ಗುರಿಯಾಗಿಸಿಕೊಂಡಿದೆ. ಈ ಮೈತ್ರಿ ಈ ಚುನಾವಣೆಯಲ್ಲೂ ಹಿಂಸೆಗೆ ಮುಂದಾಗಲಿದೆ. ಒಮ್ಮೆ ಎಡರಂಗ ಚುನಾವಣೆಯಲ್ಲಿ ಗೆದ್ದರೆ ಶಾಂತಿ ಸ್ಥಾಪಿಸುವುದು ಸುಲಭವಾಗಲಿದೆ.

ಪ್ರ: ಪ.ಬಂಗಾಳ ಚುನಾವಣೆಯಲ್ಲಿ ಎಡರಂಗದ ಅವಕಾಶಗಳ ಕುರಿತು ನೀವು ಹೇಗೆ ಅಂದಾಜಿಸಿದ್ದೀರ/2009ರ ಲೋಕಸಭೆ ಚುನಾವಣೆಯಲ್ಲಿದ್ದ ಪರಿಸ್ಥಿತಿ ಬದಲಾವಣೆ ಕಂಡಿದೆಯೇ?

ಪ್ರಕಾಶ್: ಖಂಡಿತ. 2009ರ ಪರಿಸ್ಥಿತಿಗೆ ಹೋಲಿಸಿದರೆ ಸಾಕಷ್ಟು ಬದಲಾವಣೆ ಕಂಡಿದೆ. ಈಗ ಬೆಲೆ ಏರಿಕೆ ನೇರವಾಗಿ ಕೇಂದ್ರ ಸರ್ಕಾರ ಮತ್ತು ತೃಣಮೂಲ ಕಾಂಗ್ರೆಸ್‌ಗೆ ಸಂಬಂಧಿಸಿದ್ದಾಗಿದೆ. ಇದು ಒಂದು ಅಂಶ. ಮತ್ತೊಂದು ಕಳೆದ ಎರಡು ವರ್ಷಗಳಲ್ಲಿ ಎಡರಂಗ ಸರ್ಕಾರ ಆಡಳಿತದಲ್ಲಿ ಸಾಕಷ್ಟು ಬದಲಾವಣೆಗಳನ್ನು ತಂದಿದೆ. ಆಗಿದ್ದ ಕೆಲವಾರು ನ್ಯೂನತೆಗಳನ್ನು ಸರಿಪಡಿಸಿದ್ದು ಅಗತ್ಯ ಕ್ರಮಗಳನ್ನು ಕೈಗೊಂಡಿದೆ. ಹಾಗಾಗಿ 2009ರಲ್ಲಿದ್ದ ಟ್ರೆಂಡ್ ರಿವರ್ಸ್ ಆಗಿದೆ ಎಂದು ಭಾವಿಸಿದ್ದೇನೆ. ಹಾಗಾಗಿ ಎಡರಂಗ ಮತ್ತೆ ಚುನಾವಣೆಯಲ್ಲಿ ಜಯಗಳಿಸುವ ವಿಶ್ವಾಸವಿದ್ದು, ಫಲಿತಾಂಶಗಳು ಅದನ್ನು ತೋರಿಸಲಿವೆ.

ಪ್ರ: ಐದು ರಾಜ್ಯಗಳ ಚುನಾವಣೆ ಫಲಿತಾಂಶಗಳು ರಾಷ್ಟ್ರ ರಾಜಕೀಯದ ಮೇಲೆ ಎಂತಹ ಪರಿಣಾಮ ಬೀರಲಿದೆ?

ಪ್ರಕಾಶ್: ಈ ಐದೂ ರಾಜ್ಯಗಳ ಫಲಿತಾಂಶಗಳನ್ನು ನಿರೀಕ್ಷಿಸಿದಾಗ, ಕೇರಳ ಮತ್ತು ಪ.ಬಂಗಾಳ ಚುನಾವಣೆಗಳು ಎಡಪಕ್ಷಗಳಿಗೆ ತುಂಬಾ ಮುಖ್ಯವಾಗಿದೆ. ಕೇರಳ ಮತ್ತು ಪ.ಬಂಗಾಳ ಚುನಾವಣೆಗಳು ರಾಷ್ಟ್ರಮಟ್ಟದಲ್ಲಿ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಎಡಪಕ್ಷಗಳು ಇನ್ನಷ್ಟು ಶಕ್ತಿಯುತವಾಗಿ ಮುಂದಕ್ಕೊಯ್ಯಲು ಸಹಕಾರಿಯಾಗಲಿದೆ. ತಮಿಳುನಾಡಿನ ಫಲಿತಾಂಶವೂ ತುಂಬಾ ಮುಖ್ಯ. ಏಕೆಂದರೆ ಇದು ಹೊಸ ಉದಾರೀಕರಣ ಮತ್ತು ಭ್ರಷ್ಟ ಕೂಟದ ಮೇಲೆ ನೇರವಾಗಿ ಪರಿಣಾಮ ಬೀರಲಿದೆ. ಇದು ರಾಷ್ಟ್ರ ರಾಜಕಾರಣದ ಮೇಲೂ ಗಂಭೀರ ಪರಿಣಾಮ ಬೀರಲಿದೆ.

1.30 ಲಕ್ಷ ಕೋಟಿ ಬಾಬಾ ಆಸ್ತಿ ಸುತ್ತ ಚೋರ ಸಾಮ್ರಾಜ್ಯ

1. 30 ಲಕ್ಷ ಕೋಟಿ ಬಾಬಾ ಆಸ್ತಿ ಸುತ್ತ ಚೋರ ಸಾಮ್ರಾಜ್ಯ


ಪುಟ್ಟಪರ್ತಿಯಲ್ಲಿ ರಾಜಕಾರಣಿಗಳ ಕಪ್ಪುಹಣ ! ಪ್ರಶಾಂತಿ ನಿಲಯ ಪಕ್ಕದ ಐಟಿ ಕೋರ್ ಬಿಲ್ಡಿಂಗ್‌ನಲ್ಲಿ ಟ್ರಸ್ಟಿಗಳಿಂದಲೇ ಕಳ್ಳ ಕಾರ್ಯ?

ಸತ್ಯಸಾಯಿಬಾಬಾ ನಿರ್ಮಿಸಿದ ಭಕ್ತಿ ಸಾಮ್ರಾಜ್ಯದಲ್ಲಿ ಈಗ 'ಕಳ್ಳರ' ಪ್ರವೇಶವಾಗಿದೆ! ಬಾಬಾ ದೃಷ್ಟಿಗೆ ಬಾರದ ರೀತಿಯಲ್ಲಿ ಸತ್ಯಸಾಯಿ ಟ್ರಸ್ಟ್‌ನ ಕೆಲ ಸದಸ್ಯರೇ ಪುಟ್ಟಪರ್ತಿಯನ್ನು ಕಪ್ಪು ಸಾಮ್ರಾಜ್ಯವನ್ನಾಗಿ ಬದಲಾಯಿಸಿದ್ದಾರೆ. ಅಷ್ಟೇ ಅಲ್ಲ, ಬಾಬಾ ಅವರು ಅನಾರೋಗ್ಯಪೀಡಿತರಾಗಿರುವ ಈ ವೇಳೆಯಲ್ಲೇ ಅವರು ಹೊಂದಿರುವ ರೂ.1.30 ಲಕ್ಷ ಕೋಟಿ ಆಸ್ತಿಯನ್ನು ಈ ಚೋರರೇ ಹಂಚಿಕೊಂಡು ತಿನ್ನುತ್ತಿರುವ ಆಘಾತಕಾರಿ ಸಂಗತಿ ಬೆಳಕಿಗೆ ಬಂದಿದೆ.

ಪುಟ್ಟಪರ್ತಿಯಲ್ಲೇ ಕಾರ್ಯ ನಿರ್ವಹಿಸುತ್ತಿದ್ದ ಹಾಗೂ ಈ ಎಲ್ಲ ಅವ್ಯವಹಾರಗಳನ್ನು ಹತ್ತಿರದಿಂದಲೇ ಗಮನಿಸುತ್ತಿದ್ದ, ಹೆಸರು ಹೇಳಲಿಚ್ಛಿಸದ ಹಿರಿಯ ಐಪಿಎಸ್ ಅಧಿಕಾರಿಯೊಬ್ಬರು ನೀಡಿದ ಮಾಹಿತಿಯನ್ನಾಧರಿಸಿ ತೆಲುಗಿನ ಆಂಧ್ರಜ್ಯೋತಿ ಪತ್ರಿಕೆ ಈ ಕುರಿತು ವಿಸ್ತೃತ ವರದಿ ಮಾಡಿದೆ.

ಟ್ರಸ್ಟ್ ಸದಸ್ಯರ ಖಾತೆರೆ ಭಕ್ತರ ಹಣ : ಬಾಬಾರವರ ದೇಶ ವಿದೇಶಗಳಲ್ಲಿರುವ ಆಸ್ತಿಗಳು ಸೇರಿದಂತೆ ಪ್ರಶಾಂತಿ ನಿಲಯದಲ್ಲಿರುವ ನಗದು, ಬಂಗಾರ, ವಜ್ರದ ಬೆಲೆ ಸುಮಾರು ರೂ.1.30 ಲಕ್ಷ ಕೋಟಿ ಎಂದು ಅಂದಾಜಿಸಲಾಗಿದೆ. ಇದೆಲ್ಲಾ ಭಕ್ತರು ಬಾಬಾರವರನ್ನು ಸಾಕ್ಷಾತ್ ದೇವರೆಂದು ನಂಬಿ ಅರ್ಪಿಸಿದ ಸಂಪತ್ತು. ಇದರಲ್ಲಿ ಸ್ವಲ್ಪ ಮಟ್ಟಿಗೆ ಟ್ರಸ್ಟ್ ಖಾತೆಯಲ್ಲಿ ಜಮೆ ಆದರೆ ಉಳಿದ ಹಣ ಟ್ರಸ್ಟ್‌ನ ಕೆಲ ಸದಸ್ಯರ ಖಾತೆಗಳಲ್ಲಿ ಜಮೆಯಾಗುತ್ತಿದೆ. ಬಾಬಾ ಆಸ್ಪತ್ರೆ ಸೇರಿದ ನಂತರ ಈ ಎಲ್ಲಾ ಹಣವನ್ನು ರಹಸ್ಯವಾಗಿ ಸಾಗಿಸುವ ಕೆಲಸ ಮುಂದುವರಿಯುತ್ತಿದೆ. ಪ್ರಶಾಂತಿ ನಿಲಯಕ್ಕೆ ಸಮೀಪದಲ್ಲಿರುವ ಐಟಿ ಕೋರ್ ಬಿಲ್ಡಿಂಗ್‌ನಲ್ಲಿ ಈ ರಹಸ್ಯ ಕಾರ್ಯಾಚರಣೆ ನಡೆಯುತ್ತಿದೆ.

ಈ ಸುದ್ದಿ ಓದಿ. ಇದು 'ಜನಶಕ್ತಿ'ಯ ಬರಹವಲ್ಲ. 'ಕನ್ನಡ ಪ್ರಭ'ದಲ್ಲಿ ಪ್ರಕಟಗೊಂಡಿರುವ ಸುದ್ದಿ. ಸಾಯಿಬಾಬಾರ ಭಕ್ತಿ ಸಾಕ್ಷಾತ್ಕಾರದ ಹಿಂದಿನ 'ಸತ್ಯ'ಗಳ ಕುರಿತು ಹೊಳಹು ನೀಡುವ ಎಷ್ಟೋ ಮಾಹಿತಿಗಳು ಇಲ್ಲಿವೆ. ಇದನ್ನು ಅರ್ಥ ಮಾಡಿಕೊಳ್ಳಲು ಯಾವ ದಿವ್ಯಶಕ್ತಿಯೂ ಬೇಕಾಗಿಲ್ಲ. ಯಾರು ಬೇಕಾದರೂ ಅರ್ಥ ಮಾಡಿಕೊಳ್ಳಬಹುದು.



ಸುಮಾರು 165 ದೇಶಗಳ ಹಲವು ವ್ಯಕ್ತಿಗಳ ಖಾತೆಗಳಲ್ಲಿ ಹಣ ಆನ್‌ಲೈನ್ ಮೂಲಕ ಸೇರುತ್ತಿದೆ. ಹೀಗೆ ಸೇರುತ್ತಿರುವುದು ಕೇವಲ ಭಕ್ತರು ನೀಡಿದ ಹಣ ಮಾತ್ರವೇ ಅಲ್ಲ ರಾಜಕಾರಣಿಗಳು ರಹಸ್ಯವಾಗಿ ಬಚ್ಚಿಟ್ಟಿದ್ದ ಕಪ್ಪು ಹಣವೂ ಸಾಗಿಸಲಾಗುತ್ತಿದೆ ಎನ್ನಲಾಗಿದೆ. ಯಾವುದೇ ಅಧಿಕಾರಿಗಳು ಈ ಕಟ್ಟಡದ ಸಮೀಪಕ್ಕೆ ಸುಳಿಯಲೂ ಸಾಧ್ಯವಿಲ್ಲದ ಕಾರಣ ಇದು ಮಿನಿ ಸ್ವಿಸ್ ಬ್ಯಾಂಕ್ ಮಾದರಿ ಕಾರ್ಯ ನಿರ್ವಹಿಸುತ್ತಿದೆ.

ಆಸ್ತಿ ಸುತ್ತ ಚೋರ ಸಾಮ್ರಾಜ್ಯ

ಪೊಲೀಸ್ ಉನ್ನತಾಧಿಕಾರಿ ಯೊಬ್ಬರು ಹೇಳುವ ಪ್ರಕಾರ, ಮಹಾರಾಷ್ಟ್ರದ ಮಾಜಿ ಮುಖ್ಯಮಂತ್ರಿಯೊಬ್ಬರು ಇಲ್ಲಿ ರೂ.2 ಸಾವಿರ ಕೋಟಿ ಇಟ್ಟಿದ್ದಾರೆ. ಹೀಗೆ ಆಂಧ್ರದ ಹಾಲಿ, ಮಾಜಿ ಸಚಿವರು, ಅನೇಕ ರಾಜಕಾರಣಿಗಳು ಇಲ್ಲಿ ಸಾವಿರಾರು ಕೋಟಿ

ಸಂಪತ್ತು ... ಬಾಬಾ ...
... ಇಟ್ಟಿದ್ದಾರೆ ...
ಕೆಲಸ ಈಗ ನಡೆಯುತ್ತಿದೆ.

ಬಂಗಾರದ ಮೇಲೆ ಕಳ್ಳರ ಕಣ್ಣು : ಪ್ರಶಾಂತಿ ನಿಲಯ ಒಂದು ಚಿನ್ನದ ಪರ್ವತ. ಬಾಬಾಗೆ ... ಬಂದ ಕಾಣಿಕೆಗಳಿಗಿಂತ ಬಂಗಾರದ ... ಕೊಡುಗೆಗಳೇ ಅಧಿಕ. ವಜ್ರ, ಮುತ್ತು, ರತ್ನಗಳು ಲೆಕ್ಕವಿಲ್ಲದಷ್ಟು ಇವೆ ಎನ್ನಲಾಗಿದೆ. ಲೆಕ್ಕಪತ್ರಗಳಿಲ್ಲದ ಬಂಗಾರ ಈಗಾಗಲೇ ಕಬಳಿಸಲಾಗಿದ್ದು ಇನ್ನೂ ಸುಮಾರು 10 ಟನ್ ಬಂಗಾರವನ್ನು ಬಾಬಾ ವಿಶ್ರಾಂತಿ ಮಂದಿರದಲ್ಲಿ ಭದ್ರಪಡಿಸಲಾಗಿದೆ ಎಂದು ತಿಳಿದುಬಂದಿದೆ. ಕೆಲ ಟ್ರಸ್ಟ್ ಸದಸ್ಯರ ದೃಷ್ಟಿ ಈ ಚಿನ್ನದ ಮೇಲೂ ಬಿದ್ದಿದೆ ಎಂದು ಮೂಲಗಳನ್ನು ಉಲ್ಲೇಖಿಸಿ ಪತ್ರಿಕೆ ವರದಿ ಮಾಡಿದೆ.

ರಹಸ್ಯ ಸಭೆ : ಮಾಧ್ಯಮಗಳಲ್ಲಿ ಬರುತ್ತಿರುವ ವರದಿಗಳಿಂದ ಕಂಗಾಲಾಗಿರುವ ಟ್ರಸ್ಟ್ ಸದಸ್ಯರು ಶನಿವಾರ ರಾತ್ರಿ ಪ್ರಶಾಂತಿ ನಿಲಯದಲ್ಲಿ ರಹಸ್ಯ ಸಭೆ ನಡೆಸಿದ್ದಾರೆನ್ನಲಾಗಿದೆ. ಇದರ ಜೊತೆಗೆ ಬಾಬಾ ಆಸ್ಪತ್ರೆ ಸೇರಿದ ದಿನದಿಂದ ಚೆಕ್‌ಗಳ ಮೇಲೆ ಬೇನಾಮಿ ಸಹಿಗಳನ್ನು ಪಡೆಯಲಾಗುತ್ತಿದೆ ಎಂದು ತಿಳಿದುಬಂದಿದೆ. ಆದರೆ ಅಕ್ರಮಗಳಲ್ಲಿ ಪಾಲ್ಗೊಳ್ಳದ ಟ್ರಸ್ಟ್‌ನ ಸಭ್ಯ ಸದಸ್ಯರು ಈ ಸಭೆಯಲ್ಲಿ ಪಾಲ್ಗೊಂಡಿಲ್ಲ. ಈ ನಡುವೆ ಮಾಧ್ಯಮಗಳಲ್ಲಿನ ವರದಿಗಳಿಗೆ ಸ್ಪಂದಿಸಿರುವ ಸರ್ಕಾರ ಶನಿವಾರ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ ಸರ್ಕಾರದ ಪ್ರತಿನಿಧಿಯಾಗಿ ಆರ್ಥಿಕ ಶಾಖೆಯ ಮುಖ್ಯ ಕಾರ್ಯದರ್ಶಿ ಎಲ್.ವಿ.ಸುಬ್ರಹ್ಮಣ್ಯರನ್ನು ಪುಟ್ಟಪರ್ತಿಗೆ ಕಳುಹಿಸಲು ತೀರ್ಮಾನಿಸಿದೆ.

ಆನೇಕಲ್ : ಒಕ್ಕಲೆಬ್ಬಿಸುವಿಕೆ ಖಂಡಿಸಿ ಬಗರ್‌ಹುಕುಂ ಸಾಗುವಳಿದಾರರ ಹೋರಾಟ


ಬೆಂಗಳೂರು ನಗರ ಜಿಲ್ಲೆಯ ಆನೇಕಲ್ ತಾಲ್ಲೂಕಿನಲ್ಲಿ 7,252 ರೈತ ಕುಟುಂಬಗಳು, ವಿಶೇಷವಾಗಿ ಬಹುಸಂಖ್ಯಾತ ದಲಿತರು, ಬಡ ರೈತ ಕುಟುಂಬಗಳು ಅನೇಕ ವರ್ಷಗಳಿಂದ ಅಲ್ಪಸ್ವಲ್ಪ ಸರ್ಕಾರಿ ಭೂಮಿಯಲ್ಲಿ ಕೃಷಿ ಮಾಡಿಕೊಂಡು ಜೀವನ ಸಾಗಿಸುತ್ತಾ, ಈ ಭೂಮಿಯನ್ನು ಸಕ್ರಮ ಮಾಡಿ, ಸಾಗುವಳಿ ಚೀಟಿಗಳನ್ನು ನೀಡಬೇಕೆಂದು ಫಾರಂ ನಂ.50 ಮತ್ತು 53 ಗಳನ್ನು ಸರ್ಕಾರಕ್ಕೆ ಸಲ್ಲಿಸಿದ್ದಾರೆ. ಈ ಬಗ್ಗೆ ತಿಳುವಳಿಕೆಯಿಲ್ಲದೆ ಇನ್ನೂ ಸಾವಿರಾರು ರೈತರು ತಮ್ಮ ಬಗರ್‌ಹುಕುಂ ಸಾಗುವಳಿಯನ್ನು ಸಕ್ರಮ ಮಾಡಲು ಕೋರಿ ಅರ್ಜಿಗಳನ್ನು ಸಲ್ಲಿಸಿಲ್ಲ. ಹತ್ತಾರು ವರ್ಷಗಳಿಂದ ಈ ಬಡವರು ಸಲ್ಲಿಸಿರುವ ಅರ್ಜಿದಾರರಿಗೆ ಭೂಮಿಯನ್ನು ಸಕ್ರಮ ಮಾಡದೇ ಇದ್ದ ಸರ್ಕಾರಗಳು, ಈಗ 'ಬೆಂಗಳೂರು ನಗರ' 'ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ'ಯಾಗಿರುವ ಹಿನ್ನೆಲೆಯಲ್ಲಿ ಹಿಂದಿನಂತೆ ಬೆಂಗಳೂರು ನಗರದ ಗಡಿಯಿಂದ ಆಚೆ 25 ಕಿ.ಮೀ ದೂರದ ಪ್ರದೇಶದಲ್ಲಿ ಬರುವ ಗ್ರಾಮಗಳ ಬಗರ್‌ಹುಕುಂ ಸಾಗುವಳಿಯನ್ನು ಸಕ್ರಮ ಮಾಡಲು ಬರುವುದಿಲ್ಲವೆಂದು ತಮ್ಮ ಸರ್ಕಾರ ಹೇಳುತ್ತಿದೆ. ಇದರಿಂದ ನಗರದ ವಿಪರೀತ ಬೆಳವಣಿಗೆಯ ಕಾರಣದಿಂದ ಇಡೀ ಆನೇಕಲ್ ತಾಲ್ಲೂಕಿನ ಎಲ್ಲಾ ಬಗರ್‌ಹುಕುಂ ಸಾಗುವಳಿದಾರರು ಸಂಕಷ್ಟಕ್ಕೆ ಗುರಿಯಾಗಿದ್ದಾರೆ.

ಅಲ್ಲದೆ, 30 ರಿಂದ 40 ವರ್ಷಗಳಿಂದ ಕೃಷಿ ಮಾಡಿಕೊಂಡು ಮನೆಗಳನ್ನು ಕಟ್ಟುಕೊಂಡು ಜೀವನ ಸಾಗಿಸುತ್ತಿದ್ದ ಆನೇಕಲ್ ತಾಲ್ಲೂಕಿನ ಸುಮಾರ 1200 ರೈತರಿಗೆ, 'ಸರ್ಕಾರಿ ಜಮೀನಿಗೆ' ಅಕ್ರಮವಾಗಿ ಪಹಣಿ ಇತ್ಯಾದಿ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿದ್ದೀರೆಂದು, 'ಕರ್ನಾಟಕ ಭೂ ಕಂದಾಯ ಕಾಯ್ದೆ 1964 ಕಲಂ 136 (3)' ರಡಿಯಲ್ಲಿ ಕಾರಣ ಕೇಳಿ ನೋಟೀಸ್‌ಗಳನ್ನು ಜಾರಿ ಮಾಡಿ, ನಿಗದಿತ ಸಮಯದೊಳಗೆ ಬಹುತೇಕ ರೈತರ ಹತ್ತಿರ ಇಲ್ಲದಿರುವ ದಾಖಲೆಗಳನ್ನು ತಂದು ತಮ್ಮ ನ್ಯಾಯಾಲಯದಲ್ಲಿ ನೀಡಬೇಕೆಂದು ಇಲ್ಲದಿದ್ದರೆ, ರೈತರ ಜಮೀನನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದಾಗಿ ಬೆಂಗಳೂರು ನಗರ ವಿಶೇಷಾಧಿಕಾರಿಗಳು ಹೇಳಿದ್ದಾರೆ. ಇದರಿಂದ ರೈತರು ತೀವ್ರತರ ಕ್ಷೋಭೆಗೆ ಸಿಲುಕಿ ನರಳುತ್ತಿದ್ದಾರೆ. ಪರಿಸ್ಥಿತಿಯ ದುರ್ಲಾಭವನ್ನು ಪಡೆದು ಕೆಲವರು ಇಂತಹ ರೈತರನ್ನು ಭೂ ಉಳಿಸಿಕೊಡುವುದಾಗಿ ಹಣ ದೋಚುತ್ತಿದ್ದಾರೆ.

ಈ ಹಿನ್ನೆಲೆಯಲ್ಲಿ ಇಂದು ಸಾವಿರಾರು ರೈತರು ಬೆಂಗಳೂರು ನಗರದಲ್ಲಿ ಮೆರವಣಿಗೆ ಮೂಲಕ ಈ ಕೆಳಗಿನ ಬೇಡಿಕೆಗಳನ್ನು ಈಡೇರಿಸಬೇಕೆಂದು ಆಗ್ರಹಿಸಿದರು.

5 ಕಡೆ ಸಮಾವೇಶಗಳನ್ನು ನಡೆಸಿ, ಹೋರಾಟ ಸಮಿತಿಗಳನ್ನು ರಚನೆ ಮಾಡಿ ಸಂಘಟಿಸಲಾಯಿತು. ಪ್ರಮುಖ ಬೇಡಿಕೆಗಳಿಗೆ ಮುಖ್ಯಮಂತ್ರಿ ಮನೆ ಚಲೋ ನಡೆಸಲಾಯಿತು. ತಾಲ್ಲೂಕಿನಿಂದ ಸಾವಿರಾರು ರೈತರು ಭಾಗವಹಿಸಿದ್ದರು. ಕಂದಾಯ ಮಂತ್ರಿಗಳ ಕಾರ್ಯದರ್ಶಿ ಮನವಿ ಪತ್ರ ಸ್ವೀಕರಿಸಿದರು. ಹೋರಾಟ ಸಮಿತಿಗಳ ಮುಖಂಡರು ರೈತಸಂಘದ ಮುಖಂಡರನ್ನೊಳಗೊಂಡ ಸಭೆ ಕರೆಯುತ್ತೇವೆ ಎಂದು ಭರವಸೆ ನೀಡಿದ್ದಾರೆ.

ಆನೇಕಲ್ ಶಾಸಕರಾದ ನಾರಾಯಣ ಸ್ವಾಮಿಯವರನ್ನು ರೈತಸಂಘ, ಹೋರಾಟ ಸಮಿತಿಗಳ ಮುಖಂಡರ ನಿಯೋಗ ಭೇಟಿ ಮಾಡಿ ಅವರಿಗೂ ಮನವಿ ಕೊಡಲಾಯಿತು. ಮೂಲ ದಾಖಲಾತಿಗಳ ರೈತರ ಮೇಲೆ ಕೇಸುಗಳು ಹಾಕಿರುವುದು ನನಗೆ ಗೊತ್ತಿಲ್ಲ ಎಂದು ತಿಳಿಸಿದರು. ಇತ್ತೀಚೆಗೆ ಬಗರ್‌ಹುಕುಂ ಸಾಗುವಳಿದಾರರ ಭೂಮಂಜೂರಾತಿ ಸಮಿತಿ ರಚನೆ ಮಾಡಿದ್ದೇವೆ. ಇದೇ ತಿಂಗಳ 30ನೇ ದಿನಾಂಕದೊಳಗೆ ಸಭೆ ಕರೆದು ಹಕ್ಕುಪತ್ರ ನೀಡಲು ಪರಿಶೀಲನೆ ನಡೆಸುತ್ತೇವೆ ಎಂದು ತಿಳಿಸಿದರು.




ಮುಖ್ಯಮಂತ್ರಿ ಮನೆ ಮುಂದೆ ಧರಣಿ ಕಾರ್ಯಕ್ರಮದಲ್ಲಿ ರೈತಸಂಘ ಪ್ರಧಾನ ಕಾರ್ಯದರ್ಶಿ ಜಿ.ಸಿ.ಬಯ್ಯಾರೆಡ್ಡಿ, ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಪ್ರಕಾಶ್ ಭಾಗವಹಿಸಿ ಮಾತನಾಡಿದರು.

ಬಗರ್‌ಹುಕುಂ ಹೋರಾಟ ಸಮಿತಿ, ಅಧ್ಯಕ್ಷರು ಡಿ.ಎಂ. ನಾರಾಯಣಪ್ಪ ಕಾರ್ಯದರ್ಶಿ ಶಿವರಾಮರೆಡ್ಡಿ ಭಾಗವಹಿಸಿದ್ದರು.

ಮೂಲ ದಾಖಲಾತಿಗಳಿಲ್ಲದ ರೈತರ ಹೋರಾಟ ಸಮಿತಿ ಅಧ್ಯಕ್ಷರು ನಾರಾಯಣಪ್ಪ ಕಾರ್ಯದರ್ಶಿ ರಾಜಣ್ಣ ಮತ್ತು ಪ್ರಾಂತ ರೈತಸಂಘದ ಅಧ್ಯಕ್ಷರು ಬಚ್ಚ... ಮಹದೇಶ್ ಭಾಗವಹಿಸಿದ್ದರು.

ಬೆಂಗಳೂರು ನಗರದ ಟೌನ್‌ಹಾಲ್‌ನಿಂದ ಮೆರವಣಿಗೆ ನಡೆಸಿ, ಮೈಸೂರ್‌ಬ್ಯಾಂಕ್ ಸರ್ಕಲ್ ಹತ್ತಿರ ಸಭೆ ನಡೆಸಲಾಯಿತು. ಬಗರ್‌ಹುಕುಂ ರೈತರು ಮೂಲ ದಾಖಲಾತಿಗಳು ಇಲ್ಲದ ರೈತರು ಭಾಗವಹಿಸಿದ್ದರು.



ಬಿ ಜೆ ಪಿ

ಸೈಟು ರಾಘವೇಂದ್ರರದಲ್ಲ ಸರಿ.... ಕಟ್ಟಡ ಯಾರದ್ದು ಸ್ವಾಮಿ

■ ಆರ್.ರಾಮಕೃಷ್ಣ

ಈ 'ವ್ಯವಹಾರ'ದ ಸೊಗಸು ನೋಡಿ. ಭೂ ಹಗರಣಗಳ ಉರುಳು ಯಡಿಯೂರಪ್ಪನವರ ಕೊರಳಿಗೆ ಸುತ್ತಿಕೊಂಡು ಇನ್ನೇನು ಅವರ ಕುರ್ಚಿಗೆ ಸಂಚಕಾರ ತರುತ್ತದೆ ಎಂಬಂತಹ ವಾತಾವರಣ ಬಂದಿತ್ತಲ್ಲ ಇತ್ತೀಚೆಗೆ, ಆಗ ನಮ್ಮ ಯಡಿಯೂರಪ್ಪ ಏನು ಮಾಡಿದರು? ಬೀಸೋ ದೊಣ್ಣೆ ತಪ್ಪಿಸಿಕೊಂಡರೆ ಸಾವಿರ ವರ್ಷ ಆಯಸ್ಸು ಅಂತ ನಂಬಿ ಒಂದು ದಾಳ ಉರುಳಿಸಿದರೇನೋ. ತಮ್ಮ ಮಗ ಸಂಸದ ಬಿ.ವೈ. ರಾಘವೇಂದ್ರನಿಗೆ ಮುಖ್ಯಮಂತ್ರಿಗಳ ವಿವೇಚನಾ ಕೋಟಾದ ಅಡಿಯಲ್ಲಿ ನೀಡಲಾಗಿದ್ದ ಬಿಡಿಎ ನಿವೇಶನವನ್ನು ದಿಡೀರ್ ಅಂತ ಜನವರಿ 5, 2011ರಂದು ರಾಘವೇಂದ್ರ ವಾಪಾಸ್ ಮಾಡಿಬಿಟ್ಟರು.

ಅದೋ ಬೆಂಗಳೂರಿನ ಆರ್.ಎಂ.ವಿ. 2 ನೇ ಹಂತದ ಬಡಾವಣೆಯಲ್ಲಿ ಕೊಡಲಾದ 50x80 ಅಳತೆ ನಿವೇಶನ. (ಹಾಗೆ ಬಿಡಲು ಮನಸ್ಸು ಬರುವುದುಂಟೆ) ಸರಿ ವಾಪಸ್ ಮಾಡಲಾದ ನಿವೇಶನವೇನಾಯಿತು? ಮತ್ತೊಬ್ಬ ಬಿಜೆಪಿ ಮುಖಂಡ ಬಸವರಾಜ ಪಾಟೀಲ ಸೇಡಂರಿಗೆ ಅದನ್ನು ನೀಡಲಾಯಿತು. ಫೆಬ್ರವರಿ 9 ರಂದು ನಿವೇಶನವು ಸೇಡಂರ ಹೆಸರಿಗೆ ಅಧಿಕೃತವಾಗಿ ಬಿ.ಡಿ.ಎ ಯಿಂದ ನೋಂದಣಿ ಕೂಡ ಆಗಿದೆ.

ಈಗ ಈ ಮುಂದಿನ ವಿವರ ನೋಡಿ. ಇಲ್ಲಿ ಏನು ನಡೆದಿದೆ ಎಂದು ತಿಳಿದುಕೊಳ್ಳುವುದು ಅವರವರ ಸಾಮಥ್ಯಕ್ಕೆ ಬಿಟ್ಟಿದ್ದು. ಹಿಂದೆ ತಮಗೆ ನೀಡಲಾದ ನಿವೇಶನದಲ್ಲಿ ರಾಘವೇಂದ್ರರು ಒಂದು ವಾಣಿಜ್ಯ ಮಳಿಗೆ ನಿರ್ಮಿಸಲು ಯೋಜಿಸಿದ್ದರು. ಆಗಲೇ



ನೆಲಮಹಡಿಯ ಕಾಮಗಾರಿ ಮುಗಿದಿತ್ತು. ಬಿಡಿಎಯು ಸೇಡಂರಿಗೆ ಸೈಟು ನೋಂದಣಿ ಮಾಡಿ ಕೊಡುವಾಗ ಅದರಲ್ಲಿ ಆಗಲೇ ಇದ್ದ ಕಟ್ಟಡದ ಬಗೆಗೆ ಏನನ್ನು ಪ್ರಸ್ತಾಪಿಸಿಲ್ಲ.

ಸರಿ ಇರಲಿ. ಈಗ ಅಲ್ಲಿ ಹಿಂದೆ ನಡೆಯುತ್ತಿದ್ದ ಕೆಲಸಗಳ ಮುಂದುವರಿಕೆ ಆಗುತ್ತಿದೆ. ಅಂದರೆ ಅಲ್ಲಿ ಈಗ ನೆಲಮಹಡಿಯ ನಂತರದ ಮತ್ತೊಂದು ಮಹಡಿಯ ಕಟ್ಟಡ ಮೇಲೆದ್ದಿದೆ. ಅದೇ ಗುತ್ತಿಗೆದಾರ, ಅದೇ ಕೆಲಸಗಾರರು ಅದೇ ನಕ್ಷೆ, ಅದೇ ಯೋಜನೆ.

'ದಿ ಹಿಂದೂ' ಪತ್ರಿಕೆಯ ವರದಿಗಾರ ನಿವೇಶನದ ಈಗಿನ ಮಾಲಿಕ ಬಸವರಾಜ ಪಾಟೀಲ ಸೇಡಂ ಅವರನ್ನು ಸಂಪರ್ಕಿಸಿ ಈ ಕಟ್ಟಡವನ್ನು ಕಟ್ಟುತ್ತಿರುವವರು ಯಾರು ಎಂದರೆ 'ಆ ಬಗೆಗೆ ನನಗೆ ಏನೂ ಗೊತ್ತಿಲ್ಲ. ನನ್ನನ್ನು ನನ್ನ ಪಾಡಿಗೆ ಬಿಟ್ಟು ಬಿಡಿ.. ನನ್ನ ಹೆಸರಿಗೆ ನಿವೇಶನ ನೋಂದಣಿ ಆಗಿದೆ. ನನಗೆ ಅಷ್ಟೇ ಗೊತ್ತಿರುವುದು." ಅಂತಾರಂತೆ: ಹಾಗಿದ್ದರೆ ಈ ಕಟ್ಟಡ ಕಟ್ಟುತ್ತಿರುವವರು ಯಾರು ? ಗುರು ರಾಘವೇಂದ್ರರ ಮಹಿಮೆಯಿಂದಾಗಿ ತಾನೆ ತಾನಾಗಿ ಕಟ್ಟಡ ಮೇಲೆ ಏಳುತ್ತಿದೆಯೋ ? ಏನು ಕತೆ ಇದು. !!

ಬಾಲಂಗೋಚಿ : ಕಟ್ಟಡದ ಕುರಿತಾಗಿ ಮಾಹಿತಿ ಪಡೆಯಲು ವರದಿಗಾರ ಬಿಬಿಎಂಪಿಯನ್ನು ಸಂಪರ್ಕಿಸಿದರೆ ಬಿಬಿಎಂಪಿ ಕೊಟ್ಟಿರುವ ಮಾಹಿತಿ ಏನು ಗೊತ್ತೆ? ಈ ನಿವೇಶನದಲ್ಲಿ ಕಟ್ಟಡವನ್ನು ಕಟ್ಟಲು ಯಾವ ರೀತಿಯ ಅನುಮತಿಯನ್ನೂ ಯಾರೂ ಪಡೆದಿಲ್ಲವಂತೆ. ಬಿಬಿಎಂಪಿ ಅನುಮತಿ ನೀಡಿಲ್ಲವಂತೆ !!! ಏನಿದು ಬಿಜೆಪಿ ದರ್ಬಾರ್...ಇದಕ್ಕೆ ಸರಿ ಸಾಟಿಯಾದ ಆಡಳಿತವನ್ನು ದೇಶದಲ್ಲಿ ಇನ್ನೇಲ್ಲಾದರೂ ಕಂಡರೆ ದಯಮಾಡಿ ತಿಳಿಸಿ. ಪ್ಲೀಸ್.

* * *

ಮಳೆ ಸುರಿಮಳೆ, ಗೊಂದಲಿಗರ ಮೇಳ

ಮಳೆ... ಸುರಿಮಳೆ.. ಅಂದ ಕೂಡಲೇ ಇದು



ಮೊನ್ನೆ ಮೊನ್ನೆ ರಾಜ್ಯದಲ್ಲಿ ಸುರಿದ ಮುಂಗಾರು ಪೂರ್ವ ಮಳೆ ಬಗ್ಗೆ ಅಂತ ಅಂದುಕೊಳ್ಳಬೇಡಿ. ಇದು ಬೇರೆ ಮಳೆ ಬಗೆಗೆ....ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ-ಬಿಬಿಎಂಪಿ ನೀಡುವ ಪ್ರಶಸ್ತಿಗಳ ಮಳೆ, ಸುರಿಮಳೆ ಬಗೆಗೆ. ಗೊಂದಲಿಗರ ಮೇಳ ಅಂದರೆ ಇಲ್ಲಿ ಜಾನಪದ ಕಲಾ ಪ್ರಕಾರ ಅಂತ ಭಾವಿಸಬಾರದು. ಪ್ರಶಸ್ತಿ ನೀಡಿಕೆ ಸಮಾರಂಭ ನೋಡಿದವರಿಗೆ ನೆನಪಾದ ಪದಗುಚ್ಛ ಇದು.

ಬಿಬಿಎಂಪಿಯು ಮೊನ್ನೆ ಕೆಂಪೇಗೌಡ ಪ್ರಶಸ್ತಿಯನ್ನು ನೀಡಿದೆ. ಮೊದಲಿಗೆ ಪ್ರಕಟಿಸಲಾದದ್ದು 235 ಮಂದಿಗೆ ಪ್ರಶಸ್ತಿ, ಅದು ಆಮೇಲೆ 258 ಕ್ಕೆ ಏರಿತು. ಏಪ್ರಿಲ್ 17 ರಂದು ಬಿಬಿಎಂಪಿ ಪ್ರಶಸ್ತಿ ಪ್ರಕಟಿಸಿದ್ದು 264 ಜನಕ್ಕೆ, ಏಪ್ರಿಲ್ 18 ಕ್ಕೆ ಅದು 276 ಕ್ಕೇರಿತು. ಪಾಲಿಕೆಯ ಪತ್ರಿಕಾಗೋಷ್ಠಿ ಶುರುವಾಗುವಾಗ ಒಂದು ಸಂಖ್ಯೆ... ಮತ್ತೊಂದಷ್ಟು ಸೇರ್ಪಡೆಯಿಂದಾಗಿ ಅದು ಮುಗಿಯುವ ಹೊತ್ತಿಗೆ ಬದಲಾದ ಮತ್ತೊಂದು ಸಂಖ್ಯೆ !!.

ಇನ್ನು ಪ್ರಶಸ್ತಿ ಪ್ರದಾನ ಸಮಾರಂಭದ ಬಗೆಗೆ ಹೆಚ್ಚು ಹೇಳದೇ ಇರುವುದೇ ಒಳ್ಳೆಯದು....ವೇದಿಕೆಯ ಮೇಲೆ ಜನಜಾತ್ರೆ, ತಳ್ಳಾಟ, ಕೆಲವು ಪುರಸತರಿಗಷ್ಟೆ ಚೆಕ್, ಪ್ರಮಾಣ ಪತ್ರ ಯಾರೊಬ್ಬರಿಗೂ ಇಲ್ಲ. ಹಾರಗಳ ಕೊರತೆ, 5 ಸ್ಮರಣಿಕೆಗಳ ಕಳ್ಳತನ, ವಿದ್ಯುತ್ ಶಾರ್ಟ್ ಸರ್ಕ್ಯುಟ್, ಹೋಗುವ- ಬರುವ.. ಇಬ್ಬರಿಗೂ ಒಂದೇ ಮಾರ್ಗ, ನೂಕಾಟ, ಪುರಸತರನ್ನು ಅವರ ಮನೆಗಳಿಂದ ಕರೆತರುವ, ಮನೆಗಳಿಗೆ ಕಳಿಸಿ ಕೊಡುವ ವ್ಯವಸ್ಥೆಗಳಿಲ್ಲ, ಮಹಾನಗರ ಪಾಲಿಕೆ ಸದಸ್ಯರಿಗೇ ಕೂರಲು ಖುರ್ಚಿಗಳಿಲ್ಲ. ಜನ ಕೂರುವ ಜಾಗಕ್ಕೆ ನಿಲುಗಡೆಗಾಗಿ ನುಗ್ಗಿದ ವಾಹನಗಳು... ಯಾವುದೋ ಹಾಸ್ಯ ಸಿನಿಮಾದ ಕ್ಲೈಮಾಕ್ಸ್ ದೃಶ್ಯಗಳಲ್ಲ - ಇವು ಬಿಜೆಪಿ ಪಕ್ಷದ ದರ್ಬಾರ್ ನಲ್ಲಿ ಬಿಬಿಎಂಪಿಯು ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಸಂಘಟಿಸಿದ ಪರಿ ಇದು. ಪ್ರಶಸ್ತಿ ಪಡೆದವರಲ್ಲಿ ಕೆಲವರು ಯಾರಾದರೂ ನಿಜಕ್ಕೂ ಅರ್ಹರಿದ್ದರೆ ಅವರಿಗೆ ಎಷ್ಟು ಮುಜುಗರ ವಾಗಿರಬಹುದು?

ಬಾಲಂಗೋಚಿ :

ಅಂದ ಹಾಗೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೆ ಪ್ರಶಸ್ತಿ ಕೊಟ್ಟಂತೆ ಜ್ಯೋತಿಷ್ಯ ಕ್ಷೇತ್ರದಲ್ಲಿನ ಸಾಧನೆಗೂ ಪ್ರಶಸ್ತಿ ದಕ್ಕಿದೆ. ಯಾರೋ ಯಡಿಯೂರಪ್ಪ 5 ವರ್ಷ ಕುರ್ಚಿಗೆ ನೇತುಹಾಕಿಕೊಂಡೇ ಇರಬಹುದು. ಕುರ್ಚಿ ಬಿಡಬೇಕಿಲ್ಲ ಅಂತ ಭವಿಷ್ಯ ಹೇಳಿರಬಹುದೇನೋ? ಇದು ಈಗ ಬಿಬಿಎಂಪಿಗೆ ಒದಗಿಬಂದಿರುವ ದುರ್ಗತಿ. ಮುಂದಿನ ಪ್ರಕರಣ ನೋಡಿ.

* * *

ಹಗರಣದ ತನಿಖಾ ವರದಿಯಾ ? ಸುಮ್ಮನೆ ಮುಚ್ಚಿಹಾಕು

2007-08ರ ಸಾಲಿನಲ್ಲಿ ಬಿಬಿಎಂಪಿಯಿಂದ ಹಿಂದುಳಿದ ಮತ್ತು ಅಲ್ಪ ಸಂಖ್ಯಾತ ವಿದ್ಯಾರ್ಥಿಗಳಿಗೆ ಕಂಪ್ಯುಟರ್ ತರಬೇತಿ ನೀಡುವ ಯೋಜನೆಯಲ್ಲಿ ಬಾರಿ ಅವ್ಯವಹಾರ ಆಗಿ ಅದರ ಬಗೆಗೆ ಬಿಬಿಎಂಪಿ ಕಾರ್ಯಪಡೆಯು ತನಿಖೆ ನಡೆದು ಅಕ್ರಮ ನಡೆದಿರುವುದು ನಿಜ, ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳಿ ಅನ್ನುವ ಶಿಫಾರಸ್ಸು ಮಾಡಲಾಗಿರುವ ವರದಿ ಸಲ್ಲಿಕೆ ಆಯ್ತು.

ಪುಟ 15 ಕ್ಕೆ

ಭಾಗ್ಯಲಕ್ಷ್ಮಿ ಬಾಂಡ್ ಸಿಕ್ಕವರೇ ಭಾಗ್ಯವಂತರು!

ಇದರಲ್ಲಿ ಏನೇ ರಾಜಕೀಯ ಉದ್ದೇಶ ಇರಲಿ. ರಾಜ್ಯ ಬಿಜೆಪಿ ಸರ್ಕಾರದಲ್ಲಿ ಇದೊಂದು ಸ್ವಾಗತಾರ್ಹ ಯೋಜನೆ. ಆದರೆ ಜಾರಿ ಸಮರ್ಪಕವಾಗಿ ಆಗಬೇಕು ಅಷ್ಟೆ. ಬಡವರ ಮನೆಯಲ್ಲಿ ಹೆಣ್ಣು ಮಗು ಹುಟ್ಟಿದರೆ ಆ ಮಗುವು ವಯಸ್ಕಳಾದಾಗ ಸಿಗುವಂತೆ ಒಂದು ಲಕ್ಷ ರೂಪಾಯಿಗಳ ನಿಗದಿತ ಮೊತ್ತದ ಬಾಂಡ್ ನೀಡುವುದೇ ಆ ಯೋಜನೆ. ಬಡವರಾದವರು ತಾವು ಬಡವರಾಗಿರುವ ಬಗ್ಗೆ ಪ್ರಮಾಣ ಪತ್ರ ನೀಡಿ ತಮ್ಮ ಹೆಣ್ಣು ಮಗುವಿನ ಹೆಸರನ್ನು ನೋಂದಾಯಿಸಲು ಸಾಧ್ಯವೆಂಬ ನಿಯಮ ಮೊನ್ನೆಯವರೆಗೆ ಇತ್ತು. ಈ ಪ್ರಕಾರ ಕಳೆದ ಎರಡು ವರ್ಷಗಳಿಂದ ಸುಮಾರು 4 ಲಕ್ಷ ಹೆಸರುಗಳ ನೋಂದಾವಣೆ ಆಗಿದೆಯಂತೆ. ಈಗ ಸರ್ಕಾರ ನಿಯಮ ಬದಲಾಗಿದೆ ಎಂಬ ಹೊಸ ರಾಗ ಹೊರಡಿಸುತ್ತಿದೆ. ಬಾಂಡ್ ಕೈಗೆ ದಕ್ಕ ಬೇಕಾದರೆ ನಿಮ್ಮ ಬಳಿ ಇರುವ ಬಿಪಿಎಲ್ ಕಾರ್ಡು ತೋರಿಸಿ ಎನ್ನುತ್ತಿದೆ ಸರ್ಕಾರಿ ಆದೇಶ. 4 ಲಕ್ಷದಲ್ಲಿ ಸರಿ ಸುಮಾರು 2 ಲಕ್ಷ ಜನರ ಬಳಿ ಬಿಪಿಎಲ್ ಕಾರ್ಡು ಇಲ್ಲ. ಇಲ್ಲ ಎಂದರೆ ಈ ಬಹಳಷ್ಟು ಪ್ರಕರಣಗಳಲ್ಲಿ 'ಸರ್ಕಾರ ಬಿಪಿಎಲ್ ಕಾರ್ಡು ಕೊಟ್ಟಿಲ್ಲ' ಎಂದು ಅರ್ಥವೇ ಹೊರತು ಅವರು ಬಡವರಲ್ಲ ಎಂದು ಅರ್ಥವಲ್ಲ.

ಬಡವರು ತಾವು ಕೂಲಿ ನಾಲಿ ಮಾಡುವುದು ಬಿಟ್ಟು, ಪ್ರಮಾಣ ಪತ್ರ ಮಾಡಿಸಲು ತಿರುಗಿ, ದುಡ್ಡು ಕೊಟ್ಟು ಹೆಣಗಿ ಈಗಾಗಲೇ ಸುಸ್ತಾಗಿದ್ದಾರೆ. ಈಗ ಬಿಪಿಎಲ್ ಕಾರ್ಡು ಇಲ್ಲ ಅಂತಲೂ ಕಂಗಾಲಾಗಬೇಕಾದ ಸ್ಥಿತಿ ಬಂದಿದೆ.


ಇಲ್ಲಿ ಇನ್ನೊಂದು ಅಂಶವನ್ನು ಗಮನಿಸಬೇಕಿದೆ. ಭಾಗ್ಯಲಕ್ಷ್ಮಿ ಯೋಜನೆಯ ವಿಮರ್ಶೆ ಬೇಡ ಬಿಡಿ, ನಮ್ಮಲ್ಲಿ ಬಿಪಿಎಲ್ ಕಾರ್ಡುಗಳು ಯಾರಿಗೆ ಸಿಗುತ್ತಿವೆ, ಎಷ್ಟು ಜನ ಬಡವರಿಗೆ ಸಿಗುತ್ತಿವೆ ಎಂಬುದಕ್ಕೂ ಇದು ಒಂದು ಬಗೆಯ ಮಾನದಂಡವಾಗಿದೆ.

ಬಿಪಿಎಲ್ ಕಾರ್ಡು ಸಿಗದವರು ಸರ್ಕಾರದ ಲೆಕ್ಕದಲ್ಲಿ ಬಡವರಲ್ಲ.... ಹಾಗೆ ಯಾವುದೇ ತರಹದ ರೇಷನ್ ಕಾರ್ಡು ಕೂಡ ಸಿಗದ ಜನರು ನಮ್ಮಲ್ಲಿ ಧಾರಾಳವಾಗಿ ಇದ್ದಾರೆ. ಸರ್ಕಾರದ ಲೆಕ್ಕದಲ್ಲಿ ಒಂದೋ ಅವರು ಮನುಷ್ಯರೇ ಅಲ್ಲ ಅಥವಾ ಅವರು ಬದುಕಿಯೇ ಇಲ್ಲ ಅಂತ ಇರಬಹುದಲ್ಲವೇ ? ಹೇಗಿದೆ ಬಿಜೆಪಿ ದರ್ಬಾರ್‌ನಲ್ಲಿ ಬಡವರ ಉದ್ಧಾರ ಕಾರ್ಯ.

ಗೋದಾಮುಗಳಲ್ಲಿ ಧಾನ್ಯ ತುಂಬಿರುವಾಗ ಜನ ಹಸಿವಿನಿಂದ ಸಾಯಬೇಕೇಕೆ?

ಇದು ಸುಪ್ರಿಂ ಕೋರ್ಟ್ ಆತಂಕ

ಹೌದು, ಇದೀಗ ಎಡಪಕ್ಷಗಳ ನಾಯಕರು ಕೇಳಿದ ಪ್ರಶ್ನೆ ಅಲ್ಲ. ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು 'ಸುದಕ್ಷ' ಗೊಳಿಸುವ ಸರಕಾರದ ವಿಚಾರದ ಬಗ್ಗೆ ಅಹವಾಲಿನ ವಿಚಾರಣೆ ನಡೆಸುತ್ತಿರುವ ಸುಪ್ರಿಂ ಕೋರ್ಟ್ ಈ ಆತಂಕವನ್ನು ವ್ಯಕ್ತಪಡಿಸಿದೆ. 'ನೋಡಿ ನಮ್ಮ ಇಡೀ ನಿಲುವಿನಲ್ಲಿನ ಕಟು ವೈರುಧ್ಯವನ್ನು. ನಾವೊಂದು ಬಲಿಷ್ಟ ಆರ್ಥಿಕ ಎನ್ನುತ್ತೀರಿ. ಈ ವರ್ಷ ಬಂಪರ್ ಬೆಳೆಯಾಗಿದೆ, ನಮ್ಮ ಗೋದಾಮುಗಳು ತುಂಬಿವೆ ಎನ್ನುತ್ತೀರಿ. ಇದೊಂದು ಸಂತಸದ ಸನ್ನಿವೇಶ ಎಂಬುದರಲ್ಲಿ ಸಂದೇಹವಿಲ್ಲ. ನಿಮ್ಮ ಗೋದಾಮುಗಳು ತುಂಬಿದ್ದು ಜನರು 'ಹಸಿವಿನಿಂದ' ಬಳಲುತ್ತಿದ್ದರೆ ಏನು ಉಪಯೋಗ? ಎರಡು ಭಾರತಗಳಿರಲು ಸಾಧ್ಯವಿಲ್ಲ? ಎಂದು ನ್ಯಾಯಾಧೀಶರು ಭಾರತ ಸರಕಾರದ ಅಡಿಶನಲ್ ಸಾಲಿಸಿಟರ್ ಜನರಲ್‌ರವರಿಗೆ ಹೇಳಿದ್ದಾರೆ.



ಕೃಪೆ : ದಿ ಹಿಂದೂ

ಸರಕಾರ ಅಪೌಷ್ಟಿಕತೆಯನ್ನು ತಡೆಯಲು ಕ್ರಮಗಳನ್ನು ಕೈಗೊಳ್ಳುತ್ತಿದೆ, ಅಪೌಷ್ಟಿಕತೆಯ ಪ್ರಮಾಣ ಇಳಿಯುತ್ತಿದೆ ಎಂದು ಸರಕಾರದ ವಕೀಲರು ಹೇಳಿದಾಗ 'ಇಳಿಯುತ್ತಿದೆ ಎಂಬುದು ಉತ್ತರವಲ್ಲ. ಸಾಧ್ಯವಾದಷ್ಟು ಬೇಗನೇ ಅದನ್ನು ನಿರ್ಮೂಲಗೊಳಿಸಬೇಕು' ಎಂದಿತು ನ್ಯಾಯಪೀಠ.

ಬಡತನದ ಪ್ರಮಾಣದ ಬಗ್ಗೆಯೂ ದೇಶದ ಸರ್ವೋಚ್ಚ ನ್ಯಾಯಾಲಯದ ಈ ಪೀಠ ದೇಶದ ಯೋಜನಾ ಆಯೋಗವನ್ನು ಪ್ರಶ್ನಿಸಿತು. ಬಡತನದ ರೇಖೆಯ ಕೆಳಗಿರುವ(ಬಿಪಿಎಲ್) ಜನತೆಯ ಪ್ರಮಾಣ 36 ಶೇ. ಎಂದು ಹೇಗೆ ಹೇಳುತ್ತೀರಿ, ಕಾಂಗ್ರೆಸ್ ಆಳ್ವಿಕೆಯ ರಾಜ್ಯ ಸರಕಾರಗಳೂ ಸೇರಿದಂತೆ ಬಹಳಷ್ಟು ರಾಜ್ಯ ಸರಕಾರಗಳು ಈ ಪ್ರಮಾಣ, ಯೋಜನಾ ಆಯೋಗ ವಿಧಿಸಿದ ಲೆಕ್ಕಾಚಾರದ ಪ್ರಕಾರವೂ ಬಹಳ ಹೆಚ್ಚಿದೆ ಎನುತ್ತಿವೆಯಲ್ಲಾ? ಬಡತನದ ಮಟ್ಟವನ್ನು ನಿರ್ಧರಿಸಲ್ಲು ತಲಾ ಆದಾಯ ನಗರ ಪ್ರದೇಶಗಳಲ್ಲಿ ದಿನಕ್ಕೆ ರೂ.20 ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ರೂ.11 ಎಂದು ಯೋಜನಾ ಆಯೋಗ ನಿಗದಿ ಮಾಡಿದ್ದು ಹೇಗೆ? ಇಂತಹ ಅಲ್ಪ ಮೊತ್ತವನ್ನು ಹೇಗೆ ಸಮರ್ಥಿಸಿಕೊಳ್ಳುತ್ತೀರಿ? ಈ ಬಗ್ಗೆ ಯೋಜನಾ ಆಯೋಗದ ಉಪಾಧ್ಯಕ್ಷರು ಒಂದು ವಾರದೊಳಗೆ ಸಮಗ್ರ ಅಫಿಡವಿಟ್ ಸಲ್ಲಿಸಲಿ ಎಂದು ಸುಪ್ರಿಂ ಕೋರ್ಟ್ ಹೇಳಿದೆ.

* * *

ಈಗಿರುವುದು ಕೊಳೆತ ವ್ಯವಸ್ಥೆ:

ರಾಹುಲ್ ಗಾಂಧಿ ತಪ್ಪೊಪ್ಪಿಗೆ?

ಅಣ್ಣಾ ಹಜಾರೆಯವರು ಭ್ರಷ್ಟಾಚಾರದ ವಿಷಯದ ಮೇಲೆ ಆರಂಭಿಸಿದ ಉಪವಾಸ ಸತ್ಯಾಗ್ರಹವನ್ನು ಕೊನೆಗೊಳಿಸಿದ ದಿನವೇ ರಾಹುಲ್ ಗಾಂಧಿಯವರು 'ಸರಿಯಾದ ದಿಕ್ಕಿನಲ್ಲಿ ಯೋಚಿಸುವ ಬಹುಮಂದಿ ಭಾರತೀಯರಂತೆ ನನಗೂ ಭ್ರಷ್ಟಾಚಾರದ ಬಗ್ಗೆ ಆತಂಕವಿದೆ. ಆದರೆ ನಾನು ಈ ಬಗ್ಗೆ ಬಾಯಿ ಮುಚ್ಚಿಕೊಂಡು ಕೆಲಸ ಮಾಡುತ್ತಿದ್ದೇನೆ. ಏಕೆಂದರೆ ಹೀರೋ ಆಗುವ ಆಸಕ್ತಿ ನನಗೆ ಏನೇನೂ ಇಲ್ಲ? ಎಂದು ಮಾಜಿ ಸುಪ್ರಿಂಕೋರ್ಟ್ ನ್ಯಾಯಾಧೀಶರು ಬರೆದ ಪತ್ರಕ್ಕೆ ಉತ್ತರಿಸುತ್ತ ಹೇಳಿದರಂತೆ. ಇದನ್ನು ಓದಿದಾಗ ಕರ್ನಾಟಕದ ಮುಖ್ಯಮಂತ್ರಿಗಳು ಅಣ್ಣಾ ಹಜಾರೆಯವರ ಉಪವಾಸಕ್ಕೆ ಬೆಂಬಲ ನೀಡಿದ್ದು ನೆನಪಾಗುತ್ತದಲ್ಲವೇ?

'ನಾನು ಎಚ್ಚರದಿಂದಿರುವ ಕಾಲದಲ್ಲಿ ಒಂದು ಕೊಳೆತ ವ್ಯವಸ್ಥೆ ಎಂದು ನನಗನಿಸುವಂತದ್ದನ್ನು ಉತ್ತಮಪಡಿಸುವುದು ಹೇಗೆ ಎಂಬ ಬಗ್ಗೆ ಯೋಚಿಸುತ್ತಿರುತ್ತೇನೆ, ಕೆಲಸ ಮಾಡುತ್ತಿರುತ್ತೇನೆ. ಆದರೆ ನಾನು ನಿಮ್ಮಂತೆ ಪತ್ರ ಬರೆಯುತ್ತ, ದೂರು ಹೇಳುತ್ತ ತಿರುಗಲು ಸಾಧ್ಯವಿಲ್ಲ. ನಾನು ಪರಿಸ್ಥಿತಿಯನ್ನು ಬದಲಿಸುವ ವಾಸ್ತವತೆ ಎದುರಿಸುತ್ತಿದ್ದೇನೆ.? ಎಂದು ಅವರು ನ್ಯಾಯಮೂರ್ತಿ ವಿ.ಆರ್.ಕೃಷ್ಣ ಅಯ್ಯರ್‌ರವರಿಗೆ ಬರೆದ ಪ್ರತ್ಯುತ್ತರದಲ್ಲಿ ಹೇಳಿದ್ದಾರಂತೆ.

'ಅಣ್ಣಾ ಹಜಾರೆ ವಿದ್ಯಮಾನ ನಡೆದಿರುವುದಾದರೂ ಏಕೆ? ಏಕೆಂದರೆ ಅಷ್ಟೊಂದು ದುಷ್ಟತನಗಳು ನಡೆದರೂ ದಿಲ್ಲಿಯಿಂದ ಯಾವುದೇ ಕ್ರಿಯೆಯಿಲ್ಲ? ಎಂದು ಅವರಿಗೆ ಅವರು ನೆನಪಿಸಿದ್ದರು.

ಈ ವ್ಯವಸ್ಥೆ ಇಷ್ಟೊಂದು ಕೊಳೆತು ಹೋಯಿತೇಕೆ, ಯಾರಿಂದ ಹೀಗಾಯಿತು ಎಂದು ತಿಳಿಯುವ ಕಾಳಜಿ ಅವರಿಗಿದೆಯೋ ಗೊತ್ತಾಗಲಿಲ್ಲ. ಇತ್ತೀಚೆಗೆ 1.76ಲಕ್ಷ ಕೋಟಿ ರೂ. ಹಗರಣ ನಡೆಸಿ ಜೈಲಿನಲ್ಲಿರುವ ಮಂತ್ರಿಯ ತವರು ರಾಜ್ಯದಲ್ಲಿ ಆತನ ಪಕ್ಷದ ಪರವಾಗಿ, ನಂತರ ಕೇರಳ ಮತ್ತು ಪಶ್ಚಿಮ ಬಂಗಾಲದಲ್ಲಿ ಚುನಾವಣಾ ಪ್ರಚಾರದಲ್ಲಿ ಅವರ ಮಾತುಗಳಿಂದಂತೂ ಇಂತಹ ಕಾಳಜಿಯ ಸೂಚನೆಯಾಗಲೀ, ಒಂದು ಕೊಳಕು ವ್ಯವಸ್ಥೆಯನ್ನು ಸರಿಪಡಿಸುವ ಆತಂಕದ ಸೂಚನೆಯಾಗಲೀ ಸಿಕ್ಕಿಲ್ಲ.

ಪಶ್ಚಿಮ ಬಂಗಾಲದಲ್ಲಿ ಆತ ಮತ್ತು ಆತನ ತಾಯಿ ತೃಣಮೂಲ ಕಾಂಗ್ರೆಸನ್ನು ಹೊಗಳುತ್ತ ಅದು 'ಪರಿವರ್ತನೆ' ತರಲಿದೆ ಎನ್ನುತ್ತಿರುವಾಗಲೇ ಈ 'ಪರಿವರ್ತನೆ' 33.9ಕೋಟಿರೂ. ಕಪ್ಪು ಹಣದಿಂದ ಬರುತ್ತಿದೆ ಎಂಬ ದೂರನ್ನು ಚುನಾವಣಾ ಆಯೋಗ ಪರಿಶೀಲಿಸುತ್ತಿದೆ. ಆ ಪಕ್ಷದ ಎಲ್ಲ 226 ಅಭ್ಯರ್ಥಿಗಳಿಗೆ ತಲಾ 15 ಲಕ್ಷ ರೂ. ಹಂಚಲಾಗಿದೆ ಎಂದು ವರದಿಯಾಗಿದೆ. ಇದನ್ನು ಸಾರ್ವಜನಿಕರಿಂದ ಸಂಗ್ರಹಿಸಿದ್ದು ಎಂದು ತೋರಿಸಲು 100, 200, 500 ರೂ.ಗಳ ಕೂಪನ್‌ಗಳನ್ನು ಮುದ್ರಿಸಲಾಗಿದ್ದು ತೃಣಮೂಲ ಕಾಂಗ್ರೆಸಿನ ಕಚೇರಿಯಲ್ಲಿ ಇಂತಹ ಕೂಪನ್‌ಗಳಿಂದ ತುಂಬಿದ ಮೂಟೆಗಳಿವೆ ಎಂದು ಸಿಪಿಐ(ಎಂ) ಅಭ್ಯರ್ಥಿ ದೂರಿದ್ದಾರೆ.

* * *

ಯುಪಿಎ-2 ಮಂತ್ರಿಪುತ್ರನಿಂದ ಚುನಾವಣಾ ಅಧಿಕಾರಿಗಳ ಮೇಲೆ ಹಲ್ಲೆ


ಯುಪಿಎ-2 ಹಡಗುಸಾಗಾಣಿಕೆ ರಾಜ್ಯಮಂತ್ರಿಗಳ ವಂಗ ಹಾಗೂ ತೃಣಮೂಲ ಕಾಂಗ್ರೆಸಿನ

ಪುಟ 15ಕ್ಕೆ

'ಕಪ್ಪು ಹಣದ ಕರಾಳ ಮಗ್ಗಲು' ಚಮಚಾ ಎಂ.ಪಿ,ಗಳು?

ಇದು ನಿವೃತ್ತ ಗುಪ್ತಚರ ಬ್ಯೂರೋ ಮಹಾನಿರ್ದೇಶಕ ಬಿ.ವಿ.ಕುಮಾರ್ ಬರೆದಿರುವ ಪುಸ್ತಕದ ಹೆಸರು. ದೊಡ್ಡ ಉದ್ದಿಮೆ ಗುಂಪುಗಳಲ್ಲಿ ಹೆಚ್ಚಿನವು ಸರಕಾರದ ಧೋರಣೆಗಳ ಮೇಲೆ ಪ್ರಭಾವ ಬೀರಲು, ಅಥವ ತಮ್ಮ ಪರವಾದ ನಿರ್ಣಯಗಳನ್ನು ಕೈಗೊಳ್ಳಲು ಸಂಸತ್ ಸದಸ್ಯರನ್ನು 'ಇಟ್ಟುಕೊಂಡಿವೆ' ಎಂದು ಅದರಲ್ಲಿ ಹೇಳಿರುವುದಾಗಿ ವರದಿಯಾಗಿದೆ. 'ಕೆಲವು ದೊಡ್ಡ ಉದ್ದಿಮೆ ಗುಂಪುಗಳು ಪ್ರತಿಪಕ್ಷಗಳಲ್ಲಿರುವ ರಾಜಕಾರಣಿಗಳಿಗೂ ತಮ್ಮ ಪರವಾಗಿ ಸರಕಾರ ಮಾಡುವ ನಿರ್ಣಯಗಳನ್ನು ವಿರೋಧಿಸದಿರಲೆಂದು ಹಣ ಕೊಡುತ್ತಿರುತ್ತಾರೆ. ಅವರು ಇದನ್ನು ಒಂದು ದೀರ್ಘಾವಧಿ ಹೂಡಿಕೆ ಎಂದು ಪರಿಗಣಿಸುತ್ತಾರೆ' ಎಂದು ಅವರು ಈ ಪುಸ್ತಕದಲ್ಲಿ ಹೇಳಿದ್ದಾರಂತೆ.

ಭ್ರಷ್ಟಾಚಾರ ಎಂದರೆ ರಾಜಕಾರಣಿಗಳು ಮಾತ್ರ ಎದುರು ನಿಲ್ಲುವ, ಇತ್ತೀಚೆಗೆ ಅಣ್ಣಾ ಹಜಾರೆಯವರ ಆಂದೋಲನದಿಂದ ಹುರುಪು ತುಂಬಿಕೊಂಡ ಮಧ್ಯಮ ವರ್ಗದ ಜನ ಇದನ್ನು ಕೇಳಿ ತಬ್ಬಿಬ್ಬಾಗ ಬಹುದು. ಆದರೆ ಎಡಪಂಥೀಯರ ನಿಲುವಿನವರಿಗೆ ಇದರಲ್ಲಿ ಆಶ್ಚರ್ಯವೇನೂ ಆಗಿರುವುದಿಲ್ಲ. ಏಕೆಂದರೆ ಲಾಭವೇ ಏಕೈಕ ಗುರಿಯಾಗಿರುವ ಬಂಡವಾಳಶಾಹಿ ವ್ಯವಸ್ಥೆಯಲ್ಲಿಯೇ ಭ್ರಷ್ಟಾಚಾರ ಎಂಬುದು ಅಂತರ್ಗತವಾಗಿದೆ ಎಂದು ಎಡಪಕ್ಷಗಳು ಹೇಳುತ್ತಲೇ ಬಂದಿವೆ. ಈ ಹಿಂದೆ 'ಪ್ರಶ್ನೆಗಾಗಿ ನೋಟು' ಪ್ರಕರಣದಲ್ಲಿ ಇದು ಬಯಲಾಗಿತ್ತು.



ಯುಪಿಎ ದರ್ಬಾರ್


■ ವೇದರಾಜ ಎನ್.ಕೆ.

ರೇಗಾ ಕಾಮಗಾರಿಗಳಲ್ಲಿ ಶೇ.13 ಇಳಿಕೆ

ಮಹಾತ್ಮಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಶಾಸನದ ಅಡಿಯಲ್ಲಿ 2010-11ರಲ್ಲಿ ಪೂರ್ಣಗೊಂಡ ಕಾಮಗಾರಿಗಳಲ್ಲಿ 2009-10ಕ್ಕೆ ಹೋಲಿಸಿದಾಗ ಶೇ.13 ಇಳಿಕೆಯಾಗಿದೆ ಎಂದು ವರದಿಯಾಗಿದೆ. 2009-10ರಲ್ಲಿ 22.6 ಲಕ್ಷ ಕಾಮಗಾರಿಗಳು ನಡೆದಿದ್ದವು. 2010-11ರಲ್ಲಿ ಇದು 19.7ಲಕ್ಷಕ್ಕಿಳಿದಿದೆ. ಇದಕ್ಕೆ ರಾಜ್ಯ ಸರಕಾರಗಳು ಕಾರಣ ಎಂದು ಕೇಂದ್ರದಲ್ಲಿರುವ ಯುಪಿಎ-2 ಸರಕಾರ ಹೇಳಿದರೆ ಇದಕ್ಕೆ ಕೇಂದ್ರದ ತಪ್ಪು ನಿಧಿ ಬಿಡುಗಡೆ ಸೂತ್ರ ಕಾರಣ ಎಂದು ರಾಜ್ಯ ಸರಕಾರಗಳು ದೂರಿತ್ತಿವೆ. ಯೋಜನಾ ಆಯೋಗದ ಒಬ್ಬ ಅಧಿಕಾರಿ ಕೂಡ 'ಸದ್ಯದ ವ್ಯವಸ್ಥೆ ಸರಿಯಾಗಿಲ್ಲ, ಅದರ ಪುನರಾವಲೋಕನ ಅಗತ್ಯ, ಇಲ್ಲವಾದರೆ ಇದು ಬುಡಮಟ್ಟದಲ್ಲಿ ಸಮಸ್ಯೆ ಉಂಟುಮಾಡುತ್ತದೆ, ಅದು ಮುಂದೆ ರಾಷ್ಟ್ರೀಯ ಸಮಸ್ಯೆಯಾಗುತ್ತದೆ' ಎಂದಿದ್ದಾರೆ.

ಜಗದಗಲ

ಶರತ್‌ಚಂದ್ರ

ಅರಬ್ ಪ್ರತಿಭಟನೆಯ ಎರಡನೇ ಅಲೆ

ಅರಬ್ ದೇಶಗಳಲ್ಲಿ ಒಂದೆರಡು ತಿಂಗಳ ಹಿಂದೆ ಸಾಮ್ರಾಜ್ಯಶಾಹಿ ಬೆಂಬಲಿತ ಸರ್ವಾಧಿಕಾರಿಗಳ ವಿರುದ್ಧ ದಂಗೆ ಮತ್ತು ಪ್ರಜಾಪ್ರಭುತ್ವ ಸ್ಥಾಪನೆಗೆ ಚಳುವಳಿಯ ಮೊದಲ ಅಲೆ ಬಂದಿತ್ತು. ಈಗ ಎರಡನೇ ಅಲೆ ಏಳುತ್ತಿರುವಂತೆ ಕಾಣುತ್ತಿದೆ. ಮೊದಲ ಬಾರಿಯಂತೆ ಈ ಬಾರಿ ಸಹ ಈಜಿಪ್ಟಿನ ಜನತೆ ಮುಂದಾಳ್ತನ ವಹಿಸಿದ್ದಾರೆ. ಸಿರಿಯಾ, ಯೆಮೆನುಗಳಲ್ಲಿ ಚಳುವಳಿ ತೀವ್ರವಾಗುತ್ತಿದೆ. ಬಹರೈನ್ ಮಾತ್ರ ಭಾರೀ ದಮನಚಕ್ರದಿಂದ ತಣ್ಣಗಾಗಿದೆ. ಬಹರೈನಿನಲ್ಲಿ ಸೌದಿ ಪಡೆಗಳನ್ನು ಬಳಸಿದ ಬಗ್ಗೆ ಇರಾನ್ ಮತ್ತು ಸೌದಿ ಸರ್ಕಾರಗಳ ನಡುವೆ ವಿರಸ ತೀವ್ರವಾಗಿದೆ.

ಮುಬಾರಕ್ ದುಷ್ಟಕೂಟ ಜೈಲಿನಲ್ಲಿ

ಈಜಿಪ್ಟಿನಲ್ಲಿ ಈಗಾಗಲೇ ಹಿಂದಿನ ಸರ್ವಾಧಿಕಾರಿ ಆಡಳಿತದ ಮುಖ್ಯಸ್ಥರು ಎರಡನೇ ಅಲೆಯ ಪ್ರತಿಭಟನೆಯ ಫಲವಾಗಿ ಬಂಧಿಸಲ್ಪಟ್ಟು ಜೈಲಿನಲ್ಲಿದ್ದಾರೆ. ಮುಬಾರಕ್ ಮಕ್ಕಳು (ರಾಜಕುಮಾರನಂತೆ ಆಳುತ್ತಿದ್ದ) ಗೆಮಾಲ್ ಮತ್ತು (ಉದ್ಯಮಿ) ಅಲಾ, ಪ್ರಧಾನಿ ಅಹ್ಮದ್ ನಜೀಫ್, ಮುಬಾರಕ್ ನಿಕಟವರ್ತಿ ಜಾಕಾರಿಯ ಅಜ್ಮಿ, ಪಾರ್ಲಿಮೆಂಟ್ ಸ್ಪೀಕರ್ ಫತಿ ಸೊರೊರ್ - ಮುಂತಾದವರು ಜೈಲಿನಲ್ಲಿದ್ದಾರೆ. ಮಾಜಿ ಅಧ್ಯಕ್ಷ ಮುಬಾರಕ್ ಅಸ್ವಸ್ಥರಾಗಿರುವುದರಿಂದ ಆಸ್ಪತ್ರೆಯಲ್ಲಿದ್ದಾರೆ. ಸ್ವಸ್ಥರಾದ ಕೂಡಲೇ ಅವರಿಗೂ ಜೈಲುವಾಸ ಕಾದಿದೆ.

ಮೊದಲ ಅಲೆಯ ಚಳುವಳಿಯಲ್ಲಿ ಈಜಿಪ್ಟಿನ ಸೈನ್ಯ ಜನತೆಯ ಮಿತ್ರ ಎಂಬ ಭಾವನೆ ಇತ್ತು. ಆದರೆ ಕ್ರಮೇಣ ಅಧ್ಯಕ್ಷ ಮುಬಾರಕರನ್ನು ಮಾತ್ರ ಅಧಿಕಾರದಿಂದ ಇಳಿಸಿದ್ದು. ಅವರು ಕಟ್ಟಿದ ಸರ್ವಾಧಿಕಾರಿ ಯಂತ್ರ ಹಾಗೆ ಇದೆ. ಮಿಲಿಟರಿ ಈ ಯಂತ್ರದ ಮುಖ್ಯ ಭಾಗ ಎಂದು ಜನರ ಅರಿವಿಗೆ ಬಂದಿದೆ. ಮುಬಾರಕ್ ಆಡಳಿತ ಯಂತ್ರದ ವ್ಯಕ್ತಿಗಳ ಕುಕೃತ್ಯಗಳ ಬಗ್ಗೆ ವಿಚಾರಣೆ, ಶಿಕ್ಷೆಗಳ ಯಾವುದೇ ಕಾರ್ಯಾಚರಣೆ ಆರಂಭ ಸಹ ಆಗದ್ದು, ಕೆಲವು ಚಳುವಳಿಗಾರರ ವಿರುದ್ಧ ಕಠಿಣ ಕ್ರಮಗಳು, ಮಿಲಿಟರಿ ಕೋರ್ಟುಗಳ ರೀತಿಯ ಶಿಕ್ಷೆಗಳು, ಮಾನವ ಹಕ್ಕುಗಳ ಮೇಲೆ ದಮನ, ಮುಷ್ಕರಗಳು ಮತ್ತು ಪ್ರದರ್ಶನಗಳ ಮೇಲೆ ನಿಷೇಧ, ಚಳುವಳಿಗೆ ಬೆಂಬಲ ತೋರಿದ ಸೈನಿಕ-ಅಧಿಕಾರಿಗಳ ಮೇಲೆ ಕ್ರಮ - ಇವೆಲ್ಲಾ ಜನರನ್ನು ಕುಪಿತಗೊಳಿಸಿದ್ದವು. ಎಪ್ರಿಲ್ 8 ರಿಂದ ಎರಡನೇ ಅಲೆ ಜೋರಾಗಿ ಆರಂಭವಾಯಿತು. ರಾತ್ರಿ ಚಳುವಳಿಕಾರರ ಮೇಲೆ ಮಿಲಿಟರಿ ದಾಳಿ ಅವರ ಪ್ರತಿಭಟನೆಗೆ ಕಾವು ಕೊಟ್ಟಿತು.

ಈಜಿಪ್ಟಿನ ಚಳುವಳಿ - ಮುಂದೇನು ?

ಹುಸ್ನಿ ಮುಬಾರಕ್, ಆತನ ಕುಟುಂಬ ಮತ್ತು ನಿಕಟವರ್ತಿಗಳ ಭ್ರಷ್ಟಾಚಾರ ಮತ್ತು ಮಾನವ ಹಕ್ಕುಗಳ ದಮನ ಮುಂತಾದ ಕುಕೃತ್ಯಗಳ ತನಿಖೆ ಆಗಿ ಅವರಿಗೆ



ಶಿಕ್ಷೆ ಆಗಬೇಕು ಎಂಬುದು ಮುಖ್ಯ ಒತ್ತಾಯ ಆಯಿತು. ಮಿಲಿಟರಿ ಮುಖ್ಯಸ್ಥ ಫೀಲ್ಡ್ ಮಾರ್ಶಲ್ ಮೇಲೆ ದಾಳಿ ಮಾಡಲಾಯಿತು. ಅದನ್ನು ಪಡೆದೇ ತೀರಿದರು. ಚಳುವಳಿಯಲ್ಲಿ ಭಾಗವಹಿಸಲು ನಿಷೇಧ ಇದ್ದರೂ, ಹಲವು ಸೈನಿಕ-ಅಧಿಕಾರಿಗಳ ಭಾಗವಹಿಸಿದರು. ಎರಡನೇ ಅಲೆಯ ಚಳುವಳಿಯಲ್ಲೂ ಕಾರ್ಮಿಕರ ಯೂನಿಯನುಗಳು, ಯುವ ಚಳುವಳಿ, ಮಾನವ ಹಕ್ಕು ಚಳುವಳಿ, ಮುಸ್ಲಿಂ ಬ್ರದರ್ ಹುಡ್ - ಈ ಎಲ್ಲಾ ಸಾಮಾಜಿಕ ಶಕ್ತಿಗಳು ಮೊದಲ ಅಲೆಯಂತೆ ಹುರುಪಿನಿಂದ ಭಾಗ ವಹಿಸಿದವು.

ಮಿಲಿಟರಿ ಮತ್ತು ಚಳುವಳಿಕಾರರು ಮೊದಲ ಅಲೆಯ ಚಳುವಳಿಯಲ್ಲಿ ಇನ್ನೊಂದು ಪಕ್ಷದ ಸ್ವರೂಪ, ಬಲ ಪೂರ್ತಿ ಅರ್ಥ ಮಾಡಿಕೊಂಡಿರಲಿಲ್ಲ. ಎರಡನೇ ಅಲೆಯಲ್ಲಿ ಈಗ ಪೂರ್ಣ ಅರ್ಥ ಮಾಡಿಕೊಂಡಿವೆ. ಮಿಲಿಟರಿ ಚಳುವಳಿಕಾರರ ಐಕ್ಯತೆ ಮುರಿಯಲು ಪ್ರಯತ್ನ ಮಾಡಲಿದೆ. ಮುಸ್ಲಿಂ ಬ್ರದರ್ ಹುಡನ್ನು ಇತರರಿಂದ ಪ್ರತ್ಯೇಕಿಸಿ ಗೆದ್ದುಕೊಳ್ಳುವ ಪ್ರಯತ್ನ ಆಗಲೇ ಆರಂಭವಾಗಿದೆಯಂತೆ. ಮಿಲಿಟರಿಯ ಜೂನಿಯರ್ ಅಧಿಕಾರಿ ಮತ್ತು ಸೈನಿಕರ ವಿಭಾಗಗಳನ್ನು ಗೆದ್ದುಕೊಳ್ಳಲು ಚಳುವಳಿಕಾರರು ಪ್ರಯತ್ನ ಮಾಡುತ್ತಿದ್ದಾರೆ. ಇದು ಈಜಿಪ್ಟಿನ ರಾಜಕೀಯ ಭವಿಷ್ಯ ರೂಪಿಸುವಿಕೆಯಲ್ಲಿ ಮುಖ್ಯ ಪಾತ್ರ ವಹಿಸಲಿದೆ.

ಯೆಮೆನಿನಲ್ಲಿ ಅಧ್ಯಕ್ಷರ ರಾಜೀನಾಮೆಗೆ ಸತತ ಒತ್ತಡ

ಯೆಮೆನಿನಲ್ಲಿ ಮೂರು ತಿಂಗಳ ಸತತ ಚಳುವಳಿ ಪ್ರದರ್ಶನಗಳ ಒತ್ತಡದ ನಂತರವೂ ಅಧ್ಯಕ್ಷ ಸಾಲೆ ರಾಜೀನಾಮೆ ಕೊಡದಿರುವುದರಿಂದ ಕುಪಿತರಾದ ಚಳುವಳಿಕಾರರು ಸೈನ್ಯದ ಜತೆ ಘರ್ಷಣೆಗೆ ಇಳಿದಿದ್ದಾರೆ. ಹಲವು ಕಡೆ ಪಡೆಗಳಿಗೆ ಸಕ್ರಿಯ ಪ್ರತಿರೋಧ ತೋರುತ್ತಿದ್ದಾರೆ. ಇದರಿಂದ ಮಿಲಿಟರಿ ಪಡೆಗಳಲ್ಲೂ ಬಿರುಕು ಕಂಡಿದೆ. ಹಲವು ಕಡೆ ಪೋಲೀಸರು ಮತ್ತು ಚಳುವಳಿಕಾರರ ಪರ ಮಿಲಿಟರಿ ಪಡೆಗಳ ನಡುವೆ ಸಹ ಘರ್ಷಣೆ ನಡೆದಿವೆ. ಸಾಲೆ ರಾಜಿನಾಮೆಗೆ ಪಾಶ್ಚಿಮಾತ್ಯ ರಾಜತಾಂತ್ರಿಕರು ಪ್ರಯತ್ನಿಸುತ್ತಿದ್ದಾರೆ. ಸಾಲೆ ಸರಿಯಾದ ಉತ್ತರಾಧಿಕಾರಿ ಇಲ್ಲದೆ ರಾಜಿನಾಮೆ ಕೊಡುವುದಿಲ್ಲ ಎಂದು ಪಟ್ಟು ಹಿಡಿದಿದ್ದಾರೆ. ಈಗ ಕೊಲ್ಲಿ ದೇಶಗಳ ನಾಯಕರು ಸಾಲೆಯ ಸರ್ಕಾರದ ಜತೆ ಮಾತುಕತೆ ನಡೆಸುತ್ತಿದ್ದಾರೆ. ಆದರೆ ಚಳುವಳಿಕಾರರ ತಾಳ್ಮೆಯ ಕಟ್ಟೆ ಈಗಾಗಲೇ ಒಡೆದಿದೆ. ಇನ್ನೂ ಹೆಚ್ಚು ಎಳೆದರೆ, ತಮ್ಮ ಹಿತಾಸಕ್ತಿಗಳಿಗೆ ಸಂಚಕಾರ ಎಂದು ಕೊಲ್ಲಿ ದೇಶಗಳ ಮತ್ತು ಪಾಶ್ಚಿಮಾತ್ಯರ ಅರಿವಿಗೆ ಬಂದಿದೆ. ಆದ್ದರಿಂದ ಶತಾಯ ಗತಾಯ ಪ್ರಯತ್ನ ಮುಂದುವರೆಸಿವೆ.

ಸಿರಿಯಾ ದ 48 ವರ್ಷಗಳ ತುರ್ತು ಪರಿಸ್ಥಿತಿ ರದ್ದು

ಸಿರಿಯಾದಲ್ಲೂ ಅಧ್ಯಕ್ಷ ಬಶಾರ್ ಅಲ್-ಅಸಾದ್ ವಿರುದ್ಧ ದಕ್ಷಿಣದ ದಾರಾ ನಗರದಲ್ಲಿ ಆರಂಭವಾದ ಚಳುವಳಿ ಮುಂದುವರೆದಿದ್ದು ಮೂರನೇ ಅತಿ ದೊಡ್ಡ ನಗರ ಹೊಮ್ಸ್ ಗೆ ಹಬ್ಬಿದೆ. ಅಲ್ಲಿ ಐದು ಸಾವಿರಕ್ಕೂ ಹೆಚ್ಚು ಪ್ರದರ್ಶನಕಾರರ ಮೇಲೆ ಭದ್ರತಾ ಪಡೆಗಳು ದಮನ ಚಕ್ರ ಹರಿಯ ಬಿಟ್ಟರೂ ಅಲ್ಲಿನ ಪ್ರಮುಖ ಚೌಕ ಆಕ್ರಮಿಸಿಕೊಂಡಿರುವ ಅವರು ಚದುರುತ್ತಿಲ್ಲ. ಸರ್ಕಾರ ಒಂದು ಕಡೆ ಪ್ರಜಾಪ್ರಭುತ್ವ ಸ್ಥಾಪಿಸುವ ಕೆಲವು ಕ್ರಮಗಳನ್ನು ಘೋಷಿಸುತ್ತಾ ಜನರ ಮನ ಓಲಿಸಲು ಪ್ರಯತ್ನಿಸುತ್ತಾ, ಇನ್ನೊಂದು ಕಡೆ ದಮನವನ್ನೂ ಹರಿಯ ಬಿಟ್ಟಿದೆ. ಕಳೆದ ಮೂರು ತಿಂಗಳ ಪ್ರತಿಭಟನೆಗಳ ಮೇಲೆ ಪೋಲಿಸ್ ಕಾರ್ಯಾಚರಣೆಗಳಲ್ಲಿ 200 ಕ್ಕೂ ಹೆಚ್ಚು ಜನ ಸತ್ತಿದ್ದಾರೆ. 48 ವರ್ಷಗಳಿಂದ ಜಾರಿಯಲ್ಲಿದ್ದ ತುರ್ತು ಪರಿಸ್ಥಿತಿ ರದ್ದು ಮಾಡಿದೆ. ರಾಜಕೀಯ ವಿರೋಧಿಗಳನ್ನು ದಮನ ಮಾಡಲು ಬಳಸುತ್ತಿದ್ದ ಭದ್ರತಾ ಕೋರ್ಟುಗಳನ್ನು ರದ್ದು ಮಾಲಾಗಿದೆ. ಶಾಂತಿಯುತ ಪ್ರದರ್ಶನಗಳಿಗೆ ಅವಕಾಶ ಮಾಡಿಕೊಡುವ ಹೊಸ ಕಾನೂನು ಮಾಡಲಾಗಿದೆ. ಆದರೆ ಇಂತಹ ಪ್ರದರ್ಶನಗಳಿಗೆ ಆಂತರಿಕ ಭದ್ರತಾ ಇಲಾಖೆಯಿಂದ ಅನುಮತಿ ಪಡೆಯಬೇಕು ಎಂಬ ನಿಯಮ ಸಹ ಇದೆ. ಆದರೆ ಈ ಕ್ರಮಗಳಿಂದ ಚಳುವಳಿಕಾರರು ತೃಪ್ತರಾಗಿಲ್ಲ. ಆಮೂಲಾಗ್ರ ಪ್ರಜಾಪ್ರಭುತ್ವ ಬದಲಾವಣೆಗಳಿಗೆ ಒತ್ತಡ ಮುಂದುವರೆದಿದೆ.

ಸೌದಿ ಅರೇಬಿಯಾ ಬಹರೈನ್ ಗೆ ಸಾವಿರಕ್ಕೂ ಹೆಚ್ಚು ಮಿಲಿಟರಿ ಪಡೆ ಕಳಿಸಿ ಚಳುವಳಿಕಾರರನ್ನು ದಮನ ಮಾಡಿದ್ದನ್ನು ಇರಾನ್ 'ಅತಿಕ್ರಮಣ' ಎಂದು ಖಂಡಿಸಿದೆ. ಸೌದಿ ಅರೇಬಿಯಾ ಸಹ ಇಂತಹ 'ಅತಿಕ್ರಮಣ' ಎದುರಿಸಬಹುದು ಎಂದು ಎಚ್ಚರಿಸಿದೆ. ಟೆಹರಾನಿನಲ್ಲಿ ಸೌದಿ ಅರೇಬಿಯಾದ ರಾಯಭಾರ ಕಚೇರಿಯ ಮುಂದೆ ವಿದ್ಯಾರ್ಥಿಗಳ ಭಾರೀ ಪ್ರದರ್ಶನ ಸಹ ನಡೆದಿದೆ. ಈ ಪ್ರದರ್ಶನದ ಸಮಯದಲ್ಲಿ ರಾಯಭಾರ ಕಚೇರಿಯತ್ತ ಉರಿಯುವ ಪಂಜುಗಳನ್ನು ಎಸೆಯಲಾಯಿತು. ಇದಕ್ಕೆ ಪ್ರತಿಭಟನೆ ಸಲ್ಲಿಸಿದ ಸೌದಿ ಭದ್ರತೆ ಇಲ್ಲದಿದ್ದರೆ ತನ್ನ ರಾಯಭಾರಿ ಸಿಬ್ಬಂದಿಯನ್ನು ಹಿಂದೆ ಕರೆಸಿಕೊಳ್ಳುವುದಾಗಿ ಎಚ್ಚರಿಸಿದೆ.

ನೈಜೀರಿಯಾ ಚುನಾವಣೆ

ನೈಜೀರಿಯಾದಲ್ಲಿ ನಡೆದ ಅಧ್ಯಕ್ಷೀಯ ಚುನಾವಣೆಯಲ್ಲಿ ಹಾಲಿ ಅಧ್ಯಕ್ಷ ಜೋನೊಥಾನ್ ಶೆ. 57 ಮತ ಪಡೆದು ಗೆದ್ದಿದ್ದಾರೆ. ಆದರೆ ಎರಡನೇ ಸ್ಥಾನದಲ್ಲಿ ಮಾಜಿ ಮಿಲಿಟರಿ ಆಡಳಿತಗಾರ ಬುಹಾರಿ ಇದ್ದು, ಅವರು ಈ ಫಲಿತಾಂಶಗಳನ್ನು ಅಂಗೀಕರಿಸಿಲ್ಲ. ಚುನಾವಣೆಗಳಲ್ಲಿ ಭಾರೀ ಗೊಲ್ ಮಾಲ್ ನಡೆದಿದೆ ಎಂದು ಆಪಾದಿಸಿದ್ದಾರೆ. ಫಲಿತಾಂಶ ಘೋಷಣೆ ನಂತರ ಉತ್ತರ ನೈಜೀರಿಯಾದಲ್ಲಿ ಭಾರೀ ದಂಗೆಗಳು ನಡೆದಿವೆ. ನೈಜೀರಿಯಾದ ಉತ್ತರ ಭಾಗ ಮುಸ್ಲಿಂ ಬಹುಸಂಖ್ಯಾತವಾಗಿದ್ದು, ದಕ್ಷಿಣ ಭಾಗ ಕ್ರಿಶ್ಚಿಯನ್ ಬಹುಸಂಖ್ಯಾತವಾಗಿದೆ. ಅಧ್ಯಕ್ಷ ಜೋನೊಥಾನ್ ಕ್ರಿಶ್ಚಿಯನ್ನರಾಗಿದ್ದು, ಬುಹಾರಿ ಮುಸ್ಲಿಮರಾಗಿದ್ದಾರೆ. ಈಗ ನಡೆಯುತ್ತಿರುವುದು ಮತೀಯ ದಂಗೆಗಳು ಎಂದು ಸರ್ಕಾರಿ ವಲಯಗಳು ಆಪಾದಿಸಿದರೆ, ಅವು ಚುನಾವಣಾ ಅಕ್ರಮಗಳಿಗೆ ಪ್ರತಿಭಟನೆ ಎಂದು ವಿರೋಧಿಗಳ ಅಂಬೋಣ. ಜೋನೊಥಾನ್ ಹಿಂದಿನ ಅಧ್ಯಕ್ಷರು ಸತ್ತಾಗ ಹಂಗಾಮಿ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡಿದ್ದರು.

ಸುಡಾನ್ ದೇಶ ಇಭ್ಭಾಗ

ಆಫ್ರಿಕಾದ ಅತೀ ದೊಡ್ಡ ದೇಶ ಸುಡಾನ್. ಇತ್ತೀಚೆಗೆ ವಿಶ್ವಸಂಸ್ಥೆ ನಡೆಸಿದ ಜನಮತ ಸಂಗ್ರಹದಲ್ಲಿ ದಕ್ಷಿಣ ಭಾಗದ ಜನ ದೇಶವನ್ನು ಉತ್ತರ ಸುಡಾನ್ ಮತ್ತು ದಕ್ಷಿಣ ಸುಡಾನ್ ಎಂದು ಇಭ್ಭಾಗ ಮಾಡುವುದರ ಪರ ಭಾರಿ ಬಹುಮತ (ಶೇ.99) ಮೂಲಕ ನಿರ್ಧರಿಸಿದ್ದಾರೆ. ಸುಡಾನಿನ ಈಗಿನ ಸರ್ಕಾರ ಮತ್ತು ಆಳುವ ಪಕ್ಷ ಜನರ ಈ ನಿರ್ಧಾರವನ್ನು ಅಂಗೀಕರಿಸುವುದಾಗಿ ಒಪ್ಪಿದೆ. ದೀರ್ಘ ಆಂತರಿಕ ಯುದ್ಧದ ನಂತರ ಶಾಂತಿ ಮಾತುಕತೆಗಳಲ್ಲಿ ಜನಮತ ಸಂಗ್ರಹದ ಬಗ್ಗೆ ಒಪ್ಪಂದವಾಗಿತ್ತು. ತೈಲ ಸಂಪನ್ಮೂಲಗಳು ದಕ್ಷಿಣ ಸುಡಾನಿನಲ್ಲಿ ಇವೆ. ಅಮೆರಿಕ ದಕ್ಷಿಣ ಭಾಗದ ಪ್ರತ್ಯೇಕತಾ ಚಳುವಳಿಗೆ ಬೆಂಬಲ ನೀಡಿತ್ತು. ಸ್ವತಂತ್ರ ದಕ್ಷಿಣ ಸುಡಾನಿನಲ್ಲಿ ಅಮೆರಿಕ ಅದರ ಆಫ್ರಿಕಾಮ್ (ಆಫ್ರಿಕಾ ಕಮಾಂಡ್) ನ ಒಂದು ಮಿಲಿಟರಿ ನೆಲೆ ಸ್ಥಾಪಿಸಲು ಹವಣಿಸುತ್ತಿದೆ.

ಇದು ನಿಮಗೆ ಗೊತ್ತೆ ?

ಈ ದೇಶದ ಮಾಜಿ ಅಧ್ಯಕ್ಷ ಮಹಿಳೆಯ ಮೇಲೆ ಅತ್ಯಾಚಾರದ ಆಪಾದನೆ ಮೇಲೆ ಜೈಲಿಗೆ ಹೋಗಲಿದ್ದಾನೆ. ಮಾಜಿ ಪ್ರಧಾನಿಯ ಭ್ರಷ್ಟಾಚಾರದ ಆಪಾದನೆಯ ವಿಚಾರಣೆ ನಡೆಯುತ್ತಿದೆ. ವಿದೇಶ ಮಂತ್ರಿ ಕಪ್ಪು ಹಣ ಬಿಳಿಮಾಡಿದ ಅಪಾದನೆ ಎದುರಿಸುತ್ತಿದ್ದಾನೆ. ಒಂದು ಪ್ರಮುಖ ಬ್ಯಾಂಕಿನ ಮುಖ್ಯಸ್ಥನ ಮೋಸದ ಪ್ರಕರಣ ಬಗ್ಗೆ ವಿಚಾರಣೆ ನಡೆಯುತ್ತಿದೆ. ಮಿಲಿಟರಿ ಮತ್ತು ಪೋಲಿಸ್ ಸೇವೆಯಲ್ಲಿ ಉನ್ನತ ಸ್ಥಾನಗಳ ಬಡ್ತಿಗೆ ಅರ್ಹರಾದ ಹಲವು ಅಭ್ಯರ್ಥಿಗಳ ಅನೈತಿಕ ನಡವಳಿಕೆಯಿಂದ ಅವರನ್ನು ತಿರಸ್ಕರಿಸಲಾಯಿತು. ಇದು ಯಾವ ದೇಶ ಎಂದು ನಿಮಗೆ ಗೊತ್ತೆ ?

ಇದು ಯಾವುದೇ ಹಿಂದುಳಿದ ಆಫ್ರಿಕನ್ ಅಥವಾ ಲ್ಯಾಟಿನ್ ಅಮೆರಿಕನ್ ದೇಶವಲ್ಲ. ಇಸ್ರೇಲಿನ ದುರವಸ್ಥೆ ಇದು. ಪ್ಯಾಲೆಸ್ಟೈನ್ ಜನತೆಯ ಮಿಲಿಟರಿ ದಮನ ಮತ್ತು ಗೋಳಿನ ಮೇಲೆ ಕಟ್ಟಿದ ದೇಶದ ನೈತಿಕತೆ ಇನ್ನೇನು ಇದ್ದೀತು ?

ಪುಟ 13 ರಿಂದ

ಗೋದಾಮುಗಳಲ್ಲಿ

ಅಭ್ಯರ್ಥಿಯನ್ನು ಚುನಾವಣಾ ಅಧಿಕಾರಿಗಳ ಮೇಲೆ ಹಲ್ಲೆ ನಡೆಸಿದ ಆಪಾದನೆಯ ಮೇಲೆ ಸಾರ್ವಜನಿಕ ಸಭೆಯಲ್ಲಿಯೇ ಬಂಧಿಸಲಾಯಿತು. ಆ ಸಭೆಯನ್ನುದ್ದೇಶಿಸಿ ತೃಣಮೂಲ ಮುಖ್ಯಸ್ಥೆಯೇ ಮಾತಾಡಿದ್ದರು. ಎಪ್ರಿಲ್ 12ರಂದು ಚುನಾವಣಾ ಆಯೋಗ ಈತ ಮತ್ತು ಇನ್ನೂ 10 ಜನರ ಮೇಲೆ ಚುನಾವಣಾ ಆಯೋಗ ನೇಮಿಸಿದ ತಂಡದ ಮೇಲೆ ಹಲ್ಲೆ ನಡೆಸಿದ್ದಾರೆಂದು ಎಫ್‌ಐಆರ್ ದಾಖಲಿಸಿತ್ತು. ಅಂದಿನಿಂದ ಆತ ತಲೆಮರೆಸಿಕೊಂಡಿದ್ದ. ಐದು ದಿನಗಳ ನಂತರ ಮಮತಾ ಬ್ಯಾನರ್ಜಿಯವರು ಮಾತನಾಡಿದ ಸಭೆಯಲ್ಲಿ ಹಾಜರಾದಾಗ ಆತನನ್ನು ಬಂಧಿಸಲಾಯಿತು. ಇದಕ್ಕೆ ಮೊದಲು ಚುನಾವಣಾ ಆಯೋಗ ಈತನನ್ನು ಬಂಧಿಸಲು ವಿಫಲನಾದುದಕ್ಕೆ ಸಂಬಂಧ ಪಟ್ಟ ಪೋಲಿಸ್ ಇನ್ಸ್‌ಪೆಕ್ಟರ್‌ನನ್ನು ಅಮಾನತು ಮಾಡಿತ್ತು.

* * *

ಆಮದು ಪರಮಾಣು ಸ್ಥಾವರದ ಗೀಳು ಮತ್ತು ಪೋಲೀಸ್ ಗೋಳೀಬಾರು!

ಮಹಾರಾಷ್ಟ್ರದ ರತ್ನಗಿರಿ ಜಿಲ್ಲೆಯ ಜೈತಪುರದಲ್ಲಿ ಸ್ಥಾಪಿಸಬೇಕೆಂದಿರುವ ಪರಮಾಣು ಸ್ಥಾವರಕ್ಕೆ ಸ್ಥಳೀಯ ಜನರು ಬಲವಾದ ಪ್ರತಿಭಟನೆ ಒಡ್ಡಿದರೂ, ಅದಕ್ಕಾಗಿ ಭೂಸ್ವಾಧೀನ ಕೊಡಲು ನಿರಾಕರಿಸಿದರೂ ಅದನ್ನು ನಿರ್ಲಕ್ಷಿಸುತ್ತಿರುವ ಕಾಂಗ್ರೆಸ್- ಎನ್‌ಸಿಪಿ ಸರಕಾರದ ವಿರುದ್ಧ ಪ್ರತಿಭಟಿಸುತ್ತಿದ್ದ ಜನಗಳ ಮೇಲೆ ಪೋಲೀಸರು ಗೋಳೀಬಾರು ನಡೆಸಿದ್ದಾರೆ. ಇದರಲ್ಲಿ ಒಬ್ಬರು ಅಸು ನೀಗಿದ್ದಾರೆ, ಹಲವರು ಗಂಭೀರವಾಗಿ ಗಾಯಗೊಂಡಿದ್ದಾರೆ.

ಇದು ಫ್ರೆಂಚ್ ಕಂಪನಿ ಅರೆವದಿಂದ ಆಮದು ಮಾಡಿಕೊಂಡು ಸ್ಥಾಪಿಸಲಿರುವ ಪರಮಾಣು ವಿದ್ಯುತ್ ಕೇಂದ್ರ. ಇದರಲ್ಲಿ ಬಳಸುವ ಇಪಿಆರ್ (ಯುರೋಪಿಯನ್ ಪ್ರೆಶರೈಸ್ಡ್ ರಿಯಾಕ್ಟರ್) ತಂತ್ರಜ್ಞಾನವನ್ನು ಇದುವರೆಗೆ ಎಲ್ಲೂ ಬಳಸಿಲ್ಲ. ಇದರ ವಿಶ್ವಾಸಾರ್ಹತೆ ಮತ್ತು ಸುರಕ್ಷಿತತೆಯ ಬಗ್ಗೆ ಸಂದೇಹಗಳಿವೆ. ಹೀಗಿರುವಾಗ, ಅದರಲ್ಲೂ ಜಪಾನಿನ ಅಣುಸ್ಥಾವರಗಳಲ್ಲಿ ಉಂಟಾಗಿರುವ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಮತ್ತು ಜನತೆಯ ಕಟು ವಿರೋಧದ ಹಿನ್ನೆಲೆಯಲ್ಲಿ ಇದನ್ನು ತಕ್ಷಣ ನಿಲ್ಲಿಸಬೇಕು ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಆಗ್ರಹಿಸಿದೆ. ಅಸು ನೀಗಿದವರ ಮತ್ತು ಗಾಯಗೊಂಡವರ ಕುಟುಂಬಗಳಿಗೆ ಸಾಕಷ್ಟು ಪರಿಹಾರ ಕೊಡಬೇಕು ಎಂದು ಅದು ಒತ್ತಾಯಿಸಿದೆ.

ಆದರೆ ಭಾರತದ ಪ್ರಧಾನ ಮಂತ್ರಿಗಳು ಜಪಾನಿನಲ್ಲಿ ಫುಕುಶಿಮ ಸ್ಥಾವರ ದುರಂತದ ನಂತರ ವಿಶ್ವಾದ್ಯಂತ ಪರಮಾಣು ಸ್ಥಾವರಗಳ ಬಗ್ಗೆ ಪುನರಾಲೋಚನೆ ನಡೆಯುತ್ತಿದ್ದರೂ ಪರಮಾಣು ಸ್ಥಾವರಗಳ ಆಮದಿನ ರಾಗ ಹಾಡುತ್ತಲೇ ಇದ್ದಾರೆ. ಮುಂದಿನ ಎರಡು ದಶಕಗಳಲ್ಲಿ 40,000 ಮೆಗವಾಟ್ ಅಣು ಸ್ಥಾವರಗಳನ್ನು ಆಮದು ಮಾಡಲು ಯುಪಿಎ-2 ಸರಕಾರ ನಿರ್ಧರಿಸಿದೆ.

ವಾಸ್ತವವಾಗಿ ಭಾರತಕ್ಕೆ ಆಮದು ಮಾಡಿದ ಅಣುಸ್ಥಾವರಗಳ ಅಗತ್ಯವೇ ಇಲ್ಲ. ಇವು ಹೊಸ ತಂತ್ರಜ್ಞಾನವನ್ನೂ ತರುವುದಿಲ್ಲ, ದೇಶದ ಜನತೆಗೆ ಆರ್ಥಿಕ ಪ್ರಯೋಜನಗಳನ್ನು ಕೂಡ ತರುವುದಿಲ್ಲ ಎನ್ನುತ್ತಾರೆ ಪ್ರಸಿದ್ಧ ಪರಮಾಣು ತಜ್ಞ ಡಾ. ಎ. ಗೋಪಾಲಕೃಷ್ಣನ್. ಇವುಗಳ ವಿಶ್ವಾಸಾರ್ಹತೆ ಮತ್ತು ಸುರಕ್ಷಿತತೆಯ ಬಗ್ಗೆ ಇನ್ನೂ ಭಾರತಕ್ಕೆ ಮಾತ್ರವಲ್ಲ, ಮುಂದುವರೆದ ದೇಶಗಳಿಗೂ ಗೊತ್ತಿಲ್ಲ. ಸ್ವದೇಶಿ ಅಣು ವಿದ್ಯುತ್ ತಂತ್ರಜ್ಞಾನ ನಮ್ಮಲ್ಲಿ ಇದೆ ಎಂಬುದನ್ನು ಸ್ವತ: ಪ್ರಧಾನಿಗಳೂ ಹೇಳುತ್ತಾರೆ. ಆದರೂ ಆಮದು ಸ್ಥಾವರಗಳ ಈ ಗೀಳು ಏಕೆ? ಇದು ಶುರುವಾದದ್ದು ಮನಮೋಹನ ಸಿಂಗ್ ಪ್ರಧಾನ ಮಂತ್ರಿಯಾದ ಮೇಲೆಯೇ, ಅದೂ ಭಾರತ-ಅಮೆರಿಕ ಸಾಮರಿಕ ಮೈತ್ರಿಯ ಭಾಗವಾಗಿ!

ಯುಪಿಎ ಸರಕಾರದ ಆಮದು ಕಾರ್ಯಕ್ರಮ ಒಂದು ಹುಚ್ಚು ಕಾರ್ಯಕ್ರಮ ಎನ್ನುತ್ತಾರೆ ಈ ವಿಜ್ಞಾನಿ. ಈ ಆಮದನ್ನು ಸಮರ್ಥಿಸಲು ನಮ್ಮ ಮುಂದಿನ ಪೀಳಿಗೆಗಳನ್ನು ಅಪಾಯಕ್ಕೆ ಒಡ್ಡಬೇಕೇ ಎಂದು ಅವರು ಪ್ರಶ್ನಿಸುತ್ತಾರೆ. ಪ್ರಧಾನ ಮಂತ್ರಿಗಳು, ಅವರ ಕಚೇರಿ(ಪಿಎಂಒ), ಅಣುಶಕ್ತಿ ಇಲಾಖೆ ಮತ್ತು ಪರಮಾಣು ವಿದ್ಯುತ್ ನಿಗಮ(ಎನ್‌ಪಿಸಿಐಎಲ್) ರೂಪಿಸುತ್ತಿರುವ ಈ ಬುದ್ಧಿಹೀನ ಪರಮಾಣು ವಿದ್ಯುತ್ ದಾರಿಗೆ ಇವರೆಲ್ಲ ಅಪರಾಧಿಗಳಾಗುತ್ತಾರೆ ಎಂದು ಅವರು ಎಚ್ಚರಿಸಿದ್ದಾರೆ.

ನಿನಗೆ ನೀನೇ ಬ್ರಹ್ಮ

ಆ ಬರಿಯ ಬೊಗಳೆಗಳ ನಂಬದಿರುವ ತಮ್ಮ
ನಿನಗೆ ನೀನೇ ನೋಡು ಬೇರಿಲ್ಲ ಬ್ರಹ್ಮ
ಸುಲಿಗೆ ಮಾಡಿದ ಹಣಕೆ ಬಲ್ಲೆಯಾ ಸತ್ಯ
ಗುಡಿ ಮಠದಿ ಕಚ್ಚಾಟ ನಡೆಯುತಿದೆ ನಿತ್ಯ

ಮಂದಿರ

ಮಂದಿರವ ಕಟ್ಟಿದರೆ ಎಲ್ಲರಿಗೆ ಅನ್ನ
ದೊರಕುವುದೇ ಉತ್ತರವ ಹೇಳಯ್ಯ ಅಣ್ಣ
ಹಾದಿಯೊಳು ಬೀದಿಯೊಳು ಮಠಗುಡಿಯು ಉಂಟು
ಸೂರಿರದ ಜನಗಳಿಗೆ ಯಾರಿಲ್ಲ ನಂಟು

- ವಿಡಂಬಾರಿ

ಪುಟ 12 ರಿಂದ

ಬಿಜೆಪಿ ದರ್ಬಾರ್



ತರಬೇತಿ ಗುತ್ತಿಗೆ ಪಡೆದದ್ದು 'ಟ್ಯಾಲಿ ಇಂಡಿಯಾ ಪ್ರೈವೇಟ್ ಲಿಮಿಟೆಡ್' ಕಂಪನಿ. ಕಾರ್ಯಪಡೆಯ ಐಜಿಪಿಯವರು ವರದಿ ನೀಡಿದ್ದು ಏಪ್ರಿಲ್ 8,2009 ರಂದು. ಅಂದರೆ ಎರಡು ವರ್ಷ ದಾಟಿತು ಇಲ್ಲಿಗೆ. ಇಲ್ಲಿಯವರೆಗೆ ಏನು ಕ್ರಮ ವಹಿಸಿದೆ ಸರ್ಕಾರ ಅಂತ ಕೇಳ್ತಿದೀರಾ ? ಅಯ್ಯೋ ನಿಮಗೆಲ್ಲೋ ಭ್ರಾಂತಿ. ಇದು ಬಿಜೆಪಿ ಸರ್ಕಾರ ಸ್ವಾಮಿ, ಬಿಜೆಪಿ ಸರ್ಕಾರ.

ಈ ಬಿಜೆಪಿ ದರ್ಬಾರ್‌ನಲ್ಲಿ ಯಾವುದೇ ಅಕ್ರಮಗಳ ಬಗೆಗೆ ಶಿಸ್ತು ಕ್ರಮ ತೆಗೆದುಕೊಂಡುಬಿಟ್ಟರೆ ಅದು ಈ ಸರ್ಕಾರ ಇದುವರೆಗೆ ಪಾಲಿಸಿಕೊಂಡು ಬಂದ ಪರಂಪರೆ, ಸಂಪ್ರದಾಯಕ್ಕೆ ಅಪಮಾನ ಮಾಡಿದಂತಾಗುತ್ತದೆ ಅಷ್ಟೆ. ಪರಂಪರೆ ಸಂಪ್ರದಾಯಕ್ಕೆ ಬಿಜೆಪಿ ಸರ್ಕಾರದಿಂದ ಅಪಚಾರವಾಗುವುದನ್ನ ನಿರೀಕ್ಷಿಸಬಹುದೇ. ಛೇ. ಛೇ. ಎಂದಾದರೂ ಉಂಟೆ !!!

ಇದರಲ್ಲಿ ಯಾವ ವ್ಯಂಗ್ಯ, ತಮಾಷೇನೂ ಇಲ್ಲ. ಸೀರಿಯಸ್ ಆಗೇ ಈ ಮಾತು ಹೇಳ್ತಾ ಇರೋದು. ಈ ಮಾತಿಗೆ ಇನ್ನೂ ಸಮರ್ಥನೆ ಬೇಕಾ ? ರಾಜ್ಯದ ಗಣಿ ಹಗರಣಗಳ ಪ್ರಕರಣದ ಕುರಿತ ಸಿ.ಇ.ಸಿ ವರದಿ ನೋಡಿ.

* * *

ಗಣಿ ತೋಡಿದ್ದ ಹಳ್ಳ ಮುಚ್ಚಿದರು - ತಿಪ್ಪೆ ಸಾರಿಸಿದರು

ಮೊನ್ನೆ ತಾನೆ ಸುಪ್ರೀಂ ಕೋರ್ಟಿನ ಸಿಇಸಿಯು ರಾಜ್ಯದಲ್ಲಿ ನಡೆದಿರುವ ಅಕ್ರಮ ಗಣಿಗಾರಿಕೆ ಬಗೆಗೆ ವರದಿ ಕೊಟ್ಟಿದೆ ನೋಡಿ. ಏನು ಹೇಳಲಾಗಿದೆ ಅದರಲ್ಲಿ, (ವಿವರವಾದ ಪ್ರತ್ಯೇಕ ಲೇಖನ ಇದೇ ಸಂಚಿಕೆಯ ಪುಟ 9 ರಲ್ಲಿದೆ. ಓದಿ.) 2008 ರಲ್ಲೇ ಲೋಕಾಯುಕ್ತರು ರಾಜ್ಯದಲ್ಲಿ ನಡೆದಿರುವ ಅಕ್ರಮ ಗಣಿಗಾರಿಕೆ ಗುರುತಿಸಿ ಇಂತಿಂಥವರನ್ನು ಶಿಕ್ಷಿಸಿ, ಇಂತಿಂಥವರ ವಿರುದ್ಧ ಕ್ರಮ ಕೈಗೊಳ್ಳಿ ಅಂತ ವರದಿ ಕೊಟ್ಟಿದ್ದಾರೆ. ಆದರೆ ಸರ್ಕಾರ ಯಾರನ್ನು ಶಿಕ್ಷಿಸಿದ ಉದಾಹರಣೆಯೇ ಇಲ್ಲ. ಬದಲಿಗೆ ಅಪರಾಧಿಗಳ ಅಪರಾಧವನ್ನೇ ಮರೆಮಾಚಿದೆ. ಅಲ್ಲದೇ ಸರ್ಕಾರ ಅವರನ್ನು ರಕ್ಷಿಸಲು ಬಹಳವಾಗಿ ಶ್ರಮಿಸಿದೆ ಅಂದಿದೆ ಸಿಇಸಿ ವರದಿ. ಇನ್ನು ಏನಾದರೂ ಉದಾಹರಣೆ ಬೇಕಾ, ಇದಿಷ್ಟೆ ಸಾಕಾ.

* * *

ಸವಣೂರು ಭಂಗಿಗಳ ಬದುಕು ಇಂದಿಗೂ ಭಗ್ನ

ಸವಣೂರು ಅಂದ ತತ್‌ಕ್ಷಣ ಈಗ ನಮ್ಮ ಮನಸ್ಸಿಗೆ ಬರುವುದೇನು? ಮೈಮೇಲೆ ಮಲವನ್ನು ಸುರಿದುಕೊಂಡು ಪ್ರತಿಭಟಿಸಬೇಕಾದ ಹೀನಾಯದ ಹತಾಶಾ ಸ್ಥಿತಿಗೆ ತಳ್ಳಲ್ಪಟ್ಟ ದಲಿತ, ಭಂಗಿ ಸಮುದಾಯ ಜನರ ದಾರುಣ ಬದುಕು.

ಹಾವೇರಿ ಜಿಲ್ಲೆಯ ಸವಣೂರು ಪಟ್ಟಣದಲ್ಲಿ ತಲೆಯ ಮೇಲೆ ಸವರ್ಣೀಯ ಜನರ ಮಲ ಹೊರುತ್ತಾ ಬದುಕು ಸವೆಸುತ್ತಾ ಬರುತ್ತಿದ್ದ ದಲಿತ ಕುಟುಂಬಗಳು ಕಳೆದ 80 ವರ್ಷಗಳಿಂದ ವಾಸಿಸುತ್ತಾ ಬರುತ್ತಿದ್ದ ಮನೆ ನಿವೇಶನದ ಹಕ್ಕು ಕಿತ್ತುಕೊಂಡು ಅವರನ್ನು ಬೀದಿಗೆ ತಳ್ಳಲು ಅಲ್ಲಿನ ಬಿಜೆಪಿ ನೇತೃತ್ವದ ಪುರಸಭೆ ಆಡಳಿತ ಹೊರಟಿತ್ತು. ಮನೆ ಖಾಲಿ ಮಾಡುವಂತೆ ಆಡಳಿತ ನೀಡಿದ ಕಿರುಕುಳ ತಾಳದ ಭಂಗಿ ಜನರು ಕಂಡುಕೊಂಡದ್ದು ಒಂದು ಆಘಾತಕಾರಿ ಪ್ರತಿಭಟನಾ ವಿಧಾನ. ಅದು ಜುಲೈ 10, 2010.

ಪ್ರತಿಭಟನೆ ಸುದ್ದಿಯಾದದ್ದೇ ಕ್ಷೇತ್ರದ ಶಾಸಕರು, ಸಂಸದರು (ಎಲ್ಲರೂ ಬಿಜೆಪಿ) ಎಲ್ಲರೂ ನುಗ್ಗಿ ಬಂದರು. ಸಂಪೂರ್ಣ ಪುನರ್ವಸತಿಯ ಭವ್ಯ ಭರವಸೆಗಳು ಹರಿದುಬಂದವು. ಇಂದು ಏಪ್ರಿಲ್ 22, 2011 ಇನ್ನೇನು ವರುಷ ಸಮೀಪ ಆಗುತ್ತಿದೆ. ಏನಾಗಿದೆ ಈ ದಲಿತರ ಬದುಕು ನೋಡಿ.

ಒಂಭತ್ತು ಜನರಿಗೆ ಖಾಯಂ ಉದ್ಯೋಗದ ಭರವಸೆ ನೀಡಲಾಗಿತ್ತು. ಯಾರಿಗೂ ಖಾಯಂ ಉದ್ಯೋಗ ದೊರಕಿಲ್ಲ: ತಿಂಗಳಿಗೆ ಅಮೋಘ 3,000 ರೂಪಾಯಿಗಳ ವೇತನ ಗುತ್ತಿಗೆ ಆಧಾರಿತ ಕೆಲಸವಷ್ಟೇ ಅವರಿಗೆ ದಕ್ಕಿರುವುದು.

ಪ್ರತಿಭಟನೆಯ ಬೆನ್ನ ಹಿಂದೆಯೇ ಅವರಿಗೆ ಮನೆಗಳನ್ನು ನೀಡಲಾಗಿದೆ. ಆದರೆ ಆ ಮನೆಗಳ ಗೋಡೆಗಳು ಬಿರುಕುಬಿಟ್ಟಿವೆ. ನೀರು ಸೋರುತ್ತದೆ. ಕುಟುಂಬಗಳಿಗೆ ತಲಾ ಒಂದು ಹಸು ಮತ್ತು ಕುರಿಯನ್ನು ನೀಡಲಾಯಿತಂತೆ. ಪಾಪ ಆಗ ಅದಕ್ಕಾಗಿ ತಿಂಗಳು, ತಿಂಗಳು ಕಂತುಗಳಲ್ಲಿ ಹಣ ತುಂಬಬೇಕೆಂಬ ಕಲ್ಪನೆಯೇ ಭಂಗಿ ಜನರಿಗೆ ಇರಲಿಲ್ಲವೇನೋ. ಸಿಗುವ ಮೂರು ಸಾವಿರ ರೂಪಾಯಿಯಲ್ಲಿ ಕಂತು ತುಂಬಿ ಏನು ಉಳಿಯುತ್ತದೆ ಕೈಯಲ್ಲಿ ಎಂದು ಅವರೀಗ ಹುಡುಕಾಡುತ್ತಿದ್ದಾರೆ.

ತಾವು ವಾಸವಿದ್ದ ಮೂಲ ನಿವೇಶನದಲ್ಲಿ ಪುರಸಭೆ ನಿರ್ಮಿಸಲು ಉದ್ದೇಶಿಸಿ ವಾಣಿಜ್ಯ ಸಂಕೀರ್ಣದ ಯೋಜನೆ ಕೈಬಿಟ್ಟು ತಮ್ಮ ಮನೆಗಳಿಗೆ ಹಕ್ಕು ಪತ್ರ ಕೊಡಬೇಕು. ನೀರು, ಚರಂಡಿ ಸೌಕರ್ಯ ಒದಗಿಸಬೇಕು ಎಂಬುದು ಪ್ರತಿಭಟನೆಯ ಮುಖ್ಯ ಬೇಡಿಕೆಯಾಗಿತ್ತು. ಈ ಭಂಗಿಗಳ ಆಸೆ ಕನಸಿನ ಗಂಟಾಗಿಯೇ ಉಳಿಯಿತು.

ಈ ಮನುವಾದಿಗಳು

ಬೌದ್ಧ ಧರ್ಮವ ಮುಗಿಸೆ ಹೊರಟವರು ಯಾರು
ಈ ಮನುವಾದಿಗಳೇ ನೂರಕ್ಕೆ ನೂರು
ಎಲ್ಲರೂ ಉಣ್ಣುವುದ ಕಂಡರೇ ಸಿಡುಕು
ಹೀಗಾಗಿ ಈ ಜನಕೆ ಸಮಾನತೆ ತೊಡಕು


- ವಿಡಂಬಾರಿ

JANASHAKTHI KANNADA VARA PATRIKE MAY 01, 2011 Price : Rs. 5/- RNI No. KARKAN /2006/17926 Posted on every Satuarday Postal Reg. No. RNP/KA/BGS/2078/2010-12
Posted at MBC Bangalore GPO

ಮಕ್ಕಳ ರವೀಂದ್ರ

ರಂಗದ ಮೇಲೆ ಕುಣಿದು ಕುಪ್ಪಳಿಸಿದ ಮಕ್ಕಳು

■ ವಸಂತರಾಜ ಎನ್.ಕೆ



....ಮಹಾನ್ ಶಿಕ್ಷಕಳಾದ ಪ್ರಕೃತಿಯನ್ನು ಮಾನವ ಶಿಕ್ಷಕ ಪ್ರತಿ ಹೆಜ್ಜೆಯಲ್ಲೂ ಹತ್ತಿಕ್ಕಲು ಪ್ರಯತ್ನಿಸುತ್ತಾನೆ. ಆತನಿಗೆ ಜೀವನದ ಪಾಠಗಳಿಗಿಂತ ಯಾಂತ್ರಿಕ ಪಾಠಗಳಲ್ಲಿ ಹೆಚ್ಚು ನಂಬಿಕೆ. ಆದರಿಂದ ಮಕ್ಕಳ ಮನಸ್ಸಿಗೆ ಘಾಸಿಯಾಗಿ ಹಾಳಾಗುತ್ತದೆ. ಮಕ್ಕಳು ಅದ್ಭುತ ಶೈಕ್ಷಣಿಕ ಮೌಲ್ಯ ಹೊಂದಿರುವ ಪ್ರಾಕೃತಿಕ ವಾತಾವರಣದಲ್ಲಿ ಇರಬೇಕು. ಮಕ್ಕಳು ಇಂದಿನ ಜೀವನದಲ್ಲಿ ನಡೆಯುವ ಎಲ್ಲಾ ವಿದ್ಯಮಾನಗಳ ಬೆಡಗನ್ನು ತಾವೇ ಎಡವುತ್ತಾ ಕಂಡುಕೊಂಡು ಬೆರಗಾಗಲು ಬಿಡಬೇಕು. ಹೊಸ ನಾಳೆಗಳು ಇನ್ನಷ್ಟು ಹೊಸ ಜೀವನ ಸತ್ಯಗಳ ಕಡೆಗೆ ಗಮನ ಸೆಳೆಯುವಂತೆ ಉತ್ತೇಜಿಸಬೇಕು.





ಹೆಚ್ಚು ಪರಿಚಯವಿಲ್ಲದ ರವೀಂದ್ರನಾಥ್ ಟಾಗೋರ್ ಮುಖ

ರವೀಂದ್ರನಾಥ ಟಾಗೋರ್ ಅವರ ಸಾಹಿತ್ಯ, ವ್ಯಕ್ತಿತ್ವ, ಸಾಧನೆಗಳ ಪೂರ್ಣ ಪರಿಚಯವೇ ನಮಗೆ - ಕನ್ನಡದ ಓದುಗರಿಗೆ - ಇಲ್ಲ. ಅರ್ಥವಾಗದ 'ಗೀತಾಂಜಲಿ' ಯ 'ಆಧ್ಯಾತ್ಮಿಕ ಕಾವ್ಯ' ಮತ್ತು 'ಜನಗಣಮನ' ಬರೆದ 'ಋಷಿಕವಿ' ಎಂಬುದು ಸಾಮಾನ್ಯವಾದ ಅಭಿಪ್ರಾಯ. ಇನ್ನು ಟಾಗೋರ್ ಬರೆದ ಮಕ್ಕಳ ಸಾಹಿತ್ಯದ ಪರಿಚಯವಂತೂ ಕರ್ನಾಟಕದಲ್ಲಿ - ಮಾತ್ರವಲ್ಲ ಬಂಗಾಳದ ಹೊರಗೆ ಎಲ್ಲೂ - ದೂರದ ಮಾತು. ಟಾಗೋರ್ 150 ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ, ಅವರನ್ನು ಹೆಚ್ಚು ಸಮಗ್ರವಾಗಿ ಅರ್ಥ ಮಾಡಿಕೊಳ್ಳುವ ಪ್ರಯತ್ನದ ಭಾಗವಾಗಿ ಸಮುದಾಯ ಸಂಘಟಿಸಿದ ಟಾಗೋರ್-150 ಉತ್ಸವದಲ್ಲಿ ಪ್ರದರ್ಶಿತವಾದ 'ಮಕ್ಕಳ ರವೀಂದ್ರ' ನಾಟಕ, ಈ ಕೊರತೆಯನ್ನು ನೀಗುವತ್ತ ದೊಡ್ಡ ಹೆಜ್ಜೆ ಇಟ್ಟಿದೆ.

ಉತ್ತರ ಕನ್ನಡದ ಚಿಂತನ ರಂಗ ಅಧ್ಯಯನ ಕೇಂದ್ರ ರೂಪಿಸಿ ಪ್ರದರ್ಶಿಸಿದ, ಡಾ.ಶ್ರೀಪಾದ ಭಟ್ ರಚಿಸಿದ 'ಮಕ್ಕಳ ರವೀಂದ್ರ' ಟಾಗೋರ್ ಮಕ್ಕಳಿಗಾಗಿ ಬರೆದ ಐದು ಕೃತಿಗಳನ್ನು ರಂಗದ ಮೇಲೆ ಪ್ರಸ್ತುತ ಪಡಿಸುತ್ತದೆ. ಟಾಗೋರ್ ಮಕ್ಕಳಿಗಾಗಿ ಕಥೆ, ಕವನ, ನಾಟಕ, ಪತ್ರ ಇನ್ನೂ ಎಷ್ಟೋ ವರ್ಗೀಕರಿಸಲು ಆಗದ ಪ್ರಕಾರಗಳಲ್ಲಿ ಕೃತಿಗಳನ್ನು ಸೃಷ್ಟಿಸಿದ್ದಾರೆ. ಅವರ ಹಲವು ಮಕ್ಕಳ ಕವನಗಳು ಕಥೆ ಹೇಳುತ್ತವೆ. ಇಲ್ಲಿ ಬಳಸಿದ 'ಶೂ ನ ಆವಿಷ್ಕಾರ', 'ಹುಲಿ' ಎರಡು ಕಥನ-ಕವನಗಳು. 'ವಿನಾಶ' ಮತ್ತು 'ತಾತನ ರಜ' ಕಥೆಗಳು. 'ಮಕ್ಕಳ ರವೀಂದ್ರ' 'ತಾತನ ರಜ' ದಿಂದ ಆರಂಭವಾಗಿ, ಉಳಿದ ಕಥನ-ಕವನ, ಕಥೆ, ಕವನಗಳ ರಂಗ ರೂಪ ಅದರ ಭಾಗವೇನೋ ಎಂಬಂತೆ ಸುಲಲಿತವಾಗಿ ಸೋಡಿಸಿಕೊಂಡು ಹೋಗುತ್ತವೆ. ರವೀಂದ್ರರ ಮಕ್ಕಳ ಹೊಸ ಲೋಕ ತೆರೆಯುತ್ತಾ ಹೋಗುತ್ತದೆ. ಅಲ್ಲಿ ಮಕ್ಕಳ ಮಾತು, ಕಥೆ, ಹಾಡು, ಕುಣಿತ ಒಂದು ಕಡೆ; ಖುಷಿ, ನೀತಿ, ಅರಿವು ಇನ್ನೊಂದು ಕಡೆ - ಒಂದರಲ್ಲೊಂದು ಹಾಸು ಹೊಕ್ಕಾಗಿ ಯಾವುದು ಭಾರವಾಗದೆ ಆಸಕ್ತಿಯುತವಾಗಿ ಮುಂದುವರೆಯುತ್ತವೆ.

"ಗಾಂಧೀಜಿ ಹೇಳಿದ ಹರಿಜನ ಮಾರಾಯ ನಾನು..."

ರವೀಂದ್ರರ ಮಕ್ಕಳ ಲೋಕದಲ್ಲಿ- ಇತರ ಲೇಖಕರು ಸೃಷ್ಟಿಸುವ ಮಕ್ಕಳ ಲೋಕದಂತೆ - ಎಲ್ಲವೂ ಬರಿಯ ಖುಷಿ-ಖುಷಿಯಾಗಿ ಮಾತ್ರ ಇಲ್ಲ. 'ದೊಡ್ಡವರ' ಲೋಕದ ದುಃಖ, ಕಷ್ಟ, ದುಷ್ಟತನ, ಮೋಸ, ತಿಕ್ಕಲುತನ, ದುರಂತಗಳನ್ನು 'ಸೆನ್ಸಾರ್' ಮಾಡಲಾಗಿಲ್ಲ. ಅಸಮಾನತೆಯ ಹಲವು ಮುಖಗಳು, ಅದರ ಪರಾಕಾಷ್ಠೆಯಾದ ಅಸ್ಪೃಶ್ಯತೆ, ಹೂತೋಟಗಳನ್ನು ಹೊಸಕಿ ಹಾಕುವ ಬಾಂಬುಗಳ ವಿನಾಶಕಾರಿ ಯುದ್ಧ, ಜೀವನದ ಸಂಕೀರ್ಣತೆ, ಆವಿಷ್ಕಾರದ ವಿಸ್ಮಯಗಳು - ಎಲ್ಲವೂ ಇವೆ. ಆದರೆ ಅವು ಮಕ್ಕಳು ಆಸಕ್ತಿಯಿಂದ ಸ್ವಾಭಾವಿಕವಾಗಿ ಗ್ರಹಿಸುವ ರೂಪದಲ್ಲಿವೆ.

ಹುಲಿಯ ಬಾಯಿಂದ ತಪ್ಪಿಸಿಕೊಳ್ಳಲು ಕೆಲಸದ ಹುಡುಗ 'ನಾನು ಅಸ್ಪೃಶ್ಯ... ಗೊತ್ತಾಗಲಿಲ್ವಾ... ಗಾಂಧೀಜಿ ಹೇಳಿದ ಹರಿಜನ ಮಾರಾಯ ನಾನು...ನನ್ನ ಮುಟ್ಟಲೂ ಬಾರದು..ತಿನ್ನುವುದು ಹೇಗೆ' ಅಂತ ಹೇಳಿ ಕನ್ಫ್ಯೂಸ್ ಮಾಡುತ್ತಾನೆ. ದುಡಿಯುವ ಚಮ್ಮಾರನಿಗೆ ಇರುವ 'ಕಾಮನ್ ಸೆನ್ಸ್', ರಾಜನ ಆಸ್ಥಾನದ ಪಂಡಿತವರ್ಯರಿಗೆ ಇಲ್ಲ. ರಾಜನ ಕಾಲು ಧೂಳಾಗದಂತೆ ಪಂಡಿತರು ರೂಪಿಸಿದ ಹಾಸ್ಯಾಸ್ಪದ ಯೋಜನೆಗಳೆಲ್ಲಾ ವಿಫಲವಾದ ಮೇಲೆ, ಇಡೀ ರಾಜ್ಯಕ್ಕೆ ಚರ್ಮ ಹೊದಿಸುವ ಇನ್ನೂ ಹಾಸ್ಯಾಸ್ಪದವಾದ ಯೋಜನೆ ಜಾರಿಯ ಭಾರ ಹೊತ್ತ ಚಮ್ಮಾರ ಶೂ ನ ಆವಿಷ್ಕಾರ ಮಾಡುವ ಬಗೆ ಅತ್ಯಂತ ಕುತೂಹಲಕಾರಿಯಾಗಿ ಮೂಡುತ್ತದೆ. ಅದೂ ಬೆಳಿಗ್ಗೆ ಆಗುವುದರೊಳಗೆ ಇಡೀ ರಾಜ್ಯಕ್ಕೆ ಚರ್ಮ ಹೊದಿಸಬೇಕು ಇಲ್ಲವೆ ತಲೆ ಹಾರೀತು ಎಂಬ ರಾಜಾಜ್ಞೆಯ ಒತ್ತಡದಲ್ಲಿ. ಇಲ್ಲಿ ಉಳ್ಳವರ ಪೆದ್ದುತನ, ದುಡಿಯುವವರ ಸೃಜನಶೀಲತೆ, ಅಗತ್ಯವೇ ಆವಿಷ್ಕಾರದ ಜನನಿ ಎಂಬ ನೀತಿ, ಆವಿಷ್ಕಾರದ ಬಗೆಯ ವಿಸ್ಮಯ - ಎಲ್ಲವೂ ಸಹಜವಾಗಿ ಬಂದಿದೆ.

ಟಾಗೋರರ ಮಕ್ಕಳ ಕೃತಿಗಳ ಸಮಗ್ರ ಝಲಕ್

ರವೀಂದ್ರರ ಮಕ್ಕಳ ಅದ್ಭುತ ಲೋಕದ ವಿಶಿಷ್ಟತೆ, ವೈವಿಧ್ಯತೆ, ಸಹಜ ಸೌಂದರ್ಯವನ್ನು ಪ್ರಾತಿನಿಧಿಕವಾಗಿ ಸೆರೆ ಹಿಡಿಯುವ 'ಮಕ್ಕಳ ರವೀಂದ್ರ' ದ ಪರಿಕಲ್ಪನೆ (ಡಾ.ಶ್ರೀಪಾದ ಭಟ್) ಮತ್ತು ರಂಗ ಪಠ್ಯ (ಸುಧಾ ಆಡುಕಳ) ಅದರ ಮೊದಲ ಹೆಗ್ಗಳಿಕೆ. ಅದನ್ನು ರಂಗದ ಮೇಲೆ ತಂದ ಸುಂದರ ಕಲೆಗಾರಿಕೆ ಇನ್ನೊಂದು ವಿಶೇಷತೆ. ಎರಡೂ ಅತ್ಯಂತ ಸಹಜವಾಗಿ ಮೇಳವಿಸಿ ಅದು ಒಂದು ಅದ್ಭುತ ಅನುಭವ ನೀಡುತ್ತದೆ. ರಂಗದ ಮೇಲೆಲ್ಲಾ ಕುಣಿದು ಕುಪ್ಪಳಿಸಿದ ಶಿರಸಿ ಸರ್ಕಾರಿ ಶಾಲೆಯ ಮಕ್ಕಳು ಮತ್ತು ಇತರ ನಟರ ಸ್ವಾಭಾವಿಕ ಅಭಿನಯ, ನಾವು ಯಾವುದೋ ಮಕ್ಕಳ 'ಸಮ್ಮರ್ ಕ್ಯಾಂಪು' 'ಲೈವ್' ಆಗಿ ನೋಡುತ್ತಿದ್ದೇವೋ (ಬಹುಶಃ ಸಮ್ಮರ್ ಕ್ಯಾಂಪುಗಳೂ ಇಷ್ಟು ಲೈವ್ಲಿ ಇಲ್ಲ!) ಎಂಬಂತಿತ್ತು. ಅತ್ಯಂತ ಸೃಜನಶೀಲ ಆದರೆ ಅಷ್ಟೇ ಸರಳವಾದ ರಂಗ ಪರಿಕರಗಳು (ದಾಮೋದರ ನಾಯ್ಕ), ಇಂಪಾದ ಹಾಡುಗಳು-ಸಂಗೀತ (ಡಾ.ಶ್ರೀಪಾದ ಭಟ್), ಸಶಕ್ತ ನಿರ್ದೇಶನ (ಕಿರಣ ಭಟ್ ಮತ್ತು ಡಾ.ಶ್ರೀಪಾದ ಭಟ್) ವನ್ನು ಮರೆಯುವಂತಿಲ್ಲ. ಹಾಡುಗಳು ರೆಕಾರ್ಡ್ ಆಗಿದ್ದವು. ಮೇಳದ 'ಲೈವ್' ಆಡುಗಳಾಗಿರಲಿಲ್ಲ ಎಂಬುದು ಒಂದೇ ಕೊರತೆ.

ಟಾಗೋರರ ಮಕ್ಕಳ ನಾಟಕಗಳನ್ನು ಇಲ್ಲಿ ಬಳಸಿಲ್ಲ ಎಂದು ಗಮನಿಸಬೇಕು. ಆದರೂ ಅವರ ಮಕ್ಕಳ ಕೃತಿಗಳ ಅತ್ಯಂತ ಉತ್ತಮ ಮತ್ತು ಸಮಗ್ರ ಜುಲಕ್ ಕೊಡುವಲ್ಲಿ 'ಮಕ್ಕಳ ರವೀಂದ್ರ' ನೂರಕ್ಕೆ ನೂರರಷ್ಟು ಯಶಸ್ವಿಯಾಗಿದೆ. ಮಾತ್ರವಲ್ಲ ಮಕ್ಕಳ ನಾಟಕ ಹೇಗಿರಬೇಕು ಎಂಬುದರ ಬಗೆಗೂ ಮಾದರಿಯಾಗಿದೆ: ಇದು ಈಗಾಗಲೇ ಎರಡು-ಮೂರು ಕಡೆ (ಬೆಂಗಳೂರು, ಕುಂದಾಪುರ ಇತ್ಯಾದಿ) ಪ್ರದರ್ಶನ ಕಂಡಿದೆ. ಅದನ್ನುಇಡೀ ಕರ್ನಾಟಕದ ಮಕ್ಕಳು ಸವಿಯುವಂತಾಗ ಬೇಕು. ಕನಿಷ್ಟ ಮುಂದಿನ ಪೀಳಿಗೆಯಾದರೂ ರವೀಂದ್ರರ ಸಮಗ್ರ ಮತ್ತು ಸರಿಯಾದ ಪರಿಚಯ ಪಡೆಯಬಾರದೇ ?

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana,12,18th Cross, S.R.Nagar, BANGALORE - 560 027 Karnataka (State) and Published at BANGALORE
No 12.18th Cross, S.R.Nagar, BANGALORE-560027 Editor S.Y.GURURSHANTH, No12 18th Cross, S.R.Nagar, BANGALORE - 560027
Editor: S.Y.GURUSHANTH